ಶ್ರೀ ಮುದ್ದುರಾಮಯ್ಯ.—ನಮ್ಮ ಕೊರಟಗೆರೆ ತಾಲ್ಲೂಕಿನಲ್ಲಿ ೧೫ ಲಕ್ಷ ರೂಪಾಯಿಗಳಷ್ಟು ಕೆಲಸವಾಗಿದೆ. ಈ ಯವರೆಗೆ ಎರಡೂಕಾಲು ಲಕ್ಷ ರೂ ಗಳಷ್ಟು ಆಹಾರಧಾನ್ಯವನ್ನು ಅಲ್ಲಿಗೆ ಸರಬರಾಜು ಮಾಡಲಾಗಿದೆ. ಇದು ಸಾಲದು, ಇನ್ನೂ ಹೆಚ್ಚು ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ? ಅಲ್ಲಿ ೧೫ ಲಕ್ಷ ರೂಪಾಯಿಗಳಷ್ಟು ಕೆಲಸವಾಗಿದೆ. ಆ ಭಾಗಕ್ಕೆ ಇನ್ನಷ್ಟು ದುಡ್ಡನ್ನು ಬಿಡುಗಡೆ ಮಾಡಿ ಜನರಿಗೆ ಕೆಲಸ ಒದಗಿಸುವುದು ಅಗತ್ಯವಿದೆ ಎಂದು ಹೇಳುತ್ತೇನೆ. ಅಲ್ಲಿನ ಜಿಲ್ಲಾಧಿಕಾರಿಯವರು ಶಿರಾಕ್ಕೆ ಕೊಟ್ಟ ಆಹಾರ ಧಾನ್ಯವನ್ನು ಕೊರಟಗೆರೆಗೆ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಒಟ್ಟಿನಲ್ಲಿ ಅಲ್ಲಿಗೆ ಹೆಚ್ಚಿನ ಆಹಾರಧಾನ್ಯವನ್ನು ಒದಗಿಸಿ ಜನರಿಗೆ ಸಹಾಯ ಮಾಡುತ್ತೀರಾ ಎಂದು ಕೇಳುತ್ತೇನೆ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಏನೆಂದರೆ, ನಮಗೆ ಹಣದ ಕೊರತೆ ಇಲ್ಲ ಆಹಾರದ ಕೊರತೆ ಇಲ್ಲ ಎಂದು. ನನ್ನ ವರದಿಯ ಪ್ರಕಾರ ಅಲ್ಲಿ ಅಧಿಕಾರಿಗಳಿಂದ ಕರ್ತವ್ಯ ಲೋಪವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಒಂದು ವೇಳೆ ಅಲ್ಲಿ ಆಹಾರದ ಕೊರತೆ ಏನಾದರು ಇದ್ದರೆ, ಅದನ್ನು ಒದಗಿಸುವುದಕ್ಕೆ ನಾನು ತಯಾರಿದ್ದೇನೆ.

Budget Estimates for 1979-80 Demands for Grants

Demand Nos : 27 and 28

SRI M. MALLAPPA (Minister for Health).—Sir, On the recommendation of the Governor I beg to move:

"That a sum not exceeding Rs. 46, 68, 05,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 27 "Medical Services and Family Welfare".

"That a sum not exceeding Rs. 11,83,75,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 28 "Public Health and Sanitation".

The question was proposed

MR. SPEAKER.—Both the Demands are before the House for discussion,

SRI A. LAKSHMI SAGAR.—I rise on a point of order. ಇಂದು ಆರೋಗ್ಯ ಇಲಾಖೆಯ ಮೇಲಿನ ಚರ್ಚೆ ನಡೆಯಬೇಕಾಗಿದೆ. ಆಯಾ ಇಲಾಖೆಗಳ ಮೇಲಿನ ಬೇಡಿಕೆಗಳ ಚರ್ಚೆ ಇಲ್ಲಿ ನಡೆಯುವಾಗ ಆ ಇಲಾಖೆಗಳಿಗೆ ಸಂಬಂಧಪಟ್ಟ ವರದಿಗಳನ್ನು ತಯಾರಿಸಿ ನಮಗೆ ಮೊದಲೇ ಕೊಡುತ್ತಿದ್ದಾರೆ. ಆದರೆ ಈ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ವರದಿಯನ್ನು ನೆನ್ನೆ ರಾತ್ರಿ ಕಳುಹಿಸಿಕೊಟ್ಟಿದ್ದಾರೆ. ನೆನ್ನೆ ದಿವಸ ಸಭೆ ಮುಕ್ತಾಯವಾದಾಗ ಏಳೂಮುಕ್ಕಾಲು ಗಂಟೆಯಾಗಿತ್ತು. ನೆನ್ನೆ ರಾತ್ರಿ ಎರಡು ದೊಡ್ಡ ಹೊತ್ತಿಗೆಗಳನ್ನು ಸದಸ್ಯರಿಗೆ ಹಂಚಿದರೆ, ಅದನ್ನೆಲ್ಲಾ ಅವರು ಅಭ್ಯಾಸ ಮಾಡುವುದು ಯಾವಾಗ? ಓದುವುದು ಯಾವಾಗ? ಇಷ್ಟೊಂದು ಅಲ್ಪ ಸಮಯದಲ್ಲಿ ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಅರ್ಥವತ್ತಾಗಿ ಮತ್ತು ಪರಿಣಾಮಕಾರಿಯಾಗಿ ಮಾತನಾಡಲು ಹೇಗೆ ಸಾಧ್ಯವಾಗುತ್ತದೆ? ಆದಕಾರಣ ವರದಿಗಳನ್ನು ಮೊದಲೇ ಅಚ್ಚು ಹಾಕಿಸಿ ಕೊಡಬೇಕೆಂದು ಹೇಳು

ತ್ತೇನೆ. ಇಲ್ಲದಿದ್ದರೆ ಇಷ್ಟೊಂದು ಹಣ ಖರ್ಚು ಮಾಡಿ ಅಚ್ಚು ಹಾಕಿಸಿದರೆ ಅದರಿಂದ ಸದಸ್ಯರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ, ಇಷ್ಟೊಂದು ನಿಧಾನವಾಗಿ ಹಂಚಲು ಯಾರು ಹೊಣೆ? ಏತಕ್ಕೆ ಈ ರೀತಿ ಮಾಡುತ್ತೀರಿ? ಇನ್ನೂ ಬೇಕಾದಷ್ಟು ಬೇಡಿಕೆಗಳು ಈ ಸಭೆಯ ಮುಂದೆ ಚರ್ಚೆಗೆ ಬರಬೇಕಾಗಿದೆ. ಆ ಬೇಡಿಕೆಗಳು ಈ ಸಭೆಯ ಮುಂದೆ ಚರ್ಚೆಗೆ ಬರುವುದಕ್ಕೆ ಬಹಳ ಮುಂಚಿತವಾಗಿಯೇ ಅದಕ್ಕೆ ಸಂಬಂಧಪಟ್ಟ ವರದಿಗಳನ್ನೆಲ್ಲಾ ಮಾನ್ಯ ಸದಸ್ಯರಿಗೆ ಒದಗಿಸಬೇಕು. ಇಲ್ಲದಿದ್ದರೆ ಮಾನ್ಯ ಸದಸ್ಯರಿಗೆ ಅದನ್ನೆಲ್ಲಾ ಅಭ್ಯಾಸ ಮಾಡಲು ತೊಂದರೆಯಾಗುತ್ತದೆ. ಮೊದಲೇ ಒದಗಿಸಿದರೆ, ಅದನ್ನೆಲ್ಲಾ ಅಭ್ಯಾಸ ಮಾಡಿ ತಮ್ಮ ವಿಚಾರಗಳನ್ನು ಇಲ್ಲಿ ತಿಳಿಸಲು ಅನುಕೂಲವಾಗುತ್ತದೆಂದು ತಮ್ಮ ಮೂಲಕ ಅರಿಕೆ ಮಾಡಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ರೀತಿ ನಿಧಾನವಾಗುವುದಕ್ಕೆ ಕಾರಣವೇನು ?

ಶ್ರೀ ಎಂ. ಮಲ್ಲಪ್ಪ.—ವಾರ್ಷಿಕ ವರದಿಯನ್ನು ಮೊದಲೇ ಕೊಡಲಾಗಿತ್ತು. ಆದರೆ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ಒದಗಿಸುವುದು ಸ್ವಲ್ಪ ನಿಧಾನವಾಗಿದೆ, ಇದನ್ನು ಕಳೆದ ವರ್ಷ ಕೊಟ್ಟಿರಲಿಲ್ಲ. ಈ ಸಲ ಕೊಡಲಾಗಿದೆ. ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಸಲ ಸಕಾಲದಲ್ಲಿ ಅಂದರೆ ಮಾನ್ಯ ಸದಸ್ಯರಿಗೆ ಅಭ್ಯಾಸ ಮಾಡಲು ಅನುಕೂಲವಾಗುವಂತಹ ರೀತಿಯಲ್ಲಿ ಮೊದಲೇ ಒದಗಿಸಿ ಕೊಡಲು ಏರ್ಪಾಡು ಮಾಡುತ್ತೇನೆ.

SRI A. LAKSHMISAGAR.—Both the reports relating to performance of the Health and Family Welfare Department I have received only yesterday night. By the time I returned home, it was more than 8 O' clock.

ಅಧ್ಯಕ್ಷರು.—ಆದಷ್ಟು ಬೇಗ ಆಯಾ ಇಲಾಖೆಯ ವಾರ್ಷಿಕ ವರದಿಗಳನ್ನು ಸಾಧ್ಯವಾದಷ್ಟು ಬೇಗನೆ ಒದಗಿಸುವುದಕ್ಕೆ ಪ್ರಯತ್ನ ಮಾಡಲು ನಿರ್ದೇಶನ ಕೊಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಮಾನ್ಯ ಸದಸ್ಯರಿಗೆ ಕಾಲಕ್ಕೆ ಸರಿಯಾಗಿ ಕೊಡಬೇಕು ಎನ್ನುವ ಕಾನೂನು ಇದ್ದರೆ ಕೊಡಿ ಇಲ್ಲದಿದ್ದರೆ ಬೇಡ. ಅವರ ಇಷ್ಟಬಂದಹಾಗೆ ಸದಸ್ಯರಿಗೆ ತಲುಪಿಸುವುದು ಸರಿಯಲ್ಲ. ಕಾನೂನು ಪ್ರಕಾರ ಕೊಡಬಾರದು ಎನ್ನುವ ವಿಧಿ ಇದ್ದರೆ ಅದಕ್ಕೆ ನನ್ನ ಅಭ್ಯಂತರ ಇಲ್ಲ. ನಾಳೆ ವ್ಯವಸಾಯಕ್ಕೆ ಸಂಬಂಧಪಟ್ಟ ಬೇಡಿಕೆ ಇದೆ. ಇವತ್ತು ಆ ಬಗ್ಗೆ ಅದಕ್ಕೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ಒದಗಿಸಿದ್ದಾರೆ. ಈ ದಿವಸ ಸಾಯಂಕಾಲ ೭-೮ ಗಂಟೆಯವರೆಗೂ ನಾವು ಈ ಸಭೆಯಲ್ಲಿಯೇ ಇರುತ್ತೇವೆ. ಆದ್ದರಿಂದ ನಾಳೆ ಬರುವ ಬೇಡಿಕೆ ಬಗ್ಗೆ ಚಿಂತನ ಮಾಡುವುದಕ್ಕೆ, ಪಠಣ ಮಾಡುವುದಕ್ಕೆ ಅವಕಾಶವೇ ಇಲ್ಲ, ಇಷ್ಟು ಬೇಗ ವಿಷಯಗಳನ್ನು ವಿಷಯವನ್ನು ಸಂಗ್ರಹಿಸುವುದಕ್ಕೆ ಕಂಪ್ಯೂಟರ್‌ಗಳಿಗೂ ಸಹ ಸಾಧ್ಯವಾಗುವುದಿಲ್ಲ.

MR. SPEAKER.—I shall convey the feelings expressed by the hon. Member and I also direct the Government to take note of this:

ಶ್ರೀ ಎ. ಲಕ್ಷ್ಮೀಸಾಗರ್.—ಬಿಲ್ಲುಗಳ ಬಗ್ಗೆಯೂ ಇದೇ ರೀತಿ ಮಾಡುತ್ತಿದ್ದಾರೆ. ಬಿಲ್ಲುಗಳನ್ನು ಈ ಸಭೆಯಲ್ಲಿ ಮಂಡನೆ ಮಾಡುವಾಗ ಅವುಗಳ ಕಾಪಿಯನ್ನು ಕೊಟ್ಟಿರುವುದಿಲ್ಲ. ಇದರ ಪರಂಪರೆಯೇ ಆ ರೀತಿ ಇದೆ. ಒಂದಾದನಂತರ ಇನ್ನೊಂದು ಈ ರೀತಿ ಆಗುತ್ತದೆ. ಆದ್ದರಿಂದ ಸಾಕಷ್ಟು ಚಾಕಚಕ್ಯತೆಯಿಂದ ಕೆಲಸ ಮಾಡಿ ಸಂಬಂಧಪಟ್ಟ ಬೇಡಿಕೆಗಳಿಗೆ ಬೇಕಾದ ಸಾಹಿತ್ಯವನ್ನು, ವರದಿಯನ್ನು, ಟಿಪ್ಪಣಿಗಳನ್ನು ಸಕಾಲದಲ್ಲಿ ಮಾನ್ಯ ಸದಸ್ಯರಿಗೆ ಒದಗಿಸದೇ ಹೋದರೆ, ನಾವು ಅದರ ಮೇಲೆ ಚರ್ಚೆ ಮಾಡುವುದಕ್ಕೆ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಪಂಪಾಪತಿ.—ಸ್ವಾಮಿ ಈ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳೆಲ್ಲಾ ಇಂಗ್ಲೀಷನಲ್ಲೇ ಅಚ್ಚು ಹಾಕಿಸಿ ಕಳುಹಿಸುತ್ತಿದ್ದೀರಿ ಕರ್ನಾಟಕ ಎನ್ನತಕ್ಕ ಹೆಸರು ಹೊಂದಿರತಕ್ಕ ಕನ್ನಡ ನಾಡಿನಲ್ಲಿ, ಕಾಗದಪತ್ರಗಳನ್ನು ಕನ್ನಡದಲ್ಲಿ ಅಚ್ಚು ಹಾಕಿಸುವುದಕ್ಕೆ ತೊಂದರೆ ಏನಿದೆ? ಈ ಒಂದು ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೀರಾ?

ಶ್ರೀ ಎಂ ಮಲ್ಲಪ್ಪ.—ಮುಂದಿನಸಲ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡೋಣ.

MR. SPEAKER.—Now, I call hon. Member Sri C.M. Arumugham to initiate the discussion on this Demand,

† SRI C.M. ARUMUGHAM (KGF).-Mr. Speaker, Sir, as represented by our Deputy Leader the Annual Report and also the performance budget of the Health Department could not reach us earlier than yesterday night and therefore, Members on both he sides may not be able to do justice while speaking on this Department. I hope the Hon. Minister for Health will not give room for such things, in future. Sir, probably the Health Department is equal to the Police Department and Education Department in dealing with the welfare of nearly 3 crores of people of our State. Therefore, I put it this as a very big Department and I am very greatful for you for having given me a chance to initiate the discussion on this important Demand.

Sir, first of all, please permit me to thank the Chief Minister and also the Minister for Health for having agreed to bifurcate this Health Department into two. One is Medical Education and the other Health & Family Welfare. This is a major step our Karnataka Government has taken under the leadership of beloved Chief Minister Sri D. Devaraj Urs, in order to stremline the administration and also to give effecient health care to the general public. Propably this was done keeping in view the patterns existing in some of the Northern States and also Tamil Nadu and Kerala. But I feel that this Department can be further bifurcated, One for Health, and another for Family Welfare and individual diseases, Because as I have said this department has to take care the health of general public and his family. This is the only Department which looks after the health care of individual, his wife and children. Therefore in order to function more effectively I suggest that this Department be further bifurcated and the administation be toned up to the satisfaction of the people.

Then, Sir, our Government has taken up so many expansion programme in all most all the hospitals. So many buildings have been added to the existing hospitals. I think the Government should have plans before adding or expanding the existing hospitals. It is better if they built additional buildings in some other place. For example, in Victoria hospital so many buildings have been added recently. As it is the vicinity of the Victoria hospital is so crowded. If somebody visits to this hospital they may feel that some 'Jatara' is going on. Such is the situation. It is almost over crowded. Every-day thousands of people are coming for treatment and some of them do not know where to go. They are not aware of new wards and new

buildings that have come up. That apart we have City Market just opposite to the Victoria hospital. So many buses and autorickshaws are flying in front of this hospital and thus causing heavy noise. Sir, I have not visited London or America. As you know in those countries even some of the streets where there are no hospitals are ci ed as Silent Zone'. I would like to know from the Hon. Minister have you treated this area as 'Silent Zone'. No. They have not done that I do not know what the Health Department is doing in this respect. They have not at all taken steps to order this area as 'Silent Zone'. The authorities concerned have takens steps to prevent Autorickshaws from entering inside the Cubbon Park area. But at the same time they have not taken steps to prohibit Autos and buses in and around the Victoria Hospital. If you can visit the Victoria hospital you can see Autorickshaws are being allowed upto the Wards There is no restriction for them to enter into the hospital area. Thus terrible noise is being created by these autorickshaws. What we wanted is patients admitted into the hospitals should be looked after in a calm and quite atmosphere That is veryvery essential. Therefore, I would suggest to the Hon. Minister to take preventive steps before carrying out the expansion work in all the hospitals so that over crowding could be avoided. The Department should select places to locate the hospitals which are in a calm and quiet. This step we have to take in the interest of patients who are admitted to the hospitals. The hospital area should not look like a Jatra. It should always be in a calm and quiet atmosphere It is also essential that the Minister incharge of this Department should be healthy. I hope the Hon Chief Minister will agree with me and appoint a Expert Committee to find out whether the Minister to be appointed incharge of Health Department is healthy or not. Of course, the Present Health Minister Sri Mallappa is very active and healthy also. I have no complaint about Sri Mallappa. Why I have said that was his previous predecessors were all suffering from different kinds of diseases. Thus, nearly 4 to 5 doctors used to attend them from morning till night 10'o clock. Therefore, my humble submission the Minister incharge of this Health Department should always be in good health. I hope Sri Mallappa is keeping good health.

Sir, in our Health Department we have treatment like preventive and curative. Now, whatever may be their philosophy about the ealth care. But have they studied the environmental condition of the villagers. Are they providing adequate health facilities to these villages. You may not be aware of the environmental conditions in village life. They have no sanitation.

There is also no proper water supply. Then, how can you prevent diseases? All these years most of your experts working in the department have never thought about it. Every common man in the village should have proper food and not only ragi balls and greens. How is it that people in western and eastern countries live up to the age of 95 and 100? This department requires the co-operation of all the other departments to maintain the health of the general public.

2-30 P. M.

The Government must take all preventive measures so that the people of Karnataka can live in a better environment. Wholesome water supply must be there in all the villages. Otherwise, diseases like cholera, plague and small-pox will come. Whenever people get these diseases, they only treat them with some tablets. Preventive side must be given more importance. The people should also be provided with nutritious food to make up the deficiency of Vitamins A, B and C. Many people get evening blindness i. e. after 6 O' clock they are not able to see. Have they ever thought how to prevent it? People of the age of 30 and 40 get diabetes. What are the reasons? Are there any schemes and have they given any guidelines to the general public as to how to prevent it. I think the Hon, Minister must give more attention to the preventive side. Our Health Minister sometimes goes to Singapure to see the beauty of that place and returns. He must visit some advanced countries and find out what are the methods they are adopting to prevent these diseases, Government should also be not carried away by some officers who have their one foot in the graveyard and they suggest to you what system of medicine you should follow, whether Allopathy or Ayurvedic or Homeopathic or Unani. This gets into your head and you are working on it. Some old Ministers want to go in for Ayurveda or Homeopathy. Is it possible to compete with Allopathy which is advanced all over the world? You must have a definite system of medicine. You must improve it and provide expert treatment to the people. I had some throat trouble and so I went to the Victoria Hospital which I called the Jathra Hospital. He is supposed to be an E. N. T, specialist and he asks me to open my mouth in the presence of 50 people. Is that the way you want to give treatment in that hospital ? I could not get my treatment because these doctor are indulging in political activities and are interested only in their promotions and such like things. They do not devote much time for treatment. So, I had to go to Jeslok hospital at Bombay for

expert treatment and my throat is all right. But for how many people of Karnataka is it possible to go to Bombay to get this treatment? As I said before, the Health Minister should also be examined to see whether he is healthy so that he will be able to devote more time for the people. We must benefit from the advance in medical science in advanced countries. Then only we can give expert treatment. Why did our Food and Civil Supplies Minister Sri Ramegowda go to America? Because he could not get expert treatment in Victoria and Bowring Hospitals. He could go but I as a member of the Assembly cannot go to foreign countries. Therefore you must provide for expert treatment in the State Head quarters. For how many people is it possible to get the treatment which Sri Jayaprakash Narayan got at Jeslok Hospital. The C.M.C. Hospital at Vellore has got the artificial kidney facility. Your doctors talk more like politicians,

Coming to the supply of medicine, the Government has given Rs. 5 crores for this purpose.

About X-Ray I am glad you have sanctioned about 46 units but there is short supply of X-ray films. Without films how can they operate the X-ray machines? The Madras Government supplies to the Madras hospitals X-Ray films worth Rs. 1½ lakhs and you are supplying X-Ray films worth only Rs. 10,000 to Victoria Hospital. As a result, doctors are not able to take X-Ray photos and given proper treatment to the people Ordinarily without X-Ray photos it is not possible to diagnose diseases of the lung and chest. I requeset the Hon. Minister to rectify this position. I am glad you have sanctioned 46 units and they are being installed. I may bring to the kind notice of the Hon. Minister that in Gulbarga an X Ray machien as purchased at a cost of Rs. 92,000 in February 1976 in Bellary Health Unit at Siriguppa it was purchased at a cost of Rs. 1.02 lakhs on 12-4-7f and at Chennagiri in Shimoga District it was purchased at a cost of Rs, 1 lakh on 14-3-76 Till today those X-Ray plants have not been installed. How are you going to account for the same? You have sanctioned 46 units and how of them how many have you installed and how many are actually working? How is it no report has reached you about non-working of these plants? For the last one year you have been the Minister and you have officers throughout the State. Should they not have reported to you? Is it necesrary that people's representative should bring to your notice about the non-working of these plants? You must take action against officers who are responsible for not sending you the correct report.

So far as treatment is concerned there is one CMC hospital which has facilities to cure the deadly disease cancer. All persons desire to go to that hospital and not to Kidwai hospital here? Why? There is no powerful machinery here. I would suggest that you send some of your doctors to this hospital and give you a report. CMC hospital has the best machines available in the world. All those who suffer from cancer prefer to go to that hospital only. Please see whether such equipments can be got and installed in our hospitals About medical education I am glad that you are above to get 200 seats for students of Karnataka without paying capitation fees. It is good. But I would point out that in all departments a major share is taken by private persons. Why not you nationalise all these colleges? What is it you have done in the last one year and what are your proposals in the next four years, if you are not disturbed by the Chief Minister, till there Lakhs and lakhs of rupees are taken by these private institution you are spending 56 crores and if you were to spend another 5 crores you can nationalise all these institutions. You can fix a particular date by which time all the midieal colleges in the State can be nationalised so that equal opportunities can be provided to all the candidates Today is it possible for any backward or forword community candidate to get a seat? A person drawing Rs. 1,000 a month cannot get because his income exceed Rs 12,000 a month? These are some confusing points in the reports. It is not possible for such persons to get admission into medical colleges. They depend on Government colleges Therefore, I suggest that these private medical colleges should be nationalised as early as possible. I hope the Minister for Health has got the courage to take such drastic action in the interest of general public of Karnataka.

There was a Bill passed by this House about three years ago to establish a Health University. What happened to it ? I was given to understand that the Government of India and the Indian Medical Council were opposed to it. But now I hear that there is a change in their attitude. So, why not you try to bring into being the Health University so a systematic medical instruction can be imparted in all the medical colleges. When we can have an Agricultural University why not a Medical University? I appeal to the Health Minister to kindly think about it and establish a Health University so that Karnataka can be the first to have a Health University in the country The Indian Medical Council which is the watchdog of standard of education in medical colleges is agreeable to it. This is the right time to approach the Government of India and the Indian Medical Council and ask them to agree to the establishment of a Health University, wherein you can be a Pro-Chancellor.

We are spending huge money for improving the existing hospitals A huge cardiac ward is constructed at a cost of Rs. 80 lakhs but till now it is not working, due to some quarrels amongs the doctors. I was told that some doctor wants to be in charge and others opposing. Due to this the ward is not working. These are matters on which the Government should take stringent action. The doctor responsible should be retired,

I welcome the achievement made in a short period the Health Minister has taken charge. The Government has taken over 200 Taluk Board dispensaries. I would request the Government to take over the dispensaries run by the municipalities as well because some of them are not able to pay even the salaries of doctors. Some of the achievements in the last six months are good. Nearly 130 Junior Inspectors have promoted as senior Health Inspectors; 29 persons have been promoted as professors. Like that some promotions have been done which should have been done some years back. There is a proposal to promote doctors to 27 posts of Assistant Professors to various medical colleges. It is a good suggestion. In the short period he has done several promotions in the department which was not done in the last five or six years. Perhaps the previous Health Minister were taking more care about their health than about the department. If the officers responsible for this are still in service their explanation may be called for as to why these people were not promoted all these years, and if they are retired also the Hon'ble Minister may please call for their explanation and if found guilty their pension be stopped,

So far as achievements of the Department are concerned, I am glad some achievement is there, and about supply of medicines also there is less complaint.

The sanctioned strength of nurses in the department is 2,554, number working is 2,461 and 93 posts are vacant. I request the Hon'ble Minister to take immediate action to fill up these vacancies. About doctors also, 300 to 400 posts are vacant. I request the Government to take immediate action to fill up these vacancies.

Sir, if a man is ill and when he goes to the hospitsl, he must be provided a bed in the hospital. I do not agree with the theory of one bed for 1,000 patients. In the K. G. F. General Hospital, patients are lying on the ground. This should not happen. All the inpatients should be provided with a bed in the hospital.

About Dentists also 18 to 20 posts are vacant. These posts should be filled up immediately, otherwise there will be dearth for Dentists. Immediate action must be taken to fill up the vacant posts

Sir, in the Health Department, they have allowed doctors to work as local candidates for 10-12 years. Is there any justification for this? Who allowed this and what morale they have to allow such things? Even if the Commissioner and Secretary to Government has done this, the Hon,ble Minister may kindly call for his explanation and take suitable action. I understand that some Deputy Secretary, who destroyed about 300 files, was promoted as Secretary. Such things should not happen.

One more submission is, any man who is lazy and inefficient, but if he is in the good books of the Minister he is promoted, but not the efficient person. After the States Reorganisation in 1956, so many Ministers were there in charge of the Health department, but they were not able to frame the Cadre and Recruitment Rules for the Department. No one will tolerate this. In the absence of Cadre and Recruitment rules, where is the question of reservation to SC/ST and discipline in the department? They have certain rules in the Health department to suit their own men, I request the Hon'ble Minister to probe into the working of the department for the last 5 years by appointing an Enquiry Commission if necessary, because it is necessary to know the truth. Let him probe as to how promotions were made and why Cadre and Recruitment Rules were not framed. The poorer sections are the only losers in this affair.

ಶ್ರೀ ಟಿ. ರಾಮದೇವ್.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈಗತಾನೇ ಒಂದು ನ್ಯೂಸ್ ಇಲ್ಲಿ ಸರ್ಕ್ಯುಲೇಟ್ ಆಗುತ್ತಿದೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುತ್ತಿದ್ದಾರೆಎಂದು. ಕಾರಣ ಲೋಕಸಭೆಯಲ್ಲಿ ಗ್ರೋವರ್ಸ್ ಕಮೀಷನ್ ರಿಪೋರ್ಟ್‌ನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ೧೨ ಚಾರ್ಜ್‌ಗಳು ಪ್ರೂವ್ ಆಗಿವೆ ಮತ್ತು ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆಂದು ಸುದ್ದಿ ಬಂದಿದೆ. ಅದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ಎಂಬುದನ್ನು ಹೇಳಬೇಕು. ಇದು ರಾಜ್ಯದ ದೃಷ್ಟಿಯಿಂದ ಬಹಳ ಮುಖ್ಯವಾದುದು.

ಅಧ್ಯಕ್ಷರು.—ಅದನ್ನೆಲ್ಲ ಕ್ರಿಯಾಲೋಪವೆಂದು ಹೇಳುವುದಕ್ಕೆ ಬರುವುದಿಲ್ಲ. ಇಲ್ಲಿ ಕ್ರಿಯಾಲೋಪವಿಲ್ಲ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಸಿ. ನಾಣಯ್ಯ.—ಅದನ್ನೆಲ್ಲ ಅಷ್ಟು ಲಘುವಾಗಿ ಮಾತನಾಡಬಾರದು.

SRI C.M. ARUMUGHAM:— Sir, the Cadre and Recruitment Rules for the department are essential and a must. The Hon'ble Minister may please tell us in his reply as to when he will frame the Cadre and Recruitment Rules for the Department and implement them. I beg of him to do that.

There is one Isolation Hospital in the Old Madras Road, and I am told that to get a bed in that hospital and in the Sanitorium the patients will have to pay Rs. 100/-. My information may be wrong, but I request the Hon'ble Minister to verify this. It is not possible for persons suffering from T.B. to pay Rs. 100/-, and get a

bed there. Therefore it is not possible for the poor people to pay money to secure admission in the hospital. If a rich man is affected by tuberculosis he can go to a private Nursing home and gets himself cured. I request you kindly to see that the patients who are not in a position to move about are provided with beds in the hospitals.

3-00 P.M.

It is said that Cadre and Recruitment Rules of the Medical Department has not yet been finalised for the last many years. It is surprising how the Minister has allowed the department to function without framing the C&R rules. As a result of this, there is a lot of frustration amongst the senior doctors' I am told that some of the senior doctors are made to work under the junior doctors. I request you kindly to rectify this anomaly.

I take this opportunity to mention on this occasion that large number of doctors will become more mature as they grow in age. These professionals are retiring at the age of 55. Our State will be losing their rich experience and some of them might have become experts in certain line of treatment. In fact after their retirement, they would start Private Nursing Homes. My suggestion to the government is that they should extend their age limit of doctors from 55-58. In the case of IAS and IPS officers the age limit has been fixed at 58. Our neighbouring State of Tamil Nadu has already extended the age-limit of all their employees from 55 to 58 years. In our State the age-limit of doctors may be extended upto 58 years so that their expertise could be made use of for some more years and at the same time the junior doctors can gain more experience under their care and guidance. I know it is not possible for the Government to provide jobs to all the students coming out of the Medical Colleges. To tackle the problem of unemployed doctors, I would suggest to the Government to start a financial Corporation so that the students can take financial assistance from this Corporation and start private dispensaries or nursing home. I know even an advocate is paid some money at the initial stage to set up his practice, Similarly the medical students may be paid some financial help to start their private practice. In this way the problem of unemployment could be solved.

Further, I request the Hon.Health Minister to move the Chief Minister to extend the agelimit of doctors from 55 to 58 years so that the State would be benefited by their experience.

Arrogance goes with inefficiency. If a doctor is arrogant, he will be inefficiency. I have found some arrogant officers in the depa-

rtment of public health and it is these officers who are found to be inefficient. If an officer is efficient, it must be proved. Such inefficient and arrogant officers must be weeded out of the department. You must control their tongues and the style of their functioning. If the Minister has no power to control their tongues, this House has the authority to control them. Probably the Health Minister must have realised by now how powerful the Government is. The Minister should exercise his authority to weed out some of the ineff cient officers in his department. He will be thus improving the efficiency of his department. Jawaharlal Nehru once said that civil servants are subordinate to the government. A person who becomes a Minister must have gained some experience in the working of his department. He must have the patience to read the file from beginning to the end and then pass final orders on the file. He must not take the assistance of other people to pass the final orders. The decisions that a Minister take should be unbiased and they must be in the interests of the people of the State.

With these few words, I congratulate Sri Mallappa, for having done good word during the last one year as a Minister and I hope that he would continue to the same good work in the future years also.

I thank the Chair for having given me an opportunity to express my views on this demand.

ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ):—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯಸಚಿವರು ತಮ್ಮ ಇಲಾಖೆಯ ಸುಮಾರು ೫೯ ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಆ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಈ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶಾಲಾದಿನಗಳಲ್ಲಿ ನಮಗೆ ಆರೋಗ್ಯ ಪಾಠವನ್ನು ಕಲಿಸುವುದಕ್ಕೆ ಪ್ರಾರಂಭ ಮಾಡಿದ ತಕ್ಷಣ ಹೇಳಿಕೊಟ್ಟಂತಹ ಮೊದಲನೇ ಪದ 'ಆರೋಗ್ಯವೇ ಭಾಗ್ಯ.' ಮನುಷ್ಯನಿಗೆ ಆರೋಗ್ಯ ಇಲ್ಲದಿದ್ದರೆ ಏನೂ ಉಪಯೋಗವಿಲ್ಲ. ಈ ದೇಶದಲ್ಲಿ ಆರೋಗ್ಯವಂತರು ಇಲ್ಲದಿದ್ದರೆ ಈ ದೇಶ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಮಾನ್ಯ ಅರಸ್ಗಂರವರು ಹೇಳಿದಹಾಗೆ ನಮ್ಮಲ್ಲಿ ಎಜುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಇತರೇ ಡಿಪಾರ್ಟ್‌ಮೆಂಟ್‌ಗಳು ಎಷ್ಟು ಮುಖ್ಯವೋ ಹಾಗೆ ನಮ್ಮ ಆರೋಗ್ಯ ಇಲಾಖೆಯು ಅತಿಮುಖ್ಯವಾಗಿದೆ. ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ನಮ್ಮ ಆರೋಗ್ಯ ಇಲಾಖೆ ಉತ್ತಮವಾಗಿ ಕೆಲಸ ಮಾಡಿಕೊಂಡು ಬಂದಿದೆ. ಅದಕ್ಕೆ ಅನೇಕ ನಿದರ್ಶನಗಳು ಉಂಟು. ಇವತ್ತಿನ ದಿವಸ ನಮ್ಮ ಇಂಡಿಯಾದಲ್ಲಿ ಇತರ ರಾಜ್ಯಗಳವರು ೧೬೦೦ ಜನಕ್ಕೆ ಒಂದು ಹಾಸಿಗೆಯನ್ನು ಕೊಡುವುದಕ್ಕೆ ಶಕ್ತರಾಗಿದ್ದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮ ಆರೋಗ್ಯ ಇಲಾಖೆಯವರು ೧೦೫೦ ಜನಕ್ಕೆ ಒಂದು ಹಾಸಿಗೆಯನ್ನು ಕೊಡುವುದಕ್ಕೆ ಶಕ್ತರಾಗಿದ್ದಾರೆ. ಅದೇ ರೀತಿಯಲ್ಲಿ ೨೦೦೦ ಜನಕ್ಕೆ ಒಬ್ಬರಂತೆ ವೈದ್ಯರು ನಮ್ಮ ರಾಜ್ಯದಲ್ಲಿ ಇದ್ದಾರೆ, ಒಟ್ಟಿನಲ್ಲಿ ಸುಮಾರು ೪೦೦೦ ಡಾಕ್ಟರುಗಳನ್ನು, ೩೧೫೩೩ ಹಾಸಿಗೆಗಳನ್ನು ನಮ್ಮ ಆರೋಗ್ಯ ಇಲಾಖೆಯವರು ಕೊಟ್ಟಿದ್ದಾರೆ ಎಂದರೆ ಇದೇನೂ ಸಣ್ಣ ಪ್ರಗತಿಯಲ್ಲ. ಈಗ ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳ ಪಿಡುಗನ್ನು ಹೊರಕ್ಕೆ ಹಾಕಲಾಗಿದೆ. ಇದರಲ್ಲಿ ಮುಖ್ಯವಾಗಿ ಸಿಡುಬು, ಪ್ಲೇಗ್ ರೋಗಗಳನ್ನು ಸಂಪೂರ್ಣವಾಗಿ ರಾಜ್ಯದಿಂದ ಹೊರಕ್ಕೆ ಹಾಕಿರತಕ್ಕಂಥಾದ್ದು ಬಹಳ ಸಂತೋಷಕರವಾದ ವಿಚಾರ. ಇನ್ನು ಕೆಲವು ರೋಗಗಳಾದ ಕಾಲರಾ, ಮಲೇರಿಯಾ, ಗ್ಯಾಸ್ಟ್ರೋ-ಎಂಟರ್‌ಟೀಸ್, ಕೆ.ಎಫ್.ಡಿ.ಗಳನ್ನು ಈ ರಾಜ್ಯದಿಂದ ತೊಲಗಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಕಾಲರಾ ಮತ್ತು ಮಲೇರಿಯಾವನ್ನು ೫೦ ಪರ್ಸೆಂಟಿನಷ್ಟು ಹೊರಕ್ಕೆ ಹಾಕಿದ್ದೇವೆ, ಇನ್ನೂ ೫೦ ಪರ್ಸೆಂಟ್

ನಮ್ಮ ರಾಜ್ಯದಲ್ಲಿ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನನಗೆ ತಿಳಿದಿರುವ ಪ್ರಕಾರ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಲೇರಿಯಾ ಇದೆ. ಕಾಲರಾ ರೋಗ ಅಲ್ಲಲ್ಲಿ ಕಂಡುಬರುತ್ತಿದೆ. ಹಾಗೆಯೇ ಗ್ಯಾಸ್ಟ್ರೋ ಎಂಟಿಟೀಸ್ ಕಾಯಿಲೆಯೂ ಇದೆ, ಇವೆರಡನ್ನೂ ಸಂಪೂರ್ಣವಾಗಿ ಈ ರಾಜ್ಯದಿಂದ ಹೊರ ಹಾಕಬೇಕೆಂದು ಹೇಳುತ್ತೇನೆ. ಇನ್ನು ಕೆ.ಎಫ್.ಡಿ. ಕಾಯಿಲೆ ನನ್ನ ಭಾಗದಲ್ಲಿ ಹೆಚ್ಚು ಇದೆ. ಈ ಕಾಯಿಲೆಯನ್ನು ತಹಬಂದಿಗೆ ತರಲಾಗಿದೆ ಎಂದು ಹೇಳಲಾಗಿದೆ, ಆದರೆ, ಅದಿನ್ನೂ ತಹಬಂದಿಗೆ ಬಂದಿಲ್ಲ ಈ ಕಾಯಿಲೆ ಸಾಮಾನ್ಯವಾಗಿ ಹೊಸನಗರ, ಸಾಗರ ತೀರ್ಥಹಳ್ಳಿ ಮತ್ತು ಶಿವಮೊಗ್ಗ ತಾಲ್ಲೂಕಿನ ಭಾಗಶಃ ಪ್ರದೇಶದಲ್ಲಿದೆ ಎಂದು ವರದಿಯಲ್ಲಿದೆ, ಅದೇ ವರದಿಯಲ್ಲಿ ನನಗೆ ಆಶ್ಚರ್ಯ ತಂದಿದ್ದೆಂದರೆ, ಸೊರಬ ತಾಲ್ಲೂಕಿನ ಅನವಟ್ಟಿಯಲ್ಲಿ ಕೆ.ಎಫ್.ಡಿ. ಸೆಂಟರನ್ನು ಕಟ್ಟಿಸಲಾಗಿರುವುದು. ಇದು, ಮಾನ್ಯ ತಮ್ಮಯ್ಯನವರ ಕ್ಷೇತ್ರವಾದ ಕಡೂರಿನಲ್ಲಿ ಕಾಲರಾ ಇದೆ ಎಂದರೆ ಬೀರೂರು ಕ್ಷೇತ್ರದಲ್ಲಿ ಚುಚ್ಚು ಮದ್ದು ಕೊಟ್ಟಂತಾಗಿದೆ! ಎಂಬತ್ತೈದು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸೊರಬ ತಾಲ್ಲೂಕಿನಲ್ಲಿ ಕೆ.ಎಫ್.ಡಿ. ಕೇಂದ್ರವನ್ನು ಕಟ್ಟಿಸಿರುವುದು ತೀರಾ ಆಶ್ಚರ್ಯವಾದುದಾಗಿದೆ. ಮಾನ್ಯ ಸಚಿವರು ಇಂತಹ ಅಚಾತುರ್ಯಗಳು ಮುಂದೆ ಆಗದಂತೆ ನೋಡಿಕೊಳ್ಳಬೇಕು. ಎಲ್ಲಿ ಯಾವ ಕಾಯಿಲೆ ಹೆಚ್ಚು ಇರುತ್ತದೆ ಆ ಪ್ರದೇಶದಲ್ಲಿ ಆ ಕಾಯಿಲೆಗೆ ಸಂಬಂಧಿಸಿದ ಕೇಂದ್ರ ಅಥವಾ ಔಷಧಾಲಯವಿರಬೇಕೇ ಹೊರತು ಯಾರದೋ ಮುಲಾಜು ಅಥವಾ ಮರ್ಜಿಗೋಸ್ಕರ ಕಾಯಿಲೆ ಇಲ್ಲದ ಕಡೆಯೆಲ್ಲ ಕೊಡಬಾರದು ಆದುದರಿಂದ, ಇದು ಇಲಾಖೆಗೆ ಶೋಭೆ ತರತಕ್ಕದಲ್ಲ.

ನಮ್ಮ ಬಹುತೇಕ ಆಸ್ಪತ್ರೆಗಳು ಪಟ್ಟಣಗಳಲ್ಲಿವೆ. ಇದು ತಪ್ಪು. ಪಟ್ಟಣಗಳಲ್ಲಿ ವಿಪರೀತ ಗಲಾಟೆಯಿಂದಾಗುವ ತೊಂದರೆಗಳನ್ನು ಮಾನ್ಯ ಆರ್ಮುಗಂ ಅವರು ಈಗಾಗಲೇ ಹೇಳಿದ್ದಾರೆ. ಅದನ್ನು ನಾನು ಅನುಮೋದಿಸುತ್ತೇನೆ. ಒಳರೋಗಿಗಳ ಮತ್ತು ಬಹಳ ದಿವಸಗಳವರೆಗಿರಬೇಕಾದ ರೋಗಿಗಳಿಗೆ ಸಂಬಂಧಪಟ್ಟ ಆಸ್ಪತ್ರೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಏತಕ್ಕೆ ತೆರೆಯಬಾರದು? ಕಾಯಿಲೆ ಗುಣವಾಗುವುದಕ್ಕೆ ಔಷಧಿ ಎಷ್ಟು ಮುಖ್ಯವೋ ಪ್ರಶಾಂತ ವಾತಾವರಣವೂ ಅಷ್ಟೇ ಮುಖ್ಯ. ಆದುದರಿಂದ, ಪ್ರಶಾಂತ ವಾತಾವರಣವಿರುವ ಗಿರಿಧಾಮಗಳಲ್ಲಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕು. ಅಂತೆಯೇ ಬೆಂಗಳೂರಿನಲ್ಲಿ ಆಸ್ಪತ್ರೆಗಳನ್ನು ಹೊಸದಾಗಿ ತೆರೆಯುವ ಬದಲು, ಅದಕ್ಕೆ ಸಮೀಪವಿರುವ ನಂದಿಬೆಟ್ಟದ ಮೇಲೆ ತೆರೆದರೆ ಬಹಳ ಒಳ್ಳೆಯದು. ಇದರಿಂದ, ಜನರಿಗೆ ಜಾಗಕ್ಕಾಗಿ ಪಡುವ ಪರದಾಟವೂ ತಪ್ಪುತ್ತದೆ. ರೋಗಿಗಳಿಗೆ ಪ್ರಶಾಂತ ವಾತಾವರಣವೂ ದಕ್ಕುತ್ತದೆ.

ಈಗ ೧೪೪ ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿದೆ, ಇದರಿಂದಾಗಿ, ತಾಲ್ಲೂಕು ಬೋರ್ಡ್‌ಗಳ ಮೇಲಿದ್ದ ದೊಡ್ಡ ಹೊರೆಯನ್ನು ಇಳಿಸಿದಂತಾಯಿತು. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ, ಈಗ ಅಲ್ಲಿ ಹೆಲ್ತ್ ಸೆಸ್ ಬಾಕಿ ಸುಮಾರು ಎರಡು ಲಕ್ಷ ರೂಪಾಯಿಗಳಷ್ಟಿದೆ, ಇದು ಬಹಳ ದಿವಸಗಳಿಂದ ಇದೆ. ಅದನ್ನು ತಾಲ್ಲೂಕು ಬೋರ್ಡಿನವರಿಗೆ ಅತಿ ಶೀಘ್ರವಾಗಿ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧಿಯನ್ನು ಕಳೆದ ಇಪ್ಪತ್ತೈದು ವರ್ಷಗಳ ಹಿಂದೆ ಯಾವ ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿತ್ತೋ ಈಗಲೂ ಅದೇ ಪ್ರಮಾಣದಲ್ಲಿ ಆಗುತ್ತಿದೆ. ದಯವಿಟ್ಟು ಅದನ್ನು ತಪ್ಪಿಸಿ, ಅಲ್ಲಿಗೆ ಹೆಚ್ಚು ಹೆಚ್ಚು ಔಷಧಿಗಳನ್ನು ಸರಬರಾಜು ಮಾಡಬೇಕು. ಅಲ್ಲದೆ ಅಲ್ಲಿ ಗ್ಲುಕೋಸ್ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿಲ್ಲವಾದ್ದರಿಂದ, ಜನಗಳು ವಿಪರೀತ ತೊಂದರೆಗೊಳಗಾಗಿದ್ದಾರೆ. ಗಂಭೀರ ಸ್ಥಿತಿಯಲ್ಲಿರುವ ಬಡ ರೋಗಿಗೆ ೮-೧೦ ಗ್ಲುಕ್ಲೋಸ್ ಕೊಡಬೇಕಾದರೆ ಅದಕ್ಕಾಗುವಷ್ಟು ದುಡ್ಡನ್ನು ಅವನು ಎಲ್ಲಿಂದ ತರಲಿಕ್ಕೆ ಸಾಧ್ಯ? ಈಗಾಗಲೇ ದಾವಣಗೆರೆ ಮತ್ತು ಇನ್ನೊಂದು ಕಡೆ ಗ್ಲುಕೋಸ್ ಪ್ಲಾಂಟನ್ನು ತೆರೆಯಲಾಗಿದೆ. ಆದರೆ, ಅವರಿಗೆ ಹೆಚ್ಚು ಹೆಚ್ಚು ಗ್ಲುಕ್ಲೋಸ್ ತಯಾರಿಸಲು ನೀರೇ ಸಿಕ್ಕುತ್ತಿಲ್ಲವಂತೆ ಅಲ್ಲಿ ನೀರು ಸಿಕ್ಕದಿದ್ದರೆ, ನೀರು ಜಾಸ್ತಿ ಸಿಕ್ಕುವ ಕಡೆಗಳಲ್ಲಿ ಗ್ಲುಕೋಸ್ ತಯಾರಿಕಾ ಘಟಕವನ್ನು ಏತಕ್ಕೆ ಪ್ರಾರಂಭ ಮಾಡಬಾರದು? ಇದು ಜೀವನಾವಶ್ಯಕ ಔಷಧಿಯಾಗಿದೆ. ಕೇಂದ್ರ ಸರ್ಕಾರದವರು ಅನೇಕ ಔಷಧಿಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಿ, ಜೀವನಾವಶ್ಯಕ ಔಷಧಿಗಳ ಬೆಲೆಯನ್ನು ಇಳಿಸಿರುವಾಗ; ನಮ್ಮ ರಾಜ್ಯದವರು ಹೆಚ್ಚು ಮುತುವರ್ಜಿ ವಹಿಸಿ, ಶಿವಮೊಗ್ಗದಲ್ಲೊಂದು ಗ್ಲುಕೋಸ್ ಉತ್ಪಾದನಾ ಘಟಕವನ್ನು ತೆರೆಯಬೇಕೆಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಔಷಧಿಗಳನ್ನು ಪ್ಯಾಕೇಜ್ ಇಂಡೆಂಟ್ ಮೂಲಕ ಕಳುಹಿಸುತ್ತಿದ್ದಾರೆ. ಇದರಲ್ಲಿ ಅಚಾತುರ್ಯ ನಡೆಯುತ್ತಿದೆ. ನಾನು ಕೆಲವೊಂದು ಕೇಂದ್ರಕ್ಕೆ ಭೇಟಿ ಕೊಟ್ಟಿದ್ದಾಗ, ಕೆಲವು ಔಷಧಿಗಳು ಖರ್ಚಾಗದೆ ಹಾಗೆಯೆ ಉಳಿದಿದ್ದವು. ಇದಕ್ಕೆ ಕಾರಣವೇನೆಂದರೆ, ಯಾವ ಭಾಗದಲ್ಲಿ ಯಾವ ಕಾಯಿಲೆಗಳು ಸಾಮಾನ್ಯವಾಗಿರುತ್ತವೆ ಅಲ್ಲಿಗೆ ಅದಕ್ಕೆ ಸಂಬಂಧಿಸಿದ ಔಷಧಿಯನ್ನು ಕಳುಹಿಸದಿರುವುದೇ ಆಗಿದೆ. ಆದುದರಿಂದ ಔಷಧಿಗಳನ್ನು ಅಲ್ಲಿಗೆ ಸರಬರಾಜು ಮಾಡುವ ಮುನ್ನ, ಅಲ್ಲಿ ಯಾವ ಕಾಯಿಲೆ ಉಂಟು ಮತ್ತು ಅದಕ್ಕೆ ಯಾವ ಔಷಧಿ ಬೇಕೆಂಬುದನ್ನು ತಿಳಿದುಕೊಂಡು ಸರಬರಾಜು ಮಾಡುವ ವ್ಯವಸ್ಥೆ ಇಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ,

ನಮ್ಮ ರಾಜ್ಯದಲ್ಲಿ ಈಗ ಮಹಿಳಾ ವೈದ್ಯಾಧಿಕಾರಿಗಳ ಕೊರತೆ ಬಹಳವಿದೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಿಗಂತೂ ಮಹಿಳಾ ವೈದ್ಯಾಧಿಕಾರಿಗಳಾರೂ ಬರುತ್ತಾ ಇಲ್ಲ. ಎಲ್ಲರೂ ಪಟ್ಟಣಗಳಲ್ಲಿರಬೇಕೆಂದು ಇಚ್ಛೆಪಡುತ್ತಾರೆ. ಆದುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಅವರಿಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಮಹಿಳಾ ವೈದ್ಯಾಧಿಕಾರಿಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗುವಂತೆ ಮಾಡಲು ತಮಗೆ ಶಕ್ತಿ ಇದೆ ಎಂದು ಭಾವಿಸಿದ್ದೇನೆ. ಈಗ ಇರುವ ಮಹಿಳಾ ವೈದ್ಯಾಧಿಕಾರಿಗಳ ಕೊರತೆ ತುಂಬುವವರೆಗೆ ಕಾಲೇಜುಗಳಲ್ಲಿ ಅವರಿಗೆ ಹೆಚ್ಚಿಗೆ ಸೀಟನ್ನು ಅಲಾಟ್ ಮಾಡುವುದಕ್ಕೆ ಸಾಧ್ಯವೆ ಎನ್ನುವುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪ್ರತಿ ತಾಲ್ಲೂಕಿನಲ್ಲೂ ಎಲ್ಲ ಸೌಲಭ್ಯಗಳನ್ನೊಡಗೂಡಿದ ಸುವ್ಯವಸ್ಥಿತ ಜನರಲ್ ಆಸ್ಪತ್ರೆಗಳನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಆದರಲ್ಲಿ ಎಕ್ಸ್‌ರೇ ಪ್ಲಾಂಟನ್ನೂ ಸಹ ಅಳವಡಿಸಬೇಕೆಂದು ಹೇಳುತ್ತೇನೆ. ಇನ್ನು ಅನೇಕ ಆಸ್ಪತ್ರೆಗಳಿಗೆ ಬೋರ್ಡ್ ಆಫ್ ವಿಸಿಟರ್ಸ್‌ನ್ನು ಮಾಡಿಲ್ಲ. ಕಳೆದ ಒಂದೂವರೆ ವರ್ಷಗಳಿಂದಲೂ ಮಾಡುತ್ತೇವೆ, ಮಾಡುತ್ತೇವೆ ಎಂದು ಸರ್ಕಾರದವರು ಹೇಳುತ್ತಾ ಬಂದಿದ್ದಾರೆ. ಆದುದರಿಂದ, ಅದನ್ನು ಆದಷ್ಟು ಶೀಘ್ರವಾಗಿ ಮಾಡಬೇಕೆಂದು ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು ೨೮ ರಕ್ತ ಕೇಂದ್ರಗಳಿವೆ. ಈ ಎಲ್ಲಾ ಕೇಂದ್ರಗಳೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಲೇಬೊರೇಟರಿ ಟೆಕ್ನಿಷಿಯನ್ ಇಲ್ಲ, ಮತ್ತು ಅಗತ್ಯ ಉಪಕರಣಗಳೂ ಇಲ್ಲ. ಆದುದರಿಂದ; ಅತಿ ಶೀಘ್ರವಾಗಿ ಅಲ್ಲಿಗೆ ಇವುಗಳನ್ನೆಲ್ಲ ಕಳುಹಿಸಿಕೊಡಬೇಕೆಂದು ಹೇಳುತ್ತೇನೆ.

ರಾಜ್ಯದಲ್ಲಿರುವ ಎಲ್ಲ ಮೆಡಿಕಲ್ ಕಾಲೇಜುಗಳೂ ಸೇರಿ ೮೫೮ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ. ಇದರಲ್ಲಿ ಹೆಚ್ಚು ಪಾಲು ಖಾಸಗಿ ಮೆಡಿಕಲ್ ಕಾಲೇಜು ರಂಗಕ್ಕೆ ಹೋಗುತ್ತದೆ. ೩೫೩ ಅಭ್ಯರ್ಥಿಗಳಿಗೆ ಮಾತ್ರ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಅವಕಾಶವಿದೆ. ಕಳೆದ ವರ್ಷ ಸುಮಾರು ೩೦೨ ಜನ ವಿದ್ಯಾರ್ಥಿಗಳಿಗೆ ಕ್ಯಾಪಿಟೇಷನ್ ಶುಲ್ಕವನ್ನು ವಿನಾಯ್ತಿಗೊಳಿಸಿ ಸರ್ಕಾರ ಒಂದು ದೊಡ್ಡ ಕೆಲಸ ಮಾಡಿದೆ. ಆದರೆ, ಈ ರೀತಿ ಪ್ರತಿ ವರ್ಷವೂ ಬಾರ್ಗೈನ್ ಮಾಡದೆ, ಮಾನ್ಯ ಆರುಮುಗಂ ಅವರು ಹೇಳಿದ ಹಾಗೆ ಎಲ್ಲ ಖಾಸಗಿ ಮೆಡಿಕಲ್ ಕಾಲೇಜುಗಳನು ಆದಷ್ಟು ಶೀಘ್ರವಾಗಿ ರಾಷ್ಟ್ರೀಕರಣಗೊಳಿಸಬೇಕು. ಈ ಕೆಲಸವನ್ನು ಧೈರ್ಯವಂತರಾದ ಮಾನ್ಯ ಆರೋಗ್ಯ ಸಚಿವರು ಮಾಡುವರೆಂದು ನಾನು ನಂಬಿದ್ದೇನ.

ಇನ್ನು ನಾನು ಆರೋಗ್ಯ ಇಲಾಖೆ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಕಳೆದ ಸಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಇಲಾಖೆಯನ್ನು, ಡೈರೆಕ್ಟರ್ ಆಫ್ ಮೆಡಿಕಲ್ ಶಿಕ್ಷಣ ಮತ್ತು ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್ಫೇರ್ ಸರ್ವಿಸಸ್ ಎಂದು ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಇದು ನಿಜಕ್ಕೂ ಕ್ರಾಂತಿಕಾರಕವಾದ ಹೆಜ್ಜೆ. ಅದಕ್ಕಾಗಿ ನಾನು ಸರಕಾರವನ್ನು ಅಭಿನಂದಿಸುತ್ತೇನೆ. ಅದೇ ರೀತಿ ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್ಫೇರ್ ಸರ್ವಿಸಸ್ ಒಂದು ದೊಡ್ಡ ಸಾಗರ ಅದನ್ನೂ ವಿಭಜನೆ ಮಾಡಬೇಕಾಗಿದೆ. ವಿಭಜನೆ ಮಾಡುವುದಕ್ಕೆ ನನ್ನ ಸಲಹೆ ಏನೆಂದರೆ, ಡೈರೆಕ್ಟರ್ ಆಫ್ ಪ್ರೈಮರಿ ಹೆಲ್ತ್ ಕೇರ್, ಡೈರೆಕ್ಟರ್ ಆಫ್ ಮೆಡಿಕಲ್ ಮತ್ತು ಡೈರೆಕ್ಟರ್ ಆಫ್ ಫ್ಯಾಮಿಲಿ ವೆಲ್‌ಫೇರ್ ಎಂದು ವಿಭಾಗಿಸಿದರೆ, ಆರೋಗ್ಯ ಇಲಾಖೆಯನ್ನು ಒಟ್ಟು ಆರು ಭಾಗಗಳನ್ನಾಗಿ ಮಾಡಿದಂತಾಗುತ್ತದೆ. ಇದರಿಂದ, ಇಲಾಖೆ ವ್ಯವಸ್ಥಿತ ರೂಪದಲ್ಲಿ ಸಮರ್ಪಕವಾಗಿ ಹಾಗೂ ವೇಗವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಡೈರೆಕ್ಟರ್ ಫಾರ್ ಪ್ರೈಮರಿ ಹೆಲ್ತ್ ಕೇರ್ ಇಲಾಖೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಮೆಡಿಕಲ್ ಸಬ್ ಸೆಂಟರುಗಳನ್ನು ಸೇರಿಸಬೇಕು

ಡೈರೆಕ್ಟರ್ ಫಾರ್ ಮೆಡಿಕಲ್‌ಗೆ ಜಿಲ್ಲಾ ಆಸ್ಪತ್ರೆಗಳು, ದೊಡ್ಡ ದೊಡ್ಡ ಆಸ್ಪತ್ರೆಗಳು ಮತ್ತು ಜನರಲ್ ಆಸ್ಪತ್ರೆಗಳನ್ನು ಹಾಗೂ ಕಂಬೈಂಡ್ ಆಸ್ಪತ್ರೆಗಳನ್ನು ಸೇರಿಸಬೇಕು. ಡೈರೆಕ್ಟರ್ ಫಾರ್ ಫ್ಯಾಮಿಲಿ ವೆಲ್ಫೇರ್ ಈಗಿರುವ ಹಾಗೆಯೇ ನೋಡಿಕೊಂಡು, ಡೈರೆಕ್ಟರ್ ಫಾರ್ ಮೆಡಿಕಲ್ ಎಜುಕೇಷನ್‌ಗೆ ರಾಜ್ಯದ ಮೆಡಿಕಲ್ ಕಾಲೇಜುಗಳು ಮತ್ತು ಮೆಡಿಕಲ್ ಕಾಲೇಜುಗಳಿಗೆ ಸೇರಿದ ಆಸ್ಪತ್ರೆಗಳನ್ನು ಸೇರಿಸಬೇಕು. ಆಗ ಈ ಇಲಾಖೆ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಮಾನ್ಯ ಸಚಿವರು ಮಾಡುವರೆಂದು ನಾನು ನಂಬಿದ್ದೇನೆ,

[ಚೇರ್ಮನ್ (ಶ್ರೀ ಹೆಚ್. ಟಿ. ಕೃಷ್ಣಪ್ಪನವರು) ಅಧ್ಯಕ್ಷರ ಪೀಠದಲ್ಲಿದ್ದರು].

ಜಾಯಿಂಟ್ ಡೈರೆಕ್ಟರ್ ಹುದ್ದೆಯನ್ನು ಡೈರೆಕ್ಟರ್ ವಿಭಾಗದಿಂದ ಮೇಲೆ ಅದನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ, ಇಲ್ಲದೇ ಹೋದರೆ ಅದನ್ನೇ ಅಪ್‌ಗ್ರೇಡ್ ಮಾಡಿದರೆ ಹಣಕಾಸಿನ ವ್ಯವಸ್ಥೆಯಿಂದಲೂ ಅನುಕೂಲವಾಗುತ್ತದೆ, ಆದುದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೆಡಿಕಲ್ ಎಜುಕೇಷನ್‌ಗೆ ಸಂಬಂಧಿಸಿದಂತೆ ಎಲ್ಲಾ ಪ್ರಿನ್ಸಿಪಾಲರುಗಳನ್ನು ರಿಡೆಸಿಗ್ನೇಟೆಡ್ ಮಾಡಿ ಪ್ರಿನ್ಸಿಪಾಲರುಗಳ ಹುದ್ದೆಗಳನ್ನು ಅಪ್ ಗ್ರೇಡ್ ಮಾಡಿ ಡೈರೆಕ್ಟರುಗಳಾಗಿ ಮಾಡಬೇಕೆಂದು ಹೇಳುತ್ತೇನೆ. ಆಲ್ ಇಂಡಿಯಾ ಮಟ್ಟದಲ್ಲಿಯೂ ಕೂಡ ಡೈರೆಕ್ಟರ್ ಅಂಥ ಕನ್ಸಿಡರ್ ಮಾಡಿದ್ದಾರೆ, ಅದರಂತೆ ತಾವು ಎಲ್ಲಾ ಕಾಲೇಜುಗಳ ಪ್ರಿನ್ಸಿಪಾಲರುಗಳನ್ನು ಮಾಡಿ, ಅವರುಗಳಿಗೆ ಹೆಚ್ಚಿನ ಪವರ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರುಗಳಿಗೆ ನೇರವಾಗಿ ಕಮೀಷನರ್‌ರವರ ಜೊತೆ ವ್ಯವಹರಿಸುವಂತೆ ಶಕ್ತಿ ಕೊಟ್ಟರೆ, ಕೆಲಸ ಸುಗಮವಾಗಿ ನಡೆಯುತ್ತವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಮುಖ್ಯವಾಗಿ ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇಲ್ಲಿ ಕಮೀಷನರ್ ಮತ್ತಿತರ ದೊಡ್ಡ ಹುದ್ದೆಗಳನ್ನು ನೇಮಕಮಾಡುವಾಗ ಟೆಕ್ನೋಕ್ರಾಟ್ಸ್ ಆಗಿರುವವರನ್ನು ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, ಮೆಡಿಕಲ್ ಆಗಲೀ, ಇಂಜಿನಿಯರಿಂಗ್ ಆಗಲೀ, ಅಗ್ರಿಕಲ್ಚರ್ ಆಗಲೀ ಐ.ಎ.ಎಸ್. ಮ್ಯಾನ್‌ಗಳನ್ನು ಕಮೀಷನರ್ ಹಾಗೂ ಇತರೆ ಅಧಿಕಾರಿಗಳಾಗಿ ಕೂರಿಸಿದರೆ ಅವರುಗಳಿಗೆ ಇಲಾಖೆಯ ವಿಚಾರಗಳು ಗೊತ್ತಿರುವುದಿಲ್ಲ. ಕನಿಷ್ಟಪಕ್ಷ ಟೆಕ್ನೋಕ್ರಾಟ್ಸ್ ಆಗಿರುವವರನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿರುವಂತೆ ಡೈರೆಕ್ಟರ್ ಮತ್ತು ಕಮೀಷನರ್ ಮಧ್ಯೆ ಒಂದು ಸ್ಪೆಷಲ್ ಸೆಕ್ರೆಟರಿ ಹುದ್ದೆಯನ್ನು ನೇಮಕ ಮಾಡಿದರೆ ಹಾಲಿ ಇರತಕ್ಕ ತೊಂದರೆಯನ್ನು ತಪ್ಪಿಸಬಹುದೆಂದು ಹೇಳುತ್ತೇನೆ. ಪೋಸ್ಟ್ ಗ್ರಾಜುಯೇಟ್ ಸೆಲೆಕ್ಷನ್‌ನಲ್ಲಿರತಕ್ಕ ಪದ್ಧತಿ ಸರಿಯಾದುದಲ್ಲ, ಆಯಾಯಾ ಕಾಲೇಜುಗಳ ಪ್ರಿನ್ಸಿಪಾಲರುಗಳನ್ನೇ ಚೇರ್ಮನ್‌ಗಳಾಗಿ ಮಾಡಬೇಕೆಂದು ಹೇಳುತ್ತೇನೆ. ಡಿಪಾರ್ಟಮೆಂಟ್ ಹೆಡ್ ಇರತಕ್ಕ ಒಂದು ಸಮಿತಿ ಮಾಡಿದರೆ ಸಾಕಾಗುತ್ತದೆ, ಈಗ ಇರತಕ್ಕ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದರಿಂದ ಈ ವಿಚಾರವನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಶಿಫಾರಸ್ಸುಗಳನ್ನು ಕೆಲವುಕಡೆಗಳಲ್ಲಿ ಪಾಲಿಸಿಲ್ಲ. ಟೆಕ್ನಿಕಲ್ ಪೋಸ್ಟ್‌ಗಳನ್ನು ತುಂಬುವಾಗ ಐ.ಎಂ.ಸಿ. ರೂಲ್ಸ್ ಪ್ರಕಾರ ತುಂಬಬೇಕೆಂದು ಕೇಳಿಕೊಳ್ಳುತ್ತೇನೆ, ಮೆಡಿಕಲ್ ಕಾಲೇಜುಗಳ ಲೆಕ್ಚರರುಗಳು ಸ್ಟ್ರೈಕ್ ಮಾಡುತ್ತಾರೆಂಬ ವಿಚಾರವನ್ನು ಪತ್ರಿಕೆಗಳನ್ನು ನೋಡಿ ತಿಳಿದುಕೊಂಡೆ ಐ.ಎಂ.ಸಿ. ಪ್ರಕಾರ ಪೇಸ್ಟ್ರಕ್ಚರ್ ಕೊಡಬೇಕೆಂದು ಕೇಳುತ್ತಿದ್ದಾರೆ, ಮತ್ತೆ ಎನ್.ಪಿ.ಎ. ಬಗ್ಗೆ ಕೂಡ ಕೇಳುತ್ತಿದ್ದಾರೆ. ಅವರ ಬೇಡಿಕೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅವರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಹಣ ಖರ್ಚಾಗಬಹುದು ? ಆದರೆ ರಾತ್ರಿ ಹಗಲು ಕೆಲಸ ಮಾಡುವಂತ ಈ ಜನರಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ ಎಂದು ನಾವು ಭಾವಿಸಿಕೊಂಡಿದ್ದೇನೆ. ಇವರ ಒಂದು ಸೇವೆ ಆಗತ್ಯ ಸೇವೆಯಾಗಿರುವುದರಿಂದ ಇದನ್ನು ಹಣಕಾಸಿನದೃಷ್ಟಿಯಿಂದ ನೋಡಬಾರದು ಎಂದು ಹೇಳುತ್ತೇನೆ. ನಾನು ಮೊದಲೇ ಹೇಳಿದಹಾಗೆ ಆರೋಗ್ಯವೇ ಮಹಾಭಾಗ್ಯ ಎನ್ನುವುದರಿಂದ ಕೆಲವು ಸವಲತ್ತುಗಳನ್ನು ಅವರಿಗೆ ಕೊಡಬೇಕೆಂದು ಹೇಳುತ್ತೇನೆ. ಮೆಡಿಕಲ್ ಕಾಲೇಜುಗಳ ಪ್ರಿನ್ಸಿಪಾಲರುಗಳು ಮತ್ತು ಪ್ರೊಫೆಸರುಗಳು ಐ.ಎ.ಎಸ್. ನವರಿಗಿಂತ ಏನು ಕಡಿಮೆ ಇಲ್ಲ. ಆದರೂ ಐ.ಎ.ಎಸ್. ನವರಿಗೆ ಕೊಡುವಂಥ ಸವಲತ್ತುಗಳನ್ನು ಇವರಿಗೆ ಕೊಡದೇ ಇರುವುದಕ್ಕೆ ಕಾರಣವೇನು ? ಅವರಿಗೆ ಕಾರು ಕೊಡುತ್ತೀರಿ, ಮನೆಗಳಿಗೆ ಟೆಲಿಫೋನ್ ಕೊಡುತ್ತೀರಿ. ಇವರಿಗೆ ಯಾವ

ಸೌಕರ್ಯವನ್ನು ಕೊಡುತ್ತಿಲ. ಐ.ಎ.ಎಸ್. ನವರ ದಿಸೆಯಿಂದ ನಮ್ಮ ಸರ್ಕಾರ ನಮ್ಮನ್ನು ಕಡೆಗಣಿಸಿಲ್ಲ ಎನ್ನುವ ಮನೋಭಾವ ಇದರಲ್ಲಿಯೂ ಬರುವಂತೆ ಆಗಬೇಕು. ಆದುದರಿಂದ ಇವರುಗಳಿಗೂ ಕೂಡ ಕಾರು ಟೆಲಿಫೋನ್ ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾಲೇಜುಗಳಲ್ಲಿ ಪ್ರೊಫೆಸರುಗಳ ಕೆಳಗೆ ಕೆಲಸ ಮಾಡುವಂತ ಜೂನಿಯರುಗಳಿಗೂ ಕೂಡ ಸ್ವತಂತ್ರವಾಗಿ ಕೆಲಸ ಮಾಡುವಂಥ ಅಧಿಕಾರಿಗಳನ್ನು ಕೊಡಬೇಕು. ಅವರುಗಳಿಗೂ ಕೂಡ ಇಂತಿಷ್ಟು ಬೇಡ್‌ಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಿ.ಹೆಚ್.ಓ. ಮೆಡಿಕಲ್ ಆಫೀಸರ್ ಫಾರ್ ಪಿ.ಎಚ್.ಸಿ. ಅಂಥ ಇದೆ, ಈ ರೀತಿ ಇರುವುದರಿಂದ ಅನೇಕ ತೊಂದರೆಗಳು ಇವೆ, ಆದುದರಿಂದ ರೀಡರ್, ರಿಜಿಸ್ಟ್ರಾರ್ ಹಾಗೂ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳು ಇರುವಂತೆ, ಡಿ.ಹೆಚ್.ಓ. ಮೆಡಿಕಲ್ ಆಫೀಸರ್ ಮಧ್ಯೆ ಒಂದು ಕ್ಲಾಸ್ ಒನ್ ಗ್ರೇಡಿನ ಜೂನಿಯರ್ ಅಸಿಸ್ಟೆಂಟ್ ಮೆಡಿಕಲ್ ಆಫೀಸರ್ ಆಗಿಪ್ರೊಮೋಷನ್ ಕೊಡುವಂಥ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಥೆರಾಫಿಗೆ ಲೇಡಿಡಾಕ್ಟರು ಮತ್ತು ಅಸಿಸ್ಟೆಂಟ್ ಸರ್ಜನ್‌ಗಳನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದೇ ರೀತಿ ಅಡ್ಮಿನಿಸ್ಟ್ರೇಷನ್‌ಗೆ ಮೆಡಿಕಲ್ Class one Surgeons ಆಫೀಸರ್‌ಗೆ ಒಪ್ಪಿಸಬೇಕೆಂದು ಹೇಳುತ್ತೇನೆ.

ಪಿ.ಹೆಚ್.ಸಿ. ಅಧಿಕಾರಿಗಳಾಗಿ ಲೋಕಲ್ ಕ್ಯಾಂಡಿಡೇಟುಗಳನ್ನು ಹಾಕುತ್ತಿರೀ, ಅವರಿಗೆ ಕೆಲಸ ಗೊತ್ತಿರುವುದಿಲ್ಲ, ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಲೋಕಲ್ ಕ್ಯಾಂಡಿಡೇಟುಗಳನ್ನು ಮಾತ್ರ ಪಿ.ಹೆಚ್.ಸಿ. ಅಧಿಕಾರಿಗಳಾಗಿ ಹಾಕಬೇಡಿ ಎಂದು ಕೇಳಿಕೊಳ್ಳುತ್ತೇನೆ. ವೈದ್ಯರುಗಳ ನೇಮಕಾತಿಯಲ್ಲಿರುವ ನ್ಯೂನತೆಗಳನ್ನು ನಿವಾರಿಸಲು ರೆಕ್ರೂಟ್‌ಮೆಂಟ್ ರೂಲ್ಸ್ ಬದಲಾವಣೆ ಮಾಡಬೇಕೆಂದು ಹೇಳಿ ೨೦೦ ಹಾಸಿಗೆಯುಳ್ಳ ಮತ್ತು ೬೦ ಹಾಸಿಗೆಯುಳ್ಳ ಆಸ್ಪತ್ರೆಗಳಲ್ಲಿರತಕ್ಕ ಸೀನಿಯರ್ ಮತ್ತು ಜೂನಿಯರ್ ಎನ್ನುವ ವೈಧ್ಯಾಧಿಕಾರಿಗಳಿಗೆ Class I Surgeons ಪ್ರಮೋಷನ್ ಕೊಟ್ಟು 3 Tire System ಮಾಡಬೇಕು. ಪ್ರಜಾ ಸಂಖ್ಯೆಯು ಆಧಾರದ ಮೇಲೆ ವೈಧ್ಯಾಧಿಕಾರಿಗಳನ್ನು ನೇಮಕಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ವೈದ್ಯರುಗಳು ಕೂಡ ಸ್ವಲ್ಪವಾಗಿ ಮಿತವಾಗಿ ವರ್ತನೆ ಮಾಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೩.೩೦ ಪಿ. ಎಂ.

† ಶ್ರೀ ಹೆಚ್. ಟಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಭಾಷಣದ ಪ್ರಾರಂಭದಲ್ಲಿ ಸನ್ಮಾನ್ಯ ಆರೋಗ್ಯ ಮಂತ್ರಿಗಳನ್ನು ನಾನು ಮನಸಾರಿ ಅಭಿನಂದಿಸಬೇಕಾಗಿದೆ. ಏತಕ್ಕೆಂದರೆ ಅವರು ಕಳೆದ ವರ್ಷ ಒಂದು ಮಹತ್ ಕಾರ್ಯವನ್ನು ಮಾಡಿದ್ದಾರೆ. ರಾಜ್ಯದಲ್ಲಿರತಕ್ಕ ತಾಲ್ಲೂಕು ಬೋರ್ಡ್‌ಗಳು, ಮುನಿಸಿಪಾಲಿಟಿಗಳು ಕಳೆದ ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬಂದಿರತಕ್ಕ ಡಿಸ್ಪೆನ್ಸರಿಗಳನ್ನು ಸರ್ಕಾರಕ್ಕೆ ವಹಿಸಿಕೊಳ್ಳತಕ್ಕ ಒಂದು ಮಹತ್ ಕಾರ್ಯವನ್ನು ಸನ್ಮಾನ್ಯ ಮಂತ್ರಿಗಳು ಹಾಗೂ ಸರ್ಕಾರ ಮಾಡಿದೆ, ಆ ಸಲುವಾಗಿ ವೈಯಕ್ತಿಕವಾಗಿ ಆರೋಗ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿಗಳು ನಡೆಸತಕ್ಕಂತಹ ಆಸ್ಪತ್ರೆಗಳನ್ನು ಸರ್ಕಾರ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳತಕ್ಕ ಸಂದರ್ಭದಲ್ಲಿ ಒಂದು ಷರತ್ತು ಹಾಕಿದ್ದಾರೆ. ಈ ಸಂಸ್ಥೆಗಳು ೫ ವರ್ಷಗಳ ಕಾಲ ಆಸ್ಪತ್ರೆಗಳನ್ನು ನಡೆಸಲಿಕ್ಕೆ ಎಷ್ಟು ಹಣ ಖರ್ಚಾಗುತ್ತಿತ್ತು ಅಷ್ಟು ಹಣವನ್ನು ಆಸ್ಪತ್ರೆಗಳಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರಿಗೆ ವಸತಿಗೃಹ ಕಟ್ಟಲಿಕ್ಕೆ ಖರ್ಚು ಮಾಡಬೇಕೆಂದು ಹೇಳಿದ್ದಾರೆ ಇದು ಸರಿಯಲ್ಲ. ಇವೊತ್ತು ಹಣದ ಕೊರತೆಯಿಂದ, ನರಳುತ್ತಾ ಇದ್ದಂತಹ ತಾಲ್ಲೂಕು ಬೋರ್ಡ್‌ಗಳಿಗೆ ನೆರವಾಗಿ ಹೋಗಿರುವ ಸರ್ಕಾರ ೫ ವರ್ಷಗಳ ಕಾಲದ ಖರ್ಚು ಕೊಡಬೇಕು ಅಂದರೆ ಸಾಧ್ಯವೇ ? ಕನಿಷ್ಟಪಕ್ಷ ಒಂದು ಆಸ್ಪತ್ರೆ ರೆಕರಿಂಗ್ ಮತ್ತು ನಾನ್ ರೆಕರಿಂಗ್ ಚಾರ್ಜಸ್ ೨೦-೩೦ ಸಾವಿರ ರೂಪಾಯಿ ಆಗುತ್ತದೆ. ಅಷ್ಟು ಹಣವನ್ನು ೫ ವರ್ಷಗಳ ಕಾಲ ಕೊಡಬೇಕು ಅಂದರೆ ಹೇಗೆ ಸಾಧ್ಯ. ಆದುದರಿಂದ ಸರ್ಕಾರದ ತೀರ್ಮಾನವನ್ನು ಪುನರ್‌ವಿಮರ್ಶೆ ಮಾಡಿ ಈಗ ಹಾಕಿರತಕ್ಕ ಷರತ್ತು ಏನಿದೆ ಅದನ್ನು ತೆಗೆಯಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇದರ ಬಗ್ಗೆ ತಾಲ್ಲೂಕು ಬೋರ್ಡಿನವರೇ ಕನ್‌ಸೆಂಟ್ ಕೊಟ್ಟಿದ್ದು ಎಂದು ಹೇಳಿದ್ದಾರೆ. ಇದನ್ನು ಕೊಟ್ಟಿದ್ದು ಯಾರು ? ಕಳೆದ ವರ್ಷ ಚುನಾಯಿತ ಪ್ರತಿನಿಧಿಗಳು ತಾಲ್ಲೂಕುಬೋರ್ಡ್‌ನಲ್ಲಿ ಇಲ್ಲದ ಸಂದರ್ಭದಲ್ಲಿ ೧೭೬ ತಾಲ್ಲೂಕುಗಳಲ್ಲೂ ಆಡಳಿತ

ಅಧಿಕಾರಿಗಳು ಇದ್ದ ಸಂದರ್ಭದಲ್ಲಿ ನೀವು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿ ಅಲ್ಲಿನ ಆಡಳಿತಾಧಿಕಾರಿಗಳಿಂದ ರೆಸಲ್ಯೂಷನ್ ಮಾಡಿಸಿ ತರಿಸಿದ್ದೀರಿ. ಈಗ ಚುನಾಯಿತ ಪ್ರತಿನಿಧಿಗಳು ಎಲ್ಲಾ ತಾಲ್ಲೂಕು ಬೋರ್ಡ್‌ನಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಅವರ ಅಭಿಪ್ರಾಯಗಳನ್ನು ಕೇಳಿದ್ದೇ ಆದರೆ ೧೭೬ ತಾಲ್ಲೂಕು ಬೋರ್ಡ್‌ನಲ್ಲಿ ಯಾವ ತಾಲ್ಲೂಕು ಬೋರ್ಡ್ ಕೂಡ ಈ ಷರತ್ತಿಗೆ ಒಪ್ಪುವುದಿಲ್ಲ ಎಂದು ವಿಶ್ವಾಸದಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಈ ಷರತ್ತು ಏನು ಹಾಕಿದ್ದೀರಾ ಇದನ್ನು ಪುನರ್‌ವಿಮರ್ಶೆಮಾಡಿ ತಮ್ಮ ಉತ್ತರದಲ್ಲಿ ಘೋಷಿಸಬೇಕು ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸತಕ್ಕ ವಿಚಾರ ಹೇಳಬೇಕು ಅಂದರೆ ನಾನು ಜಿಲ್ಲಾಮಟ್ಟದ ಹಾಗೂ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡದಲ್ಲಿರತಕ್ಕ ದೊಡ್ಡ ದೊಡ್ಡ ಆಸ್ಪತ್ರೆಗಳ ವಿಚಾರಗಳನ್ನು ಹೇಳುವುದಿಲ್ಲ. ಹಳ್ಳಿಗಳಲ್ಲಿ ಕೆಲಸ ಮಾಡತಕ್ಕ ತನ್ನದೇ ಆದಂತಹ ಸೇವೆಯನ್ನು ಸಲ್ಲಿಸುವ ಡಿಸ್‌ಪೆನ್‌ಸರಿ ಏನಿವೆ, ಹೆಲ್ತ್ ಯೂನಿಟ್, ಮೆಡಿಕಲ್ ಸಬ್ ಸೆಂಟರ್ ಇವುಗಳಿಗೆ ಸರ್ಕಾರದವರು ಒಂದು ವರ್ಷಕ್ಕೆ ೬ ಸಾವಿರ ರೂಪಾಯಿ ಬೆಲೆ ಬಾಳತಕ್ಕ ಔಷಧಿಗಳನ್ನು ಕೊಡುತ್ತಿದ್ದಾರೆ. ಆದನ್ನು ಯಾವಾಗ ಒದಗಿಸುತ್ತಾರೆ ಅಂದರೆ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಒದಗಿಸುತ್ತಾರೆ. ನಾನು ಕಳೆದ ವರ್ಷ ಬಡ್ಜೆಟ್ ಅಧಿವೇಶನದಲ್ಲಿ ಇದೇಡಿಮ್ಯಾಂಡ್ ಮೇಲೆ ಮಾತನಾಡುತ್ತಾ ನಾನು ಇದರ ಬಗ್ಗೆ ಹೇಳಿದ್ದೆ. ಅದಕ್ಕೆ ಏನು ತೊಂದರೆಗಳನ್ನು ಹೇಳುತ್ತಾರೆ ಅಂದರೆ, ಸ್ಟೋರ್ ಪರ್ಚೇಸ್ ಕಮಿಟಿಯಲ್ಲಿ ಏನೋ ಹೇಳುತ್ತಾರೆ, ಆದುದರಿಂದ ಕೊನೇ ಪಕ್ಷ ವರ್ಷದ ಕ್ವಾರ್ಟರ್‌ನಲ್ಲಿ ಅಂದರೆ ಜೂನ್ ತಿಂಗಳ ಒಳಗೆ ಔಷಧಿಗಳನ್ನು ಒದಗಿಸತಕ್ಕ ಏರ್ಪಾಡು ಮಾಡಬೇಕು. ಈಗ ತಾವು ಕೊಡತಕ್ಕಂತಹ ೬ ಸಾವಿರ ರೂಪಾಯಿಂ ಔಷಧಿ ಇದು ಯಾವುದಕ್ಕೂ ಸಾಲುವುದಿಲ್ಲ. ಇವೊತ್ತು ಯಾರೋ ಒಬ್ಬ ಪಟ್ಟಣದ ಆಸ್ಪತ್ರೆಗೆ ಹೋದರೆ ಒಬ್ಬ ಫಿಜಿಷಿಯನ್ ಪ್ರಿಸ್‌ಕ್ರಿಪ್ಷನ್ ಮಾಡಿಕೊಟ್ಟಿದ್ದೇ ಆದರೆ, ಅದು ೫೦-೬೦ ರೂಪಾಯಿ ಆಗುತ್ತದೆ. ನೀವು ಕೊಡತಕ್ಕ ೬ ಸಾವಿರ ರೂಪಾಯಿ ಲೆಕ್ಕ ಹಾಕಿದರೆ ಒಂದು ದಿವಸಕ್ಕೆ ಒಂದು ಆಸ್ಪತ್ರೆಗೆ ಔಷಧಿ ಖರ್ಚು ಹದಿನಾರೂವರೆ ರೂಪಾಯಿ ಆಗುತ್ತದೆ. ನೀವು ಕೊಡತಕ್ಕಂತಹ ಹದಿನಾರೂವರೆ ರೂಪಾಯಿ ಔಷಧಿಯನ್ನು ಅಲ್ಲಿರತಕ್ಕ ಡಾಕ್ಟರು ಒಂದು ದಿವಸದಲ್ಲಿ ಎಷ್ಟು ಜನರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ತಾವು ಉತ್ತರದಲ್ಲಿ ಎಲ್ಲರಿಗೂ ಒದಗಿಸಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ಒಂದು ದಿವಸಕ್ಕೆ ೫೦ ರೂಪಾಯಿಯಷ್ಟು ಔಷಧಿಯನ್ನಾದರೂ, ಕೊಡಬೇಕು, ಅಥವಾ ಒಂದು ತಿಂಗಳಿಗೆ ೨ ಸಾವಿರ ರೂಪಾಯಿಯಷ್ಟು ಔಷಧಿ ಒದಗಿಸಬೇಕು. ಒಟ್ಟಿನಲ್ಲಿ ಒಂದು ಮೆಡಿಕಲ್ ಸಬ್ ಸೆಂಟರ್‌ಗೆ ಒಂದು ವರ್ಷದಲ್ಲಿ ೨೫ ಸಾವಿರ ರೂಪಾಯಿ ಔಷಧಿಯನ್ನು ಒದಗಿಸುವ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ತಮಗೆ ಈ ಔಷಧಿ ವಿಷಯದಲ್ಲಿ ಒಂದು ವಿಚಾರ ತಿಳಿಸಬೇಕು ಅಂದರೆ ನಾನು ಕಳೆದ ಸೆಪ್ಟೆಂಬರ್‌ನಲ್ಲಿ ೨೦ ದಿವಸ ಕೃಷ್ಣರಾಜ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆ. ಆ ಸಂದರ್ಭದಲ್ಲಿ ನಾನು ಆಗ ಇದ್ದಂತಹ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಅವರಿಗೆ ಆಸ್ಪತ್ರೆಯಿಂದಲೇ ಒಂದು ಡಿ.ಓ. ಪತ್ರವನ್ನು ಬರೆದಿದ್ದೆ. ನಾನು ಅಲ್ಲಿ ಕ್ಲಾಸ್ ಒಂದನೇ ವಾರ್ಡ್‌ನಲ್ಲಿ ಇದ್ದೆ. ಯಾರನ್ನಾದರೂ ಆಪರೇಷನ್ ಮಾಡಲಿಕ್ಕೆ ಸ್ಟ್ರೆಚ್ಚರ್‌ನಲ್ಲಿ ಕರೆದುಕೊಂಡು ಹೋಗಬೇಕಾಗಿದ್ದರೆ ನಮ್ಮ ವಾರ್ಡ್ ಮುಂದೆಯೇ ಕರೆದುಕೊಂಡು ಹೋಗಬೇಕಾಗಿತ್ತು. ಒಂದು ಸಾರಿ ಬೆಳಿಗ್ಗೆ ಎಂಟೂವರೆಗೆ ಘಂಟೆಗೆ ಒಬ್ಬರನ್ನು ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಹೋದರು ಮತ್ತು ಒಂದೂವರೆ ಗಂಟೆಗೆ ವಾಪಸ್ಸು ಕರೆದುಕೊಂಡು ಬರುತ್ತಿದ್ದರು. ಅದರ ಬಗ್ಗೆ ಏತಕ್ಕೆ ಎಂದು ವಿಚಾರಿಸಿದ್ದಕ್ಕೆ ಏನೋ ಗ್ಯಾಸ್ ಇಲ್ಲ ಎಂದು ಹೇಳಿದರು. ಅಪರೇಷನ್ ಮಾಡಬೇಕು ಎಂದರೆ ಅದಕ್ಕೆಲ್ಲಾ ಪೂರ್ವಭಾವಿ ಸಿದ್ಧತೆಗಳೆಲ್ಲಾ ನಡೆದಿರಬೇಕು ಏಕೆಂದರೆ ಅವರ ನೆಂಟರಿಷ್ಟರುಗಳು ಹತ್ತಾರು ಕಡೆಯಿಂದ ನೋಡಲಿಕ್ಕೆ ಬಂದುಹೋಗಿರುತ್ತಾರೆ. ಅಲ್ಲಿ ಫಿಲಂ ಎಕ್ಸ್‌ರೇ ಇಲ್ಲ ಎಂದು ನನಗೆ ಬಂದು ಕಂಪ್ಲೇಂಟ್ ಮಾಡುತ್ತಿದ್ದರು. ಆಗ ನಾನು ಆಗಿದ್ದಂತಹ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಅವರಿಗೆ ನಾನು ಇಲ್ಲಿ ಇನ್ನೂ ೧೫ ದಿವಸಗಳ ಕಾಲ ಇರಬೇಕಾಗುತ್ತದೆ. ದಯಮಾಡಿ ನೀವು ಇಲ್ಲಿಗೆ ಖುದ್ದು ಬರಬೇಕು ಎಂದು ಬಿನ್ನವಿಸಿಕೊಂಡು ಒಂದು ಪತ್ರ ಬರೆದರೂ ಅವರೂ ಬರಲಿಲ್ಲ, ಅವರು ಒಂದು ಪತ್ರವನ್ನೂ ಕೂಡ ಬರೆಯಲಿಲ್ಲ. ಇವೊತ್ತು ಈ ಪರಿಸ್ಥಿತಿ ಕೆ. ಆರ್. ಆಸ್ಪತ್ರೆಯಲ್ಲೇ ಅಲ್ಲ ಜಿಲ್ಲಾ ಕೇಂದ್ರದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳಲ್ಲೂ ಇನ್ನೂ ಇದೆ, ಇದನ್ನು ಹತೋಟಿಗೆ ತರಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಡಾಕ್ಟರುಗಳಿಗೆ, ಸಿಬ್ಬಂದಿವರ್ಗದವರಿಗೆ, ವಸತಿಗೃಹ ಕಟ್ಟುತಕ್ಕ ವಿಷಯದಲ್ಲಿ ಈಗಾಗಲೇ ಸರ್ಕಾರದವರು ಒಂದು ಯೋಜನೆಯನ್ನು ಕೈಗೊಂಡು ಹುಡ್ಕೋ ಹೌಸಿಂಗ್ ಬೋರ್ಡ್‌ನಿಂದ ಕೆಲವಾರು ವಸತಿಗೃಹಗಳನ್ನು

ಟ್ಟಿಸಲಿಕ್ಕೆ ಕಾರ್ಯಕ್ರಮ ಕೈಗೊಂಡಿರುವ ಬಗ್ಗೆ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಈ ಒಂದು ಯೋಜನೆಗೆ ಕನಿಷ್ಟ ಪಕ್ಷ ಒಂದು ವರ್ಷದಲ್ಲಿ ಒಂದು ಕೋಟಿ ರೂಪಾಯಿಗಿಂತಲೂ ಕಡಿಮೆ ಇಲ್ಲದಷ್ಟು ಹಣವನ್ನು ಯಾವುದೇ ಮೂಲದಿಂದಲಾದರೂ ತೆಗೆದು ಇದಕ್ಕೆ ಖರ್ಚು ಮಾಡಿ ವಸತಿಗೃಹಗಳನ್ನು ಕಟ್ಟಿಸತಕ್ಕ ಕ್ರಮವನ್ನು ಕೈಗೊಳ್ಳಬೇಕು. ಈಗ ನನ್ನಲ್ಲಿ ಪೂರ್ಣ ಅಂಕಿಅಂಶಗಳು ಇಲ್ಲ. ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಇಲಾಖೆಗಳ ಪೈಕಿ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆಯಲ್ಲಿ ಹೆಚ್ಚು ಸಿಬ್ಬಂದಿ ವರ್ಗ ಇರತಕ್ಕದ್ದು. ಈಗ ಆರೋಗ್ಯ ಇಲಾಖೆಗೆ ಬಹಳವಾಗಿ ಬೆಳೆಯುತ್ತಿದೆ. ಇವೊತ್ತು ಏನಾಗಿದೆ ಅಂದರೆ ಊರಿನಿಂದ ಊರುಗಳಿಗೆ ಡಾಕ್ಟರುಗಳು ಹೋಗುವುದು ಇದೆ. ಅವರು ಬೆಳಿಗ್ಗೆ ೯ ಗಂಟೆಗೆ ಹೋದವರು ೧೦ ಗಂಟೆಗೆ ಆಗಲೇ ವಾಪಸ್ಸು ಬರುತ್ತಾ ಇರುತ್ತಾರೆ. ಈ ರೀತಿ ಆಗಲಿಕ್ಕೆ ಅವಕಾಶ ಕೊಡಬಾರದು. ಅವರು ಎಲ್ಲಿ ಕೆಲಸದಲ್ಲಿ ಇರುತ್ತಾರೋ ಅಲ್ಲಿಯೇ ಅವರು ವಾಸ ಮಾಡುವಂತಹ ಏರ್ಪಾಡು ಮಾಡಬೇಕು. ಇನ್ನು ಮಲೇರಿಯಾ ರೋಗದ ಬಗ್ಗೆ ಹೇಳಬೇಕು ಅಂದರೆ ನಾವು ಸಣ್ಣ ಮಕ್ಕಳುಗಳಾಗಿದ್ದಾಗ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಸೊಳ್ಳೆಗಳ ಕಾಟದಿಂದ ದೊಡ್ಡ ಗಡ್ಡೆಗಳಾಗಿ ನರಳುತ್ತಾ ಇದ್ದೆವು. ಈಗ ಆಂಟಿ ಮಲೇರಿಯಾ ಮೆಜರ್ಸ್ ಏನಿದೆ ಅದನ್ನು ಎಫೆಕ್ಟೀವ್ ಆಗಿ ಕೈಗೊಂಡು ಮಲೇರಿಯಾ ಹೆಸರಿಲ್ಲದಂತೆ ಮಾಡಿದ್ದಾರೆ. ಆದರೆ ಇತ್ತೀಚೆಗೆ ನಮ್ಮ ಪ್ರದೇಶದಲ್ಲಿ ಕಳೆದ ವರ್ಷದಿಂದ ಈಚೆಗೆ ಬೇಸಿಗೆ ಕಾಲದಲ್ಲಿ ಮಲೇರಿಯಾಕ್ಕೆ ವಿಪರೀತ ಜನ ತುತ್ತಾಗಿದ್ದಾರೆ. ಮಾನ್ಯ ಅಧ್ಯಕ್ಷರವರು ನಾಗಮಂಗಲದಿಂದ ಬಂದಿರುವುದರಿಂದ ಅವರಿಗೂ ಕೂಡ ಅಲ್ಲಿಯ ಪರಿಸ್ಥಿತಿ ಗೊತ್ತಿದೆ. ಪಬ್ಲಿಕ್ ಹೆಲ್ತ್ ಯೂನಿಟ್‌ನಲ್ಲಿ ಸಾಮಾನ್ಯವಾಗಿ ಹೊರರೋಗಿಗಳು ೪೦-೫೦ ಜನರು ಇರುತ್ತಾರೆ ಅದೇ ನಮ್ಮ ಬಸಾಳು ಪ್ರದೇಶದಲ್ಲಿ ಪಬ್ಲಿಕ್ ಹೆಲ್ತ್ ಯೂನಿಟ್ ಇದೆ ಅಲ್ಲಿ ೨೫೦ ರಿಂದ ೩೦೦ ರವರೆಗೆ ಜನರು ಬರುತ್ತಿದ್ದಾರೆ. ಸುಮಾರು ೧೦೦ ರಿಂದ ೧೫೦ ಗಾಡಿಗಳು ಪ್ರತಿನಿತ್ಯ ಬರುತ್ತವೆ ಅಲ್ಲಿಯ ಡಾಕ್ಟರು ಅಲ್ಲಿಗೆ ಬರತಕ್ಕವರು ಕಾಯಿಲೆ ನೋಡಿ ಅವರಿಗೆ ಡಯೋರಿಯಾ ಬಂದು ಮಂಡ್ಯಕ್ಕೆ ಬಂದುಬಿಟ್ಟರು. ಗ್ಯಾಸ್ಟ್ರೋ ಎನ್‌ಟ್ರೈಟೀಸ್ ಎಂದು ಇದೆ. ಅದು ಡಯೋರಿಯಾಗೆ ಸಂಬಂಧಪಟ್ಟಿದ್ದು ಇದ್ದರೂ ಇದಕ್ಕೆ ಹೆಚ್ಚು ಕಾಲರ ಬಂದಿದೆ ಎಂದು ನನಗೆ ಫೋನ್ ಮೇಲೆ ಫೋನ್‌ಗಳೇ ಬರಲಿಕ್ಕೆ ಪ್ರಾರಂಭವಾದವು. ಖುದ್ದಾಗಿ ದೂರುಗಳನ್ನು ಇಲ್ಲಿಗೆ ಬಂದು ತಿಳಿಸಿದ ಮೇಲೆ ನಾನು ಆರೋಗ್ಯ ಇಲಾಖೆಯವರಿಗೆ ತಿಳಿಸಿದೆ. ಅದಕ್ಕೆ ಅವರು ಇದು ಒಂದು ಡಯೋರಿಯಾ ಎಂದು ಹೇಳಿದರು ಇದರ ಬಗ್ಗೆ ಮಲೇರಿಯಾ ರೋಗಕ್ಕೆ ಕೆಲವು ಗುಳಿಗೆಗಳನ್ನು ಹಳ್ಳಿ ಹಳ್ಳಿ ಗಳಲ್ಲಿ ಕೊಡುತ್ತಾರೆ ಎಂದು ಹೇಳುತ್ತಾರೆ. ಈಗ ನಮ್ಮ ಮಂಡ್ಯದಲ್ಲಿರತಕ್ಕ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ೫-೬ ತಿಂಗಳಿಂದಲೂ ರಜೆಯಲ್ಲಿದ್ದಾರೆ. ಅವರ ವಿಷಯದಲ್ಲಿ ಕಂಪ್ಲೇಂಟ್ ಇಲ್ಲ. ಬಹಳ ಯೋಗ್ಯರು, ದಕ್ಷರು, ಪ್ರಾಮಾಣಿಕರು, ಏನೋ ವೈಯುಕ್ತಿಕ ಕಾರಣಗಳಿಂದ ಅವರು ಒಂದಲ್ಲೊಂದು ರೀತಿಯಲ್ಲಿ ರಜಾದಲ್ಲಿದ್ದಾರೆ. ನಿಮ್ಮಲ್ಲಿರತಕ್ಕ ಗುಳಿಗೆಗಳನ್ನು ಎಲ್ಲಿ ಇಟ್ಟಿದ್ದೀರಿ ? ಅಥವಾ ಯಾರ ಕೈಗೆ ಕೊಟ್ಟಿದ್ದೀರಿ ? ಒಂದು ವೇಳೆ ಪಂಚಾಯಿತ್ತಿ ಅಧ್ಯಕ್ಷರ ಕೈಗೆ ಕೊಟ್ಟಿದ್ದೀರಾ ? ತಾಲ್ಲೂಕು ಬೋರ್ಡ್ ಅಧ್ಯಕ್ಷರ ಕೈಗೆ ಕೊಟ್ಟಿದ್ದೀರಾ ? ಅಥವಾ ತಾಲ್ಲೂಕು ಬೋರ್ಡ್ ಸದಸ್ಯರ ಕೈಗೆ ಕೊಟ್ಟಿದ್ದೀರಾ ? ಅದನ್ನಾದರೂ ಹೇಳಿದರೆ ಆ ಗುಳಿಗೆಗಳನ್ನು ತಂದು ರೋಗಿಗಳಿಗೆ ಕೊಡಬಹುದೆಂದು ನಾನು ಈಗ್ಗೆ ಸುಮಾರು ೨೦ ದಿವಸಗಳಿಂದಲೂ ಕೇಳುತ್ತಲೇ ಇದ್ದೇನೆ ಆದರೂ ಅವರು ಒಂದು ಪಟ್ಟಿಯನ್ನೂ ಕೂಡ ಕೊಟ್ಟಿಲ್ಲ. ಇವತ್ತು ಕೊಡುತ್ತೇನೆ, ನಾಳೆ ಕೊಡುತ್ತೇನೆ ಎಂದು ಹೇಳುತ್ತಲೇ ಬರುತ್ತಿದ್ದಾರೆ. ನಾನು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ. ನಿಮ್ಮಲ್ಲಿ ಯಾರಾದರೂ ಒಬ್ಬ ಕಾಂಪಿಟೆಂಟ್ ಅಧಿಕಾರಿಯನ್ನು ಮಂಡ್ಯ ಆಸ್ಪತ್ರೆಗೆ ಕಳುಹಿಸಿ ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ನಿರ್ದೇಶನ ಕೊಡುವಂತೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ. ನಮ್ಮ ಮಂಡ್ಯದ ಸಾರ್ವಜನಿಕ ಆಸ್ಪತ್ರೆಯಲ್ಲಿ ೪-೫ ಜನ ವೈದ್ಯರು ಇರಲಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ಆ ಹುದ್ದೆಗಳನ್ನು ತುಂಬಿದ್ದೀರಿ. ಇನ್ನು ಚರ್ಮಕ್ಕೆ ಸಂಬಂಧಿಸಿದ ವೈದ್ಯರೊಬ್ಬರನ್ನು ಅಲ್ಲಿಗೆ ನೇಮಿಸಬೇಕೆಂದು ನಾನು ತಮ್ಮನ್ನು ಕೇಳಿಕೊಂಡಿದ್ದೆ. ಅದನ್ನೂ ಕೂಡ ಆದಷ್ಟು ಬೇಗ ತುಂಬುವುದಾಗಿ ತಾವು ಹೇಳಿದ್ದೀರಿ. ಬಿ.ಎಂ.ಎಸ್. ಕಾಲೋನಿಯಲ್ಲಿರುವ ಆಸ್ಪತ್ರೆಗೆ ೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೫೦ ಹಾಸಿಗೆಗಳ ವ್ಯವಸ್ಥೆ ಮಾಡುವುದಾಗಿ ಹೇಳಿದ್ದೀರಿ ಈ ಆಸ್ಪತ್ರೆ ಕಾಡಿನಲ್ಲಿರುವುದನ್ನು ತಾವು ನೋಡಿದ್ದೀರಿ. ಆದರೂ ಇದು ಮೈಸೂರಿನಲ್ಲಿರುವ ಬಿ. ಕೆ. ಸ್ಯಾನಿಟೋರಿಯಂಗಿಂತಲೂ ಚೆನ್ನಾಗಿದೆಯೆಂದು ನಿಮ್ಮ ಇಲಾಖೆಯ ಉನ್ನತಾಧಿಕಾರಿಗಳೇ ಮೆಚ್ಚಿದ್ದಾರೆ. ಆದರೆ ಅಲ್ಲಿ ಕುಡಿ

ಯುವುದಕ್ಕೆ ನೀರಿಲ್ಲ. ೩ ಬೋರ್‌ವೆಲ್‌ಗಳನ್ನು ಹಾಕಿದರೆ ಮೂರರಲ್ಲೂ ನೀರು ಬರುತ್ತಿಲ್ಲ. ಆದ್ದರಿಂದ ದಯವಿಟ್ಟು ಆ ಆಸ್ಪತ್ರೆಗೆ ಕುಡಿಯುವ ನೀರನ್ನು ಒದಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ತಾವು ಕೊಟ್ಟಿರತಕ್ಕ Performance ಬಡ್ಜೆಟ್‌ನಲ್ಲಿ ಕಳೆದ ವರ್ಷ ಕೆಲವು ಎಕ್ಸ್‌ರೇ ಪ್ಲಾಂಟ್‌ಗಳನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಅಳವಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಆದರೆ ನಮ್ಮ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ತಾವು ಬಹಳ ಅನ್ಯಾಯ ಮಾಡಿದ್ದೀರಿ ಎಂದು ನಾನು ಇಲ್ಲಿ ಹೇಳಿದರೆ ಬಹುಶಃ ಅದು ತಪ್ಪಾಗಲಾರದು. ತಾವು ಪುಟ ೫೪ರಲ್ಲಿ ಹೇಳಿರುವುದು ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಏಕೆಂದರೆ ಬೇರೆ ಎಲ್ಲ ಜಿಲ್ಲೆಗೆ ಎಕ್ಸ್‌ರೇ ಪ್ಲಾಂಟ್‌ಗಳನ್ನು ಒದಗಿಸಿ ನಮ್ಮ ಮಂಡ್ಯ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ಬಿಟ್ಟಿದ್ದೀರಿ. ಈಗ ಇನ್ನೂ ೬ ತಾಲ್ಲೂಕು ಆಸ್ಪತ್ರೆಗಳಿಗೆ ಎಕ್ಸ್‌ರೇ ಪ್ಲಾಂಟ್‌ನ್ನು ಏನು ಕೊಡಬೇಕಾಗಿದೆ ಅದನ್ನೂ ಆದಷ್ಟು ಬೇಗ ಕೊಡಬೇಕು. ಅಲ್ಲದೆ ಗೌರ್ನಮೆಂಟ್ ಆಫ್ ಇಂಡಿಯಾ ಹೆಲ್ತ್ ಯೂನಿಟ್ಸ್ ಟೈಪ್ ನಮ್ಮ ಆಸ್ಪತ್ರೆಗಳಲ್ಲೂ ಈ ಎಕ್ಸ್‌ರೇ ಯೂನಿಟ್‌ಗಳನ್ನು ಅಳವಡಿಸಲು ಪ್ರಯತ್ನಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಈ ಸದನದ ಹಿರಿಯ ಸದಸ್ಯರಾದ ಶ್ರೀಮಾನ್ ಆರ್ಮುಗಂರವರು ಮಾತನಾಡುತ್ತಾ, ಈ ಆರೋಗ್ಯ ಇಲಾಖೆಯ ಪ್ಯಾಟ್ರನ್ ಯಾವರೀತಿ ಇರಬೇಕೆಂಬುದನ್ನು ಬಹಳ ವಿಷದವಾಗಿ ಹೇಳಿದ್ದಾರೆ. ಎಲ್ಲ ಹಂತಗಳನ್ನೂ ಡಿಸೆಂಟ್ರಲೈಸ್ ಆಗಬೇಕೆಂದು ಹೇಳಿದ್ದಾರೆ. ಈ ಇಲಾಖೆಯಲ್ಲಿರತಕ್ಕ ಸಣ್ಣಪುಟ್ಟ ಅಧಿಕಾರಿಗಳನ್ನೆಲ್ಲಾ ಒಂದು ಹಿಡಿತದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾದರೆ ಅಧಿಕಾರ ವಿಕೇಂದ್ರೀಕರಣ ಆಗಬೇಕಾದ್ದು ಅತಿ ಮುಖ್ಯವಾದುದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈ ಕಮ್ಯೂನಲ್ ಡಿಸೀಸಸ್ ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ದೇಶದಲ್ಲೇ ಹೆಚ್ಚು ಹೆಚ್ಚು ಕಂಡುಬರುತ್ತಿದೆ. ತಾವು ಈ ಆರೋಗ್ಯ ಇಲಾಖೆಯ ಜನಗಳ ಸಹಾಯವನ್ನು ತೆಗೆದುಕೊಂಡು ಈಗಲೇ ಇದನ್ನು ತಡೆಗಟ್ಟದೇ ಹೋದರೆ ಬಹುಶಃ ಇನ್ನು ನಾಲ್ಕಾರು ವರ್ಷಗಳಲ್ಲಿ ಈ ರೋಗ ಹೆಚ್ಚಿನ ರೀತಿಯಲ್ಲಿ ಹರಡಿಕೊಳ್ಳುತ್ತದೆ. ಪ್ರಿವೆನ್‌ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್ ಎಂದು ಇಂಗ್ಲಿಷ್‌ನಲ್ಲಿ ಹೇಳುವಂತ ರೋಗ ಬಂದಮೇಲೆ ಚಿಕಿತ್ಸೆಗಾಗಿ ಓಡಾಡುವುದಕ್ಕೆ ಬದಲು ರೋಗವೇ ಬರದಂತೆ ಮುನ್ನೆಚ್ಚರಿಗೆ ತೆಗೆದುಕೊಳ್ಳುವುದು ಒಳ್ಳೆಯದು. ಕಳೆದ ವರ್ಷ ಈ ಇಲಾಖೆ ಸಾಕಷ್ಟು ಕಾರ್ಯವನ್ನು ಸಾಧಿಸಿರುವುದಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತಮಾಡಿ ಇನ್ನೂ ಹೆಚ್ಚಿನ ರೀತಿಯಲ್ಲಿ ಮುಂದಿನ ವರ್ಷ ಕಾರ್ಯೋನ್ಮುಖರಾಗಬೇಕೆಂದು ಇಷ್ಟು ಮಾತ್ರ ಹೇಳಿ ಈ ಬೇಡಿಕೆಯ ಮೇಲೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ೧೯೭೮-೭೯ನೇ ಸಾಲಿಗೆ ಮಂಡಿಸಿರತಕ್ಕ ಆರೋಗ್ಯ ಇಲಾಖೆಯ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಇಲ್ಲಿ ಕೊಡಲು ಇಚ್ಛೆಪಡುತ್ತೇನೆ. ಪ್ರಪಂಚದಲ್ಲಿ ಎಲ್ಲರಿಗೂ ಮುಖ್ಯವಾಗಿ ಬೇಕಾದುದು ಆರೋಗ್ಯ. ಸಾಮಾನ್ಯವಾಗಿ ಯಾರಾದರೂ ಒಬ್ಬರಿಗೊಬ್ಬರು ಪರಸ್ಪರ ಭೇಟಿಯಾದಾಗ ಮೊದಲು ಕೇಳುವುದು ನೀವು ಕ್ಷೇಮವೆ ? ನೀವು ಆರೋಗ್ಯವೆ ? ಎಂದು. ಮನುಷ್ಯನಿಗೆ ಆರೋಗ್ಯ ಇಲ್ಲದಿದ್ದರೆ ಅವನ ಜೀವನದಲ್ಲಿ ಬೇರೆ ಏನೂ ಬೇಕಾಗುವುದಿಲ್ಲ. ಇಲ್ಲಿ ನಾವು ಆರೋಗ್ಯದ ಬಗ್ಗೆ ವಹಿಸಿರುವ ಕಾಳಜಿ ಬಹಳ ಕಡಿಮೆ ಎಂದು ನನಗನಿಸುತ್ತದೆ. ನನಗೆ ಗೊತ್ತಿರುವಂತೆ ಹಿಂದಿನ ಕಾಲದಲ್ಲಿ ಆಸ್ಪತ್ರೆಗಳು ಬಹಳ ಕಡಿಮೆ ಇದ್ದುವು, ಆಗಿನ ಜನ ಒಳ್ಳೆಯ ಆಹಾರವನ್ನು ಉಪಯೋಗಿಸುತ್ತಿದ್ದುದಲ್ಲದೆ ವ್ಯಾಯಾಮ, ಕಸರತ್ತು ಮುಂತಾದುವನ್ನು ಮಾಡಿಕೊಂಡು ತಮ್ಮ ಆರೋಗ್ಯವನ್ನು ಬಹಳ ಉತ್ತಮರೀತಿಯಿಂದ ಇಟ್ಟುಕೊಂಡಿರುತ್ತಿದ್ದರು. ಆದರೆ ಈಗ ಆಸ್ಪತ್ರೆಗಳು ಹೆಚ್ಚಾದಂತೆಲ್ಲಾ ಜನಗಳಿಗೆ ಅನಾರೋಗ್ಯವೂ ಹೆಚ್ಚಾಗುತ್ತಿದೆ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಆಸ್ಪತ್ರೆಗಳ ಸಂಖ್ಯೆ ಬಹಳವಾಗಿ ಬೆಳೆಯುತ್ತಿದೆ, ಜನಗಳಿಗೆ ನಾವು ಎಷ್ಟೇ ಸೌಲಭ್ಯಗಳನ್ನು ಒದಗಿಸಿದರೂ ಅವು ಸಾಕಾಗುತ್ತಿಲ್ಲ ; ಎನ್ನುವ ಮಾತನ್ನು ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತಿದ್ದೇನೆ.

ನಮ್ಮ ಆರೋಗ್ಯ ಮಂತ್ರಿಗಳು ಈ ವರ್ಷ ಅನೇಕ ಸಾಧನೆಗಳನ್ನು ಮಾಡಿ ನಮ್ಮ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇಲಾಖೆಯನ್ನು ವಿಕೇಂದ್ರೀಕರಣಗೊಳಿಸಿ, ರೀಜನಲ್ ಡೆಪ್ಯುಟಿ ಡೈರೆಕ್ಟರ್ ಹುದೆ

ಯನ್ನು ಅಪ್‌ಗ್ರೇಡ್ ಮಾಡಿದಲ್ಲದೆ ಸಬ್ ಡಿವಿಜನ್ ಮಟಕ್ಕೂ ಪ್ರಥಮ ಬಾರಿ ಇಲಾಖೆ ಅಧಿಕಾರಿ ನೇಮಿಸಿದ್ದಾರೆ. ಅಧಿಕಾರಿಗಳನ್ನು ಕೂಡ ಡೈರೆಕ್ಟರೇಟ್‌ನ್ನು ಎರಡು ವಿಭಾಗವಾಗಿ ವಿಂಗಡಿಸಿ ಮಾಡಿದಂಥ ಸಾಧನೆಯನ್ನುಟ್ಟಿಕೊಳ್ಳುವಂಥ ಸಾಧನೆಯಾಗಿರುತ್ತದೆ. ಇದಕ್ಕಾಗಿ ನಾವು ಕೂಡ ಅವರನ್ನು ಅಭಿನಂದಿಸಬೇಕಾಗಿದೆ. ಜೊತೆಗೆ ಪ್ರೈಮರಿ ಹೆಲ್ತ್ ಸೆಂಟರ್ ಎರಡು ತೆರೆದಿದ್ದೇವೆಂದು ಹೇಳಿದ್ದಾರೆ. ಇದು ಸಾಕಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ಆಸ್ಪತ್ರೆಗಳ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕ್ಷೇತ್ರವಾದ ಸಾಗರದಲ್ಲಿ ಜನರಲ್ ಆಸ್ಪತ್ರೆ ಒಂದು ಇರುತ್ತದೆ. ಇಲ್ಲಿಗೆ ಹೆಚ್ಚು ಗ್ರಾಮಾಂತರ ಪ್ರದೇಶಗಳು ಸೇರಿದ್ದು ಸಬ್ ಡಿವಿಜನ್ ಕೇಂದ್ರವಾಗಿದ್ದು ಅಲ್ಲದೆ ಕೆಲವು ವಿಶಿಷ್ಟರೋಗಗಳಿಂದ ಕೂಡಿದ ರೋಗಿಗಳು ಇಲ್ಲಿಗೆ ಬರುವುದರಿಂದ ಎಲ್ಲ ಔಷಧಿಗಳು ದೊರೆಯುವಂಥ ಸೌಲಭ್ಯವನ್ನು ಕಲ್ಪಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ. ಈ ಸಾರಿ ಅಂತ ಯಾವ ಸೌಲಭ್ಯವನ್ನು ಕಲ್ಪಿಸಿಲ್ಲ, ಮುಂದಿನ ಸಲವಾದರೂ ಕಲ್ಪಿಸುವುದಕ್ಕೆ ಮರೆಯುವುದಿಲ್ಲವೆಂದು ನಂಬಿದ್ದೇನೆ,

ಮತ್ತೆ ೪೪ ಹೊಸ ಎಕ್ಸ್‌ರೆ ಯಂತ್ರಗಳನ್ನು ತರಿಸಲಾಗಿದೆ ಎಂದು ಹೇಳಿರುತ್ತಾರೆ, ನಮ್ಮ ಸಾಗರ ಆಸ್ಪತ್ರೆಯಲ್ಲಿ ಬಹಳ ಹಳೆಯ ಮತ್ತು ಕಡಿಮೆ ಶಕ್ತಿಯುಳ್ಳ ಎಕ್ಸ್‌ರೆ ಯಂತ್ರವಿರುತ್ತದೆ. ಮುಂದಿನ ಸಲ ಇಲ್ಲಿಯ ಪರಿಸ್ಥಿತಿಯನ್ನು ನೋಡಿ ಒಂದು ಹೊಸ ಎಕ್ಸ್‌ರೆ ಯಂತ್ರವನ್ನು ತರಿಸಿಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ,

ಇನ್ನು ಟಿ.ಡಿ.ಬಿ. ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿ ಕೊಂಡದ್ದು ಮತ್ತು ಮೊಬಾಯಲ್ ಡಿಸ್‌ಪೆನ್‌ಸರಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದ್ದು ಸ್ತುತ್ಯಾರ್ಹವಾಗಿರುತ್ತದೆ. ಮತ್ತೆ ಇದರ ಜೊತೆಗೆ ಕಮ್ಯುನಿಟಿ ಹೆಲ್ತ್ ವರ್ಕರ್ಸ್ ಟ್ರೈನಿಂಗ್ ಕೊಟ್ಟು ಅವರಿಗೆ ಔಷಧಿಗಳ ಕಿಟನ್ನು ಕೊಡಬೇಕೆಂದು ಮಾಡಿರುವುದು ನಿಜವಾಗಿಯೂ ಸ್ತುತ್ಯಾರ್ಹವಾಗಿರುತ್ತದೆ. ಹಿಂದಿನ ಕಾಲದಲ್ಲಿ ಅರಳೆಕಾಯಿ ಪಂಡಿತರು ಗ್ರಾಮಾಂತರ ಪ್ರದೇಶಗಳಲ್ಲಿ ಇರುತ್ತಿದ್ದರು. ಸಣ್ಣ ಪುಟ್ಟ ಕಾಯಿಲೆಗೆ ಒಳಗಾದವರು ಯಾರೂ ಆಸ್ಪತ್ರೆಗಳಿಗೆ ಬರುವಂಥ ಸಂದರ್ಭಗಳು ಇರುತ್ತಿರಲಿಲ್ಲ. ಇದರಿಂದ ಆಸ್ಪತ್ರೆಗಳಿಗೆ ಒತ್ತಡ ಕಡಿಮೆಯಾಗಿತ್ತು. ಈಗ ತಾಲ್ಲೋಕ್‌ಗಳಲ್ಲಿರತಕ್ಕಂಥ ಆಸ್ಪತ್ರೆಗಳಿಗೆ ರೋಗಿಗಳ ಒತ್ತಡ ಹೆಚ್ಚಿದೆ. ಇದರ ಸಲುವಾಗಿ ನನ್ನ ಒಂದು ಸಲಹೆ ಏನೆಂದರೆ ಆಯುರ್ವೇದಿಕ್‌ನಲ್ಲಿ ಯಾರು ತಜ್ಞರು ಇರುತ್ತಾರೆ ಅವರಿಗೆ ಹೆಚ್ಚಿನ ಒಂದು ಪ್ರೋತ್ಸಾಹವನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ಮಲ್ಲಾಡಿಹಳ್ಳಿಯಲ್ಲಿರುವ ರಾಘವೇಂದ್ರ ಸ್ವಾಮಿಯವರು ಸಾವಿರಾರು ಜನರಿಗೆ ಗಿಡಮೂಲಿಕೆಗಳ ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ಸಣ್ಣ ಪುಟ್ಟ ರೋಗಗಳು ಅಂದರೆ ತಲೆನೋವು, ಜಾಂಡೀಸ್ ಇವೆಲ್ಲ ರೋಗ ನಮ್ಮ ಆಯುರ್‌ವೇದಿಕ್‌ನಿಂದಲೇ ಗುಣವಾಗುತ್ತದೆ. ಜಾಂಡೀಸ್ ಎಂಬತಕ್ಕಂಥ ರೋಗವು ಆಸ್ಪತ್ರೆಯಲ್ಲಿ ಮೂರು ತಿಂಗಳು ಇದ್ದು ಚಿಕಿತ್ಸೆಯನ್ನು ಪಡೆದರೂ ಕೂಡ ಗುಣವಾಗುವುದಿಲ್ಲ. ಇಂಥ ಕಾಯಿಲೆಯನ್ನು ಒಂದು ವಾರದಲ್ಲಿ ಚಿಕಿತ್ಸೆಕೊಟ್ಟು ಗುಣಮಾಡುತ್ತಾರೆ. ಸಾವಿರಾರು ಜನರು ಪ್ರತಿ ವಾರವೂ ಬಂದು ಚಿಕಿತ್ಸೆಯನ್ನು ಪಡೆದುಕೊಂಡು ಹೋಗುತ್ತಿರುತ್ತಾರೆ. ಇಂಥವರ ಉಪಯೋಗವನ್ನು ಪಡೆದುಕೊಳ್ಳಬೇಕು. ಒಂದು ಟ್ರೈನಿಂಗ್ ಸೆಂಟರನ್ನು ಮಾಡಿ ಗಿಡಮೂಲಿಕೆಗಳ ಔಷಧಿಗಳು ಹೆಚ್ಚಿನಮಟ್ಟದಲ್ಲಿ ಉಪಯೋಗಿಸುವಂತೆ ಪ್ರಚಾರ ಮಾಡಿದರೆ ಸಣ್ಣ ಸಣ್ಣ ಚಿಕಿತ್ಸೆಗಳಿಗಾಗಿ ಆಸ್ಪತ್ರೆಗಳಿಗೆ ಬರುವುದು ತಪ್ಪಿ ಒತ್ತಡವೂ ತಪ್ಪುತ್ತದೆಂದು ಹೇಳುತ್ತೇನೆ. ದೊಡ್ಡ ಖಾಯಿಲೆಗಳ ರೋಗಿಗಳಾಗಿರುವವರಿಗೆ ಇದರಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಸ್ವಲ್ಪಮಟ್ಟಿನ ಅವಕಾಶವಾಗುತ್ತದೆ, ಈ ದಿಸೆಯಲ್ಲಿ ತಾವು ಯೋಜನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೆಂದರೆ ಹಿಂದಿನ ಆರೋಗ್ಯ ಮಂತ್ರಿಗಳು ಕೆಲವು ಕಡೆಗಳಲ್ಲಿ ಅಲ್ಲಲ್ಲಿ ಶಂಕು ಸ್ಥಾಪನೆ ಮಾಡಿಬಿಟ್ಟು ಹೋಗಿರತಕ್ಕಂಥ ಆಸ್ಪತ್ರೆ ಕಟ್ಟಡಗಳನ್ನು ಮಾನ್ಯ ಮಂತ್ರಿಗಳ ಜ್ಞಾಪಕಕ್ಕೆ ತಂದಿರುತ್ತೇವೆ ಅವನ್ನೂ ಕೂಡ ಮುಂದುವರಿಸಬೇಕು ಎನ್ನುವ ದಿಸೆಯಲ್ಲಿ ಒಂದು ಹೆಜ್ಜೆ ತಾವು ಮುಂದಿಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಶಂಕು ಸ್ಥಾಪನೆಮಾಡಿ ಬಿಟ್ಟುಹೋಗಿದ್ದ ಆಸ್ಪತ್ರೆಯ ಕೆಲಸವನ್ನು ನಡೆಸಿಕೊಡುವ ಪ್ರಯತ್ನವನ್ನು ತಾವು ಮಾಡಿರುವುದರಿಂದ ತುಂಬಾ ಸಂತೋಷವಾಗಿರುತ್ತದೆ.

ಇನ್ನು ಶಿಕಾರಿಪುರದಲ್ಲಿರತಕ್ಕಂಥ ಕಂಬೈಂಡ್ ಆಸ್ಪತ್ರೆಯನ್ನು ಒಂದು ಜನರಲ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸಾರ್ವಜನಿಕರು ೩೦ ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಅದಕ್ಕಾಗಿ ಶಂಕು

ಸ್ಥಾಪನೆಯೂ ಕೂಡ ಆಯಿತು. ಹಿಂದೆ ಇದ್ದಂಥ ಮಂತ್ರಿಗಳು ಮಾಡಿದರು. ಆದರೆ ಇದುವರೆವಿಗೂ ಕೆಲಸ ಮಾಡಲು ಪ್ರಯತ್ನ ಮಾಡಲಿಲ್ಲ. ಈಗಲಾದರೂ ಕೂಡ ತಾವು ಇದರ ಬಗ್ಗೆ ಆಸಕ್ತಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಕ್ಷೇತ್ರವು ಶರಾವತಿಯೋಜನೆ ಪ್ರದೇಶವಾಗಿರುವುದರಿಂದ ನೀರಿನಿಂದ ಸುತ್ತುವರಿದ ಗ್ರಾಮಗಳು ವಿಶೇಷವಾಗಿರುತ್ತವೆ. ಇದರಿಂದ ಸಂಚಾರ ಮಾರ್ಗಗಳಿಲ್ಲದೆ ಬಹಳ ಹಿಂದುಳಿದ ಪ್ರದೇಶವಾಗಿರುತ್ತದೆ. ಸಾಗರ ಪೇಟೆಗೆ ಬರಬೇಕೆಂದರೆ ೭೦–೮೦ ಕಿಲೋಮೀಟರ್‌ಗಳಷ್ಟು ಸುತ್ತಿ ಬರಬೇಕಾಗಿದೆ. ಕೆ.ಎಸ್.ಆರ್.ಟಿ.ಸಿ. ಯವರೂ ಬಸ್ ಒದಗಿಸುವ ಮನಸ್ಸು ಮಾಡಿಲ್ಲ ಇದರ ಬಗ್ಗೆ ಆಸಕ್ತಿ ವಹಿಸಿ ಆ ಭಾಗಕ್ಕೆ ಹೆಚ್ಚು ಸೌಕರ್ಯ ಒದಗಿಸಬೇಕು.

ಇನ್ನು ಕಡೂರು ಹೋಬಳಿಯಲ್ಲಿ ಕೆ.ಎಫ್.ಡಿ. ಎಂಬ ಕಾಯಿಲೆಯು ತಲೆದೋರಿ ಹೆಚ್ಚು ಜನರು ಈ ರೋಗಕ್ಕೆ ತುತ್ತಾಗಿದ್ದಾರೆ. ಬೆಂಗಳೂರಿನಲ್ಲಿ ಮೊಬಾಯಿಲ್ ಡಿಸ್‌ಪೆನ್‌ಸರಿ ಮಾಡಿರುವಂತೆ ಇಲ್ಲಿಯೂ ಕೂಡ ಒಂದು ಮೊಬಾಯಿಲ್ ಡಿಸ್‌ಪೆನ್‌ಸರಿಯನ್ನು ಇಟ್ಟರೆ ಮಾನ್ಯ ದಿವಾಕರ್‌ರವರು ಹೇಳಿದ ಹಾಗೆ ನಮ್ಮ ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ಇವೇ ಮುಂತಾದ ಹಳ್ಳಿಗಳಲ್ಲಿ, ಕೆ.ಎಫ್‌ಡಿ ಕಾಯಿಲೆ ಇರತಕ್ಕಂಥ ಪ್ರದೇಶಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಈ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಒಂದು ಮೊಬಾಯಿಲ್ ಡಿಸ್‌ಪೆನ್ಸರಿಯನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದಲ್ಲದೆ ಕ್ಷಯ ರೋಗಗಳ ಚಿಕಿತ್ಸೆಗಾಗಿ ಸಾಗರದಂತಹ ಸಬ್ ಡಿವಿಜನ್ ಐಸೋಲೇಟೆಡ್ ವಾರ್ಡ್ ಇರುವುದಿಲ್ಲ ಸಾಗರದಲ್ಲಿ ಇಂಥ ಒಂದು ಕ್ಷಯ ರೋಗಕ್ಕೆ ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸಬಯಸುತ್ತೇನೆ.

ಮತ್ತೊಂದು ವಿಷಯವೇನೆಂದರೆ ದಾವಣಗೆರೆ ಗ್ಲೋಕೋಸ್ ಪ್ಲಾಂಟ್ ತಯಾರಿಕೆ ಘಟಕವನು ಕೊಟ್ಟ ಹಾಗೆ, ನಮ್ಮ ಶಿವಮೊಗ್ಗ ಜಿಲ್ಲೆಗೂ ಗ್ಲೋಕೋಸ್ ಉತ್ಪಾದನೆ ಮಾಡತಕ್ಕಂಥ ಪ್ಲಾಂಟನ್ನು ಕೊಡಬೇಕೆಂದು, ಸಣ್ಣಪುಟ್ಟ ಮೆಡಿಷನ್ಸ್ ತಯಾರುಮಾಡತಕ್ಕಂಥ ಒಂದು ಫಾರ್ಮಸಿ ಸೆಂಟರನ್ನು ಮಂಜೂರು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ,

ಇನ್ನು ಏಳನೂರು ಕೊಳವೇಬಾವಿಗಳನ್ನು ತೋಡಲು ಪ್ರಯತ್ನ ಮಾಡಿ ೬೭೪ ಕೊಳವೆ ಬಾವಿಗಳು ತಯಾರಾಗಿದೆ ಎಂದು ಹೇಳಿರುತ್ತೀರಿ. ಇದರಲ್ಲಿ ಒಂದು ವಿಚಾರವಿರುತ್ತದೆ. ಬಾವಿಗಳನ್ನು ತೋಡಿದ್ದಾಗ ಕಾಂಪೌಂಡ್ ಒಳಗಡೆ ಮಾಡಿರುವುದರಿಂದ ಕೆಲವೇ ಜನಕ್ಕೆ ಉಪಯೋಗವಾಗುತ್ತದೆಯೋ ಹೊರತು ಎಲ್ಲರಿಗೂ ಉಪಯೋಗವಾಗುತ್ತಿಲ್ಲ. ಆದ್ದರಿಂದ ಕಾಂಪೌಂಡ್‌ನಿಂದ ಹೊರಗಡೆ ಮಾಡುವುದಕ್ಕೆ ಏರ್ಪಾಡು ಮಾಡಿದರೆ ಅಕ್ಕಪಕ್ಕದಲ್ಲಿರತಕ್ಕ ಮನೆಗಳವರಿಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಕೊಳುವೆ ಬಾವಿಗಳನ್ನು ಮುಂದೆ ಮಾಡುವಾಗ ಸಾರ್ವಜನಿಕರ ಹಿತದೃಷ್ಟಿಯನ್ನು ಇಟ್ಟುಕೊಂಡು ಬೇರೆಯವರಿಗೂ ಅನುಕೂಲವಾಗುವಂತ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಆಸ್ಪತ್ರೆ ಎಕ್ವಿಪ್‌ಮೆಂಟ್‌ಗಳು ತೊಂದರೆಗೆ ಈಡಾದಾಗ ಇದನ್ನು ರಿಪೇರಿ ಮಾಡತಕ್ಕಂಥ ಯೂನಿಟ್‌ಗಳನ್ನು ತೆರೆಯಬೇಕು. ಏತಕ್ಕೆಂದರೆ ಸಣ್ಣಪುಟ್ಟ ರಿಪೇರಿಗೂ ಬೇರೆಕಡೆಕಳುಹಿಸಿ ವರ್ಷಗಟ್ಟಲೆ ರಿಪೇರಿಯಾಗದೆ ಕಾಯುತಕ್ಕಂಥ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಎಕ್ವಿಪ್‌ಮೆಂಟ್ ರಿಪೇರಿ ಮಾಡತಕ್ಕಂಥ ಯೂನಿಟ್‌ಗಳನ್ನು ತೆರೆಯಬೇಕೆಂದು ಹೇಳುತ್ತೇವೆ.

೪.೦೦ ಪಿ.ಎಂ.

ತೋಟಗಾರಿಕೆ ಇಲಾಖೆ ವತಿಯಿಂದ ಬೆಂಗಳೂರು ಮತ್ತು ಮೈಸೂರಿನಲ್ಲಿ ಗಿಡ ಮೂಲಿಕೆಗಳನಲ್ಲಿ ಬೆಳೆಸುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ, ಆದರೆ ನಮ್ಮ ಮಲೆನಾಡು ಭಾಗದಲ್ಲಿ ನಮಗೆ ಬೇಕಾದಂಥ ಅನೇಕ ತರಹದ ಗಿಡಮೂಲಿಕೆಗಳು ಇವೆ. ಅದು ತಾನಾಗಿಯೇ ಬೆಳೆದಿವೆ. ಅಲ್ಲಿ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ಯಾರೂ ಹೋಗದಿದ್ದರೂ ಅದು ತಾನಾಗಿಯೇ ಬೆಳೆದಿವೆ. ಇದರಿಂದ ನಮಗೆ ಬೇಕಾದ ಗಿಡಮೂಲಿಕೆಗಳು ವಿಶಿಷ್ಟವಾದ ಹವಾಗುಣದಲ್ಲಿ, ವಿಶಿಷ್ಟವಾದ ಮಣ್ಣಿನ ಗುಣದಲ್ಲಿ ಮಾತ್ರ ಬೆಳೆಯುತ್ತದೆ ಎಂದು ತಿಳಿದುಕೊಳ್ಳಬಹುದು. ಬೇರೆ ಕಡೆ ಎಲ್ಲೂ ಸಿಗದಂಥ ಗಿಡ ಮೂಲಿಕೆಗಳು ನಮ್ಮ ಕಡೆ ಸಿಗುತ್ತವೆ. ತೋಟಗಾರಿಕೆ ಇಲಾಖೆಗೆ ವಿಶೇಷವಾಗಿ ಹಣವನ್ನು ಒದಗಿಸಿ

ಪ್ರತಿಯೊಂದು ತಾಲ್ಲೂಕಿನಲ್ಲಿ ಹಾರ್ಟಿಕಲ್ಚರ್ ಫಾರಮನ್ನು ಮಾಡಿದ್ದಾರೆ. ಆದರ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಲೆನಾಡು ಭಾಗದಲ್ಲಿ ಗಿಡಮೂಲಿಕೆಗಳು ಹೇರಳವಾಗಿ ಸಿಗುವುದರಿಂದ ಮತ್ತು ಅಲ್ಲಿ ಗಿಡ ಮೂಲಿಕೆಗಳು ಬೆಳೆಯುವುದಕ್ಕೆ ಸಾಕಷ್ಟು ಅನುಕೂಲಗಳಿರುವುದರಿಂದ ಅಲ್ಲಿ ಇರುವ ಇಂಥಾ ಫಾರಮನ್ನು ಉಪಯೋಗಿಸಿಕೊಂಡು ಅಲ್ಲಿ ಗಿಡ ಮೂಲಿಕೆಗಳನ್ನು ಬೆಳೆಸುವುದಕ್ಕೆ ವಿಶೇಷವಾಗಿ ಆಯುರ್ವೇದ ವೈದ್ಯಕ್ಕೆ ಆವಶ್ಯಕವಾದ ಗಿಡಮೂಲಿಕೆಗಳನ್ನು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕು ಇನಕೆ ಕ್ಕೇಸ್ಕರ ಸಾಗರದಲ್ಲಿರುವ ಫಾರಮನ್ನು ಉಪಯೋಗಿಸಿಕೊಂಡರೆ ನನಗೆ ಅತ್ಯಂತ ಸಂತೋಷವೆನಿಸುತ್ತದೆ. ಅಲ್ಲಿ ಮಲ್ಲಾಡಿಹಳ್ಳಿಯ ಯೋಗ ಶಿಕ್ಷಣ ಮತ್ತು ಆಯುರ್ವೇದ ಪದ್ಧತಿಯನ್ನು ಬಳಕೆ ಮಾಡಿಕೊಂಡರೆ ಬಹಳ ಜನರಿಗೆ ಆದರಿಂದ ಅನುಕೂಲವಾಗುತ್ತದೆ. ಅಲ್ಲದೆ ಅವರು ಒಂದು ಟ್ರೈನಿಂಗ್ ಪ್ರೊಗ್ರಾಮನ್ನೂ ಕೂಡ ಮಾಡಿದ್ದಾರೆ, ಅಲ್ಲದೆ ದೊಡ್ಡ ಆಯುರ್ವೇದ ಕಾಂಪ್ಲೆಕ್ಸನ್ನು ಮಾಡುವ ಯೋಜನೆಯನ್ನೂ ಇಟ್ಟುಕೊಂಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪೂರ್ಣ ಬೆಂಬಲ ಮತ್ತು ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಮಾನ್ಯ ಆರೋಗ್ಯ ಮಂತ್ರಿಗಳಾದ ತಾವು ಆರೋಗ್ಯವಾಗಿದ್ದೀರಿ ನಮ್ಮನ್ನೂ ಆರೋಗ್ಯವಾಗಿಟ್ಟಿದ್ದೀರಿ; ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ೫೮—೫೯ ಕೋಟಿ ರೂಪಾಯಿನ ಬೇಡಿಕೆಯನ್ನು ಸಭೆಯ ಮುಂದಿಟ್ಟಿದ್ದೀರಿ ಇದು ಇವತ್ತಿನ ಅವಶ್ಯಕತೆಗೆ ಲೆಕ್ಕ ಹಾಕಿದರೆ ಸ್ವಲ್ಪ ಕಡಿಮೆಯಾದರೂ ಕೂಡ ಮುಂಬರುವ ವರ್ಷದಲ್ಲಿ ಈ ಎಲ್ಲಾ ಅಂಶಗಳನ್ನೂ ಮೈಗೂಡಿಸಿಕೊಂಡು ಜನರಿಗೆ ಇನ್ನೂ ಹೆಚ್ಚು ತೃಪ್ತಿಕರವಾದ ಸೇವೆಯನ್ನು ನೀಡುವಲ್ಲಿ ತಮಗೆ ಯಶಸ್ಸು ಸಿಗಲೆಂದು ಹಾರೈಸಿ ನೀವು ಇಟ್ಟಿರತಕ್ಕ ಬಡ್ಜೆಟ್ಟನ್ನು ಬೆಂಬಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ ಲಿಂಗಪ್ಪ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಆರೋಗ್ಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ೬೫ ಕೋಟಿ ರೂಪಾಯಿನ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ, ಸಮಾಜಸೇವೆಗೆ ಮೀಸಲಾದಂಥ ಸರ್ಕಾರೀ ಇಲಾಖೆಗಳಲ್ಲಿ ಸಾರ್ವಜನಿಕ ಆರೋಗ್ಯ ಇಲಾಖೆ ಅತೀ ಪ್ರಾಮುಖ್ಯವಾದುದು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆರೋಗ್ಯವೇ ಭಾಗ್ಯ' ಎಂಬ ಮಾತನ್ನು ಹೇಳುವಾಗ ಎಷ್ಟು ಜನ ಈ ರಾಜ್ಯದಲ್ಲಿ ಆರೋಗ್ಯವಂತರು, ದೃಢಕಾಯರಾದಂಥವರು ಇದ್ದಾರೆ ಎಂಬುದನ್ನೂ ಗಮನಿಸಬೇಕಾಗಿದೆ. ಎಷ್ಟು ಜನ ಆರೋಗ್ಯವಂತರು, ದೃಢಕಾಯರು ದೇಶದಲ್ಲಿರುತಾರೋ ಅಷ್ಟು ಹೆಚ್ಚು ಸಂಪತನ್ನು ದೇಶದಲ್ಲಿ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂಬ ವಿಚಾರ ತತ್ವದಲ್ಲಿ ಅಡಗಿದೆ, ಸಾರ್ವಜನಿಕ ಆರೋಗ್ಯ ರಕ್ಷಣೆ ಮಾಡುವ ಹೊಣೆ ಈ ಆರೋಗ್ಯ ಇಲಾಖೆಗೆ ಸೇರಿದ್ದು. ಈ ಹೊಣೆಯನ್ನು ಈ ಇಲಾಖೆ ಎಷ್ಟರಮಟ್ಟಿಗೆ ನಿರ್ವಹಿಸುತ್ತಿದೆ ಎಂಬುದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಈ ಇಲಾಖೆಯ ಆಗುಹೋಗುಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ವಿಷಯ ಈ ಇಲಾಖೆಗೆ ಒದಗಿಸಿರುವ ಹಣದಿಂದಲೇ ಹೇಳಬಹುದು. ಈ ಆರೋಗ್ಯ ಇಲಾಖೆ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ ಎಂಬುದಕ್ಕೆ ಇದಕ್ಕೆ ಒದಗಿಸಿರತಕ್ಕ ಹಣವೇ ಸಾಕ್ಷಿಯಾಗಿದೆ. ಈ ಇಲಾಖೆ ಸಾರ್ವಜನಿಕರಿಗೆ ತೃಪ್ತಿಕರವಾಗಿ ಸೇವೆಯನ್ನು ಸಲ್ಲಿಸುವಂತೆ ಸ್ಥಿತಿಯಲ್ಲಿಲ್ಲ. ಕಾರಣ ಸರ್ಕಾರ ಈ ದಿಸೆಯಲ್ಲಿ ವಿಫಲವಾಗಿದೇ ದಿನದಿಂದ ದಿನಕ್ಕೆ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಔಷಧಿಗಳ ಬೆಲೆಯೂ ಕೂಡ ಅದೇ. ಪ್ರಮಾಣದಲ್ಲಿ ಹೆಚ್ಚುತ್ತಿದೆ. ಸಿಬ್ಬಂದಿ ವರ್ಗವೂ ಕೂಡ ಅದೇ ಪ್ರಮಾಣದಲ್ಲಿ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೆ ಖರ್ಚಾಗತಕ್ಕ ಹಣವೂ ಕೂಡ ಹೆಚ್ಚುತ್ತಿದೆ. ಆದರೆ ಇದಕ್ಕೆ ತಕ್ಕಂತೆ ರೋಗಿಗಳಿಗೆ ಒದಗಿಸಬೇಕಾದ ಸೌಲಭ್ಯವನ್ನು ಮಾತ್ರ ಒದಗಿಸಿಲ್ಲ. ಆಗತ್ಯವಾದ ಹಣಕಾಸನ್ನು ಒದಗಿಸಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸಾರ್ವಜನಿಕ ಆರೋಗ್ಯದ ರಕ್ಷಣೆ ಮಾಡಿ ದೃಢಕಾಯರಾಗುವಂತೆ ಜನರ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕದ್ದು ಈ ಆರೋಗ್ಯ ಇಲಾಖೆಯ ಪವಿತ್ರವಾದ ಕರ್ತವ್ಯ. ದೃಢಕಾಯರಾದ ಜನ ಇದ್ದರೇನೇ ಸಂಪತ್ತನ್ನು ಸೃಷಿ ಮಾಡುವುದಕ್ಕೆ ಸಾಧ್ಯ. ಸಂಪತ್ತನ್ನು ಹೆಚ್ಚಿಸಬೇಕಾದರೆ ಅದು ಶ್ರಮ ಮತ್ತು ದುಡಿಮೆಯಿಂದ ಮಾತ್ರ. ದುಡಿಮೆ ಮಾಡತಕ್ಕ ಚೇತನ ಜನತೆಗೆ ಬರಬೇಕಾದರೆ ಆರೋಗ್ಯವನ್ನು ಸಮರ್ಪಕವಾದ ರೀತಿಯಲ್ಲಿ ನೋಡತಕ್ಕದ್ದು ಅತ್ಯಗತ್ಯ. ಆ ದೃಷ್ಟಿಯಿಂದ ಈ ಇಲಾಖೆಗೆ ಏನು ಹಣವನ್ನು ಒದಗಿಸಿದೆಯೋ ಇದು ಅತ್ಯಲ್ಪ ವೆಂದು ಹೇಳಬಯಸುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳು ಇನ್ನೂ ಹೆಚು ಶ್ರಮಪಟ್ಟು

ಇನ್ನೂ ಹೆಚ್ಚು ಹಣವನ್ನು ಈ ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಸಾಧನೆಯನ್ನು ಮಾಡಬೇಕೆಂದು ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾತನಾಡಿದಂಥ ಅನೇಕ ಸ್ನೇಹಿತರು ಹಳ್ಳಿಗಾಡಿ ನಲ್ಲಿರತಕ್ಕ ಆಸ್ಪತ್ರೆಗಳ ಸ್ಥಿತಿಗತಿಗಳು ಮತ್ತು ಪಟ್ಟಣ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳ ಸ್ಥಿತಿಗಳು ಯಾವ ರೀತಿ ಇವೆ ಎಂಬುದರ ಬಗ್ಗೆ ಹೇಳಿದ್ದಾರೆ. ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳ ಸ್ಥಿತಿಗತಿಗಳಿಗೂ ಪಟ್ಟಣ ಪ್ರದೇಶದಲ್ಲಿರುವ ಆಸ್ಪತ್ರೆಗಳ ಸ್ಥಿತಿಗತಿಗಳಿಗೂ ಬಹಳ ಅಂತರ ಇದೆ. ಕೇವಲ ೬ ಸಾವಿರ ರೂಪಾಯಿಗಳ ಔಷಧಿಗಳನ್ನು ಒಂದು ವರ್ಷಕ್ಕೆ ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಿಗೆ ಒದಗಿಸಿದರೆ ಇದರಿಂದ ಎಷ್ಟು ಜನ ರೋಗಿಗಳಿಗೆ ಔಷದೋಪಚಾರ ಮಾಡಬಹುದು ಎಂಬ ಪ್ರಶ್ನೆಯನ್ನು ನಾವು ಹಾಕಬೇಕಾಗಿದೆ. ಹಳ್ಳಿಗಾಡಿನ ಲ್ಲಿರತಕ್ಕ ಜನರ ಸಂಖ್ಯೆ ಶೇಕಡ ೮೦ ರಷ್ಟು ಇದ್ದರೆ ಪಟ್ಟಣದಲ್ಲಿ ಇರತಕ್ಕ ಜನರ ಸಂಖ್ಯೆ ಶೇಕಡ ೨೦ ರಷ್ಟು. ಶೇಕಡ ೨೦ ರಷ್ಟು ಇರುವ ಜನರಿಗೆ ಯಾವ ಪ್ರಮಾಣದಲ್ಲಿ ಸೌಲಭ್ಯವನ್ನು ಕಲ್ಪಿಸಲಾಗಿದೆ, ಶೇಕಡ ೮೦ ಭಾಗ ಜನಸಂಖ್ಯೆ ಇರುವ ಜನರಿಗೆ ಯಾವ ಪ್ರಮಾಣದಲ್ಲಿ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂಬುದನ್ನು ನೋಡಬೇಕು. ಶೇಕಡ ೧೦೦ ರಷ್ಟು ಬಡವರು ಇರತಕ್ಕ ಹಳ್ಳಿಗಾಡಿನವರಿಗೆ ವರ್ಷಕ್ಕೆ ೬ ಸಾವಿರ ರೂಪಾಯಿಯನ್ನು ಔಷಧಿಗಳಿಗೋಸ್ಕರ ಖರ್ಚು ಮಾಡಿದರೆ ಅದರಿಂದ ಶೇಕಡ ೧೦ರಷ್ಟು ಜನರಿಗೂ ಕೂಡ ಔಷಧಿಯನ್ನು ಒದಗಿಸುವುದಕ್ಕಾಗುವುದಿಲ್ಲ ಎಂಬ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡುವ ದಾರಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ಮಹಾ ಪ್ರಯತ್ನ ನಡೆದಿದೆ. ಇವತ್ತು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಕೂಡ ವರ್ಗ ವನ್ನು ಸೃಷ್ಟಿ ಮಾಡುವ ಪ್ರಯತ್ನ ನಡೆದಿದೆ. ಆಸ್ಪತ್ರೆಗಳು ಸ್ಪೆಷಲ್ ವಾರ್ಡ್‌ಗಳೆಂದು ಮಾಡಿದ್ದಾರೆ. ಸ್ಪೆಷಲ್ ವಾರ್ಡ್‌ಗಳೆಂದು ಮಾಡಿ ಅದಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ನಾನು ಕೇಳುತ್ತೇನೆ ಸ್ಪೆಷಲ್ ವಾರ್ಡ್‌ಗಳು ಯಾತಕ್ಕೆ ಇರಬೇಕು ? ಇದೇ ರೀತಿಯ ಸೌಲಭ್ಯವನ್ನು ಹಳ್ಳಿಗಾಡಿನ ಜನರಿಗೆ ಏತಕ್ಕೆ ಒದಗಿಸಬಾರದು ? ಬಡವ ಬಲ್ಲಿದ ಮೇಲು ಕೀಳು ಎಂಬ ಭೇದಭಾವ ಇಲ್ಲದೆ ವೈದ್ಯಸೌಲಭ್ಯ ವನ್ನು ಒದಗಿಸುವ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು ವರದಿಯಲ್ಲಿ ಕೊಡುತ್ತಾ ರಾಜ್ಯದಲ್ಲಿ ೩೧ ೫೦೦ ಹಾಸಿಗೆಗಳ ಸೌಲಭ್ಯಗಳನ್ನು ಏರ್ಪಾಡು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಹಳ್ಳಿಗಾಡಿನ ಪ್ರದೇಶದಲ್ಲಿನ ಜನರಿಗೆ ಎಷ್ಟು ಒದಗಿಸಿದ್ದೀರಿ ಎಂಬ ಪ್ರಶ್ನೆಯನ್ನು ಹಾಕಬೇಕಾಗಿದೆ. ನನಗೆ ಗೊತ್ತಿರುವ ಹಾಗೆ ೧೦೦ಕ್ಕೆ ೮೦ ರಷ್ಟಿರುವ ಜನರಿಗೆ ೫ ಸಾವಿರ ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಿದ್ದೀರಿ. ಇದು ಸಾಕೇ ಎಂದು ಕೇಳಬೇಕಾಗಿದೆ. ಇದು ಸಮಾಜವಾದೀ ಕಾರ್ಯಕ್ರಮವೇ ? ಇದರಿಂದ ಯಾರು ಸಮಾಜದಲ್ಲಿ ದುರ್ಬಲರು, ಆರ್ಥಿಕವಾಗಿ ದುರ್ಬಲರು ಬಡವರು ಎಂದು ಹೇಳುತ್ತೀವೋ ಅವರಿಗೆ ಒದಗಿಸತಕ್ಕ ಸೌಲಭ್ಯವೇ ಎಂಬ ಪ್ರಶ್ನೆಯನ್ನೂ ಕೂಡ ಇವತ್ತಿನ ದಿವಸ ಹಾಕಬೇಕಾಗಿದೆ. ನಾವು ಬರೀ ಸಮಾಜ ವಾದವನ್ನು ಹೇಳುವುದಕ್ಕೆ ಹೊರಟಿದ್ದೇವೆ. ಆದರೆ ಅದು ಆಚರಣೆಯಲ್ಲಿ ಜಾರಿಯಾಗಿಲ್ಲ ಎಂಬ ಅಂಶ ವ್ಯಕ್ತವಾಗುತ್ತದೆ. ಆದ್ದರಿಂದ ಸರ್ಕಾರ ಇನ್ನು ಮುಂದಾದರೂ ಕೂಡ ಆರ್ಥಿಕವಾಗಿ, ಸಾಮಾಜಿಕ ವಾಗಿ ಯಾರು ದುರ್ಬಲರು ಇರುತ್ತಾರೋ ಅಂತಹ ಕಡೆ ವೈದ್ಯಕೀಯ ಸೌಲಭ್ಯವನ್ನು ಯಾವುದೇ ತಾರತಮ್ಯ ಇಲ್ಲದ ಒದಗಿಸತಕ್ಕಂತಹ ವ್ಯವಸ್ಥೆಯನ್ನು ಅತಿ ಜರೂರಾಗಿ ಆಗಬೇಕು. ಆ ದಿಕ್ಕಿನಲ್ಲಿ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತಾರೆಂಬ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಯಾವುದೇ ತಾರತಮ್ಯ, ವ್ಯತ್ಯಾಸ ಇಲ್ಲದೆ ಕೆಲಸ ಮಾಡಿದರೆ ಆದ್ದರಿಂದ ಸಮಾಜಕ್ಕೂ ಒಳ್ಳೆಯದು. ದೇಶಕ್ಕೂ ಒಳ್ಳೆಯದು. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಹಳ್ಳಿಗಾಡಿನಲ್ಲಿ ವಿಶೇಷವಾಗಿ ಪರಿಣತವಾದ ವೈದ್ಯಕೀಯ ಸೌಲಭ್ಯ ಇಲ್ಲ. ಇದರ ಬಗೆ ಈಗಾಗಲೇ ಸರ್ಕಾರದವರು ಒಂದು ಘೋಷಣೆಯನ್ನು ಮಾಡಿದ್ದಾರೆ. ಜಿಲ್ಲಾ ಮಟ್ಟದ ಆಸ್ಪತ್ರೆಗಳು ಮತ್ತು ದೊಡ್ಡ ದೊಡ್ಡ ನಗರಗಳಲ್ಲಿರುವಂತಹ ಆಸ್ಪತ್ರೆಗಳ ಜೊತೆಗೆ ತಾಲ್ಲೂಕು ಕೇಂದ್ರಗಳಲ್ಲಿರ ತಕ್ಕಂತಹ ಆಸ್ಪತ್ರೆಗಳನ್ನೂ ಕೂಡ ಮೇಲ್ದರ್ಜೆಗೆ ಏರಿಸುತ್ತೇವೆ ಎನ್ನುವಂತಹ ಘೋಷಣೆಯನ್ನು ಹಲ ವಾರು ವರ್ಷಗಳ ಹಿಂದೆಯೇ ಸರ್ಕಾರ ಮಾಡಿತ್ತು. ಆದರೆ ಅದು ಇನ್ನೂ ಆಚರಣೆಯಲ್ಲಿ ಬಂದಿಲ್ಲ. ಕಾರ್ಯರೂಪಕ್ಕೆ ಬಂದಿಲ್ಲ. ಈ ದಿಕ್ಕಿನಲ್ಲಿ ಸಚಿವರು ತಮ್ಮ ಗಮನ ಹರಿಸಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆ ಒಂದು ಇದೆ. ಅದರಲ್ಲಿ ಕೇವಲ ೬ ಹಾಸಿಗೆಗಳೇ ಅಲ್ಲಿ ಇರತಕ್ಕಂತಹದ್ದು. ಆದರೆ ನನ್ನ ಕ್ಷೇತ್ರದ ಜನಸಂಖ್ಯೆ ೨ ಲಕ್ಷ ೨ ಲಕ್ಷ ಜನ

ಸಂಖ್ಯೆಗೆ ೬ ಹಾಸಿಗೆಗಳಿದ್ದರೆ ಒಂದು ಹಾಸಿಗೆಯಲ್ಲಿ ಎಷ್ಟು ಜನಗಳನ್ನು ಹಾಕಬಹುದೆಂಬುದನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕು. ಇದು ಸಮರ್ಪಕವಾದ ವೈದ್ಯಕೀಯ ಸೌಲಭ್ಯವೆ ? ಎನ್ನತಕ್ಕಂತಹ ವಿಚಾರವನ್ನು ಮಾನ್ಯ ಸಚಿವರು ಯೋಚಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಳೆದ ವರ್ಷವೇ ತಾಲ್ಲೂಕು ಮಟ್ಟದಲ್ಲಿರತಕ್ಕಂತಹ ಆಸ್ಪತ್ರೆಗಳನ್ನು ಜನರಲ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಬೇಕೆಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದೆವು. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಅದನ್ನು ಕಾರ್ಯಗತ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಸರ್ಕಾರದ ಘೋಷಣೆಯಾಗಿ ೨-೩-೪ ವರ್ಷಗಳಾಗಿವೆ. ಕೆಲವು ಕಡೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿರತಕ್ಕಂತಹ ನಿದರ್ಶನ ಕೂಡ ನನ್ನ ಗಮನಕ್ಕೆ ಬಂದಿದೆ. ನನ್ನ ಕ್ಷೇತ್ರವಾದರೂ ಯಾವುದೇ ನೀರಾವರಿ ಸೌಲಭ್ಯ ಇಲ್ಲದೆ ಮಳೆಯನ್ನೇ ಆಧರಿಸಿಕೊಂಡು ಜೀವನ ಮಾಡತಕ್ಕಂತಹ ಜನ. ನಾಗಮಂಗಲ ತಾಲ್ಲೂಕು ಇಡಿ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಎಲ್ಲರಿಗೂ ತಿಳಿದಿರತಕ್ಕಂತಹ ವಿಷಯ. ಆದರೆ ಪಕ್ಕದ ತಾಲ್ಲೂಕಾದ ಕೆ.ಆರ್.ಪೇಟೆ ನನ್ನ ಕ್ಷೇತ್ರವೂ ಕೂಡ ಯಾವುದೇ ವಿಧವಾದ ನೀರಾವರಿ ಸೌಲಭ್ಯ ಇಲ್ಲದೆ ಸರ್ಕಾರ ಹಾಕಿರತಕ್ಕಂತಹ ವಂತಿಕೆಯನ್ನೂ ಕೊಡಬೇಕಾದರೂ ಬಹಳ ಕಷ್ಟ ಇದೆ. ಎಂಬುದನ್ನು ಮಾನ್ಯ ಸಚಿವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾಗಮಂಗಲ ತಾಲ್ಲೂಕಿನ ಜನತೆಯಿಂದ ಯಾವುದೇ ವಿಧವಾದ ವಂತಿಕೆಯನ್ನೂ ತೆಗೆದುಕೊಳ್ಳದೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿರತಕ್ಕಂತಹ ನಿದರ್ಶನಗಳು ಇವೆ. ಆದ್ದರಿಂದ ಇಲ್ಲೂ ಕೂಡ ಆರ್ಥಿಕವಾಗಿ ಬಹಳ ದುರ್ಬಲರಿದ್ದಾರೆ. ಇಂತಹ ಕಡೆಯೂ ಕೂಡ ಜನತೆಯಿಂದ ಯಾವುದೇ ವಿಧವಾದ ವಂತಿಕೆಯನ್ನು ನಿರೀಕ್ಷಣೆ ಮಾಡದೆ ಸರ್ಕಾರವೇ ತನ್ನ ಬೊಕ್ಕಸದಿಂದ ಹಣವನ್ನು ಖರ್ಚು ಮಾಡಿ ಬಡ ಜನರ ಸೌಲಭ್ಯಕ್ಕಾಗಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ, ತಮ್ಮ ಬಜೆಟ್ ಭಾಷಣದಲ್ಲೂ ಕೂಡ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಅಂದರೆ ೮೬ ತಾಲ್ಲೂಕಿನ ಎಕ್ಸ್‌ರೇ ಪ್ಲಾಂಟ್‌ನ್ನು ಒದಗಿಸಿದ್ದೇವೆ ಎನ್ನತಕ್ಕಂತಹ ವಿಚಾರದನ್ನು ಹೇಳಿದ್ದಾರೆ. ಆದರೆ ಮಂಡ್ಯ ಜಿಲ್ಲೆಯ ಯಾವ ಗ್ರಾಮಾಂತರ ಪ್ರದೇಶಗಳಲ್ಲೂ ಒಂದೇ ಒಂದು ಎಕ್ಸ್‌ರೇ ಪ್ಲಾಂಟನ್ನು ಕೊಟ್ಟಿಲ್ಲ ಎನ್ನತಕ್ಕಂತಹ ವಿಚಾರವನ್ನು ನನ್ನ ಮಿತ್ರರಾದ ಶ್ರೀಮಾನ್ ಚೌಡಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ನಾಗಮಂಗಲ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂದು ನಿರ್ಣಯ ಕೈಗೊಂಡಿದ್ದಾರೆಂಬುದು ತಿಳಿಯಿತು, ಅದರಲ್ಲೂ ಕಡು ಬಡವರಾದ ಕೆ.ಆರ್. ಪೇಟೆ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನೂ ಕೂಡ ಮೇಲ್ದರ್ಜೆಗೆ ಏರಿಸಬೇಕೆಂದು ಸರ್ಕಾರದವರಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ.

ಇನ್ನು ತಾಲ್ಲೂಕಿಗೆ ಸಂಬಂಧಪಟ್ಟ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಇದೆ. ಆಯಾ ಕಟ್ಟಡದಲ್ಲೇ ಆಸ್ಪತ್ರೆಯನ್ನು ನಡೆಸುವುದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಮಾರನಕೊಂಡಿ ಗ್ರಾಮದಲ್ಲಿ ಸಾರ್ವಜನಿಕರು ೨೫ ಸಾವಿರ ರೂಪಾಯಿಗಳನ್ನು ವಂತಿಕೆಯಾಗಿ ಸಲ್ಲಿಸಿದ್ದಾರೆ, ಆ ವಂತಿಕೆಯ ಜೊತೆಗೆ ಸರ್ಕಾರದ ಭಾಗಾಂಶವನ್ನು ಸೇರಿಸಿ ಆದಷ್ಟು ಬೇಗ ಆಸ್ಪತ್ರೆ ಕಟ್ಟಡವನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥನೆಮಾಡುತ್ತೇನೆ ಹಾಗೂ ತಾಲ್ಲೂಕು ಮಟ್ಟದಲ್ಲಿರತಕ್ಕಂತಹ ವೈದ್ಯಕೀಯ ಇಲಾಖೆಯ ನೌಕರರ ವಸತಿ ಗೃಹಗಳನ್ನು ಕಟ್ಟತಕ್ಕಂತಹ ವಿಚಾರ. ಸುಮಾರು ೫-೬ ಊರುಗಳಲ್ಲಿ ಆಸ್ಪತ್ರೆ ಕಟ್ಟಡಗಳಿವೆ, ಆದರೆ ಅಲ್ಲಿ ವೈದ್ಯರಿಗೆ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಮನೆಗಳನ್ನು ಕಟ್ಟಿಸಿಲ್ಲ. ಹಳ್ಳಿಗಾಡಿನಲ್ಲಿ ವೈದ್ಯಕೀಯ ಇಲಾಖೆಯ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರ ಈಗಾಗಲೇ ಒಂದು ಯೋಜನೆಯನ್ನು ರೂಪಿಸಿದೆ ಎಂಬುದಾಗಿ ಹೇಳಿದ್ದೀರಿ. ಆ ಯೋಜನೆ ಪ್ರಕಾರ ಹಿಂದುಳಿದ ಪ್ರದೇಶಗಳು ಎಲ್ಲೆಲ್ಲಿ ಇವೆಯೋ ಅಂತಹ ಕಡೆ ವೈದ್ಯರಿಗೆ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಆದಷ್ಟು ಶೀಘ್ರವಾಗಿ ಕಟ್ಟಿಸಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂತಹ ಹಾಗೂ ಗ್ರಾಮಾಂತರ ಪ್ರದೇಶದ ಜನತೆಯ ಪ್ರತಿನಿಧಿಗಳು ನಾವು ಎಂಬುದನ್ನು ಗಮನದಲ್ಲಿಟ್ಟುಕೊಂಡು ವೈದ್ಯಕೀಯ ಕಾಲೇಜುಗಳಿಗೆ ವ್ಯಾಸಂಗ ಮಾಡಲು ಬರುವ ವಿದ್ಯಾರ್ಥಿಗಳಲ್ಲಿ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂತಹ ವಿದ್ಯಾರ್ಥಿಗಳಿಗೆ ಆದ್ಯತೆಯನ್ನು ಕೊಟ್ಟು ಅವರಿಗೆ ಹೆಚ್ಚು ಅನುಕೂಲ ದೊರೆಯು

ಇಂತಹ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ, ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಸಭಾಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†SRI V. V. PATTAR (Jamkhandi)—Sir, while wholeheartedly supporting the Demands of the Health Department, I wish to say a few words. The population of the State is about three crores, and we are speanding Rs. 15/- per head towrds medical treatment. I fell this amount is inadequate, and it is better to have more funds for this department to look after the medical treatment of the people of the State at large. The country as a whole is facing with three problems—three diseases I would say—(1) poverty, (2) unemployment and (3) inflation. These three are the main diseases, and other diseases are derived from these main diseases. Preventive measures should be taken to wipe out these diseases. The causes for these diseases depend upon the quantum of food each one takes the quantum of milk each one consumes and the number of vitamins each one is taking.

According to the Government statistics, our food production is of the order of 7 lakhs tonnes but our State population is 3 crores. According to this, in Karnataka, every three persons are consuming about one quintal of foodgrains. If we compare the consumption of food by countries like America and other western countries, in those countries the per head consumption of food is more than 2 kilos per head per day. An American consumes about one litre of milk per day and six eggs. No doubt we are self-sufficient in the food production but are our people consuming so much of foodgrains, the milk and eggs as Americans consume? Our people are not consuming much food because they are lacking in the purchasing capacity. Hence there is excess of foodgrains and the milk. So the nutritious food that is required for a human body is not available to our people at all. That is the main cause for the spread of diseases.

Government has taken up many uesful programmes like the Nutrition programme to the unfed children of our state. Besides arrangements have also been made to supply vitamins to the pregnant ladies. The mid-day meal is also provided to our children in the school. Our Government is vigorously implementing all these beneficial schemes. Our main concern should be to see that the purchasing capacity of the people goes up. Our Minister for Health is trying to fight so many diseases with Rs. 15 per year per head. It should be the endeavour of the Minister for Public Health to see that the medical facilities reach the people of Karnataka.

Now I come to the medical education provided in our State. Our Private Medical Colleges have become the selling shops for the

medical education. Only the rich people can afford to get medical education for their wards. There are many people who are below poverty line (47%). The children of these people cannot go to Medical Colleges. At the time of admission, the Medical Colleges demand Rs. 30 000 to Rs. 50,000 for each seat and they are taking this amount by way of donation. In order to put an end to this practice our Education Minister should nationalise all the private Medical Colleges in the State. These colleges should never be in the private sector. These colleges are trading in the educational fied. I make an appeal to our Health Minister not to sell the education. We have all accepted socialism as our policy and we are trying to create an egalitarian society. Hence it is our fundamental duty to make medical education free so that all deserving boys and girls take advantage of this facility.

As pointed our by our freinds, 80% of our people live in the villages and 2 % live in the Cities and towns. In order to cater to the needs of the 80% of our population, a condition should be prescribed for all the doctors to serve in the villages atleast for two to three before they begin their practice in the Cities and towns. Unless this is done, our ailing villages wlll not get the benifit of good treatment.

I find from the Annual Report of the Department, a scheme of Community Health workers. For these workers no qualification has been prescribed and these unqualified workers are supposed to provide medical facilities to the villagers. I do not know how many people will be killed by these workers. Therefore we must take care to see that some qualified persons in the medicine are entruste with the responsiblity of treating the ailing persons in the villages. The scheme envisaged will not produce the desired results.

I take this opportunity to bring to the notice of the Health Minister that in Northern Karnataka a sechems of SMP is workins since 1938, 120 centres are their in our parts. There are persong who are qualified in the SMP scheme. These qualified persons are paid Rs. 120 per month to practice medicine. These pepole are mostly practicing in the villages since 1952. They have all acquired the qualification of LCP. Each qualified doctor is serving 4-5 villages and they are serving the people very well. I request the Minister to see that these people are made government servants and thus help them to serve the cause of medicine.

I think I have made some useful suggestions. I trust and hope that some of my suggestions are implemented in due course. With this I support the demand and conclude my speech. Thank you.

ಶ್ರೀ ಕಾಪು ಸಂಜೀವಸೆಟ್ಟಿ (ಕುಂದಾಪುರ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ೫೮½ ಕೋಟಿ ರೂಪಾಯಿಗಳ ಒಂದು ಬೇಡಿಕೆಯನ್ನು ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿಯವರೆಗೆ ಹಲವಾರು ಸದಸ್ಯರು ಈ ಇಲಾಖೆಯಲ್ಲಿರತಕ್ಕಂಥಾ ಲೋಪದೋಷಗಳ ಬಗ್ಗೆ ಮತ್ತು ಕುಂದುಕೊರತೆಗಳ ಬಗ್ಗೆ ಹಾಗೂ ಹಲವಾರು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ಈ ಖಾತೆಗೆ ಹೊಸದಾಗಿ ಬಂದಮೇಲೆ ಇದನ್ನು ವಿಭಜನೆ ಮಾಡಿ ಒಂದು ಡೈರೆಕ್ಟರೇಟ್ ಆಫ್ ಹೆಲ್ತ್ ಸರ್ವಿಸಸ್ ಅಂತ ಇನ್ನೊಂದು ಡೈರೆಕ್ಟರೇಟ್ ಆಫ್ ಮೆಡಿಕಲ್ ಸರ್ವಿಸಸ್ ಅಂತ ವಿಕೇಂದ್ರೀಕರಣ ಮಾಡಿದರು. ಆಡಳಿತದ ಒಂದು ದೃಷ್ಟಿಯಿಂದ ಈ ಒಂದು ದೊಡ್ಡ ಇಲಾಖೆಯನ್ನು ವಿಭಜನೆ ಮಾಡಿದರು. ಆದರಂತೆ ಈ ಇಲಾಖೆಯು ಆಡಳಿತ ಸುಸೂತ್ರವಾಗಿ ನಡೆಯಲಿ ಅನ್ನುವುದೇ ನನ ಒಂದು ಆಶಯವಾಗಿದೆ. ಮುಖ್ಯವಾಗಿ ಹೇಳುವುದಾದರೆ ನಮ್ಮ ಆಸ್ಪತ್ರೆಗಳಲ್ಲಿ ಹೆಚ್ಚು ಮಟ್ಟಿಗೆ ತಾಲ್ಲೂಕಾ ಮಟ್ಟದಲ್ಲಿರುವ ಪಿ ಹೆಚ್. ಸಿ. ಟೈಪ್ ಇರುವಂಥಾ ಆಸ್ಪತ್ರೆಗಳಲ್ಲಿ ಸರಿಯಾಗಿ ನೋಡಿಕೊಳ್ಳುವಂಥಾ ವ್ಯವಸ್ಥೆ ಇರಲಿಲ್ಲ ಮತ್ತು ಇದರ ಜೊತೆಗೆ ಬೇಕಾದಷ್ಟು ಔಷಧಿಯನ್ನು ಒದಗಿಸುತ್ತಲೂ ಇರಲಿಲ್ಲ. ಸಾಕಷ್ಟು ಔಷಧಿಗಳು ಸಿಕುತ್ತಾ ಇದ್ದರೂ ಸಹಿತ ಹೆಚ್ಚು ಔಷಧಿಗಳನ್ನು ಒದಗಿಸುತ್ತಾ ಇರಲಿಲ್ಲಾ. ಈವಾಗ ನೋಡಿದರೆ ಔಷಧಿಗಳ ಬೆಲೆ ವಿಪರೀತವಾಗಿ ಜಾಸ್ತಿಯಾಗಿ ಹೋಗಿದೆ.

೪.೩೦ ಪಿ. ಎಂ

ಆದರೆ ಇವತ್ತಿನ ದಿವಸ ಔಷಧಿಯ ಬೆಲೆ ಜಾಸ್ತಿಯಾಗಿದೆ. ಇಂಥ ಔಷಧಿಯಿಂದ ನಾವು ಯಾರ ಬಗ್ಗೆ ಅನುಕಂಪವನ್ನು ತೋರಿಸುತ್ತೇವೆಯೋ ಅವರಿಗೆ ಸೌಕರ್ಯ ಸಿಕ್ಕುವುದಿಲ್ಲ. ಶ್ರೀಮಂತರು ಈ ಆಸ್ಪತ್ರೆಗಳಿಗೆ ಬರುವುದಿಲ್ಲ. ಕೇವಲ ಬಡವರೇ ಈ ಆಸ್ಪತ್ರೆಗಳಿಗೆ ಬರುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಆದಷ್ಟು ಹೆಚ್ಚಿನ ರೀತಿಯಲ್ಲಿ ಔಷಧಿಯನ್ನು ಒದಗೋಣವಾದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಕೆಲವು ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಬಿಟ್ಟರೆ ಹೆಚ್ಚಾಗಿ ಪಿ.ಎಚ್.ಸಿ. ಟೈಪ್ ಆಸ್ಪತ್ರೆಗಳೇ ನಮ್ಮಕಡೆ ಇರುವಂಥಾವುಗಳು. ಇವುಗಳಿಗೆ ವೈದ್ಯಕೀಯ ಅಧಿಕಾರಿಗಳ ನೇಮಕ ಮಾಡದೆ ಇರುವುದು ಅವುಗಳ ಕಾರ್ಯಚರಣೆಗೆ ಅಡ್ಡಿಯಾಗಿದೆ. ಬಿದಕಲ್‌ಕಟ್ಟೆಯಲ್ಲಿ ಕಳೆದ ನಾಲ್ಕು ತಿಂಗಳಿಂದ ಆಸ್ಪತ್ರೆಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಿಲ್ಲ. ಲೇಡಿ ಡಾಕ್ಟರ್ ಇಲ್ಲ, ಕಾಂಪೋಂಡರ್ ಸಹ ಇಲ್ಲ, ಇನ್ನು ಅಲ್ಲಿ ಕೆಲಸ ಮಾಡುವುದು ಯಾವ ರೀತಿ ಎನ್ನುವುದನ್ನು ನಾನು ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮೊನ್ನೆತಾನೆ ಅಲ್ಲಿಗೆ ಒಬ್ಬ ಡಾಕ್ಟರನ್ನು ನೇಮಕ ಮಾಡಿದ್ದಾರೆ. ಈ ರೀತಿಯಾದರೆ ಗ್ರಾಮಾಂತರ ಪ್ರದೇಶಗಳ ಜನರಿಗೆ ಬಹಳ ತೊಂದರೆಯಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾಲ್ಲೂಕು ಮಟ್ಟಗಳಲ್ಲಿ ನಮ್ಮ ಸರ್ಕಾರದವರು ಡೆಂಟಲ್ ಸರ್ಜನ್ ಅವರನ್ನು ನೇಮಕ ಮಾಡಿದರೆ ಬಹಳ ಒಳ್ಳೆಯದು. ಇತ್ತೀಚಿಗೆ ನಮ್ಮ ಗ್ರಾಮಾಂತರ ಪ್ರದೇಶದ ಜನರೂ ಸಹ ಹಲ್ಲಿನ ಬಗ್ಗೆ ನಿಗ ಕೊಡುತ್ತಿದ್ದಾರೆ. ಮೊದಲು ಹಲ್ಲಿನ ಖಾಯಿಲೆ, ಶ್ರೀಮಂತರ ಖಾಯಿಲೆಯಾಗಿತ್ತು. ಈಗ ಗ್ರಾಮಾಂತರ ಪ್ರದೇಶದ ಜನರೂ ಸಹ ಇದರ ಬಗ್ಗೆ ಆಸಕ್ತಿ ವಹಿಸುತ್ತಿದ್ದಾರೆ. ಮಂಗಳೂರು, ಇಂಥ ಕಡೆ ಡೆಂಟಲ್ ಸರ್ಜನರು ಇದ್ದು ಅಲ್ಲಿಯ ಜನರಿಗೆ ಸೌಕರ್ಯ ದೊರೆಯುತ್ತಿದೆ. ಆದರೆ ಉಡುಪಿ ಕುಂದಾಪುರ ಇಂಥ ಕಡೆಗಳಲ್ಲಿ ಡೆಂಟಲ್ ಸರ್ಜನ್ ಅವರು ಇಲ್ಲದೆ ಜನರಿಗೆ ಬಹಳ ತೊಂದರೆಯಾಗುತ್ತಿದೆ. ನನ್ನ ಕ್ಷೇತ್ರದ ಮುಖ್ಯ ಪಟ್ಟಣವಾದ ಬೈಂದೂರಿನಲ್ಲಿ ವೈದ್ಯರು ಇಲ್ಲದೆ ಜನರು ತೊಂದರೆ ಪಡುತ್ತಿದ್ದಾರೆ. ಬೈಂದೂರಿನಿಂದ ಮಂಗಳೂರಿಗೆ ೬೧-೭೦ ಮೈಲಿಯಾಗುತ್ತದೆ ಜನರು ಏನಾದರೂ ಹಲ್ಲಿನ ಖಾಯಿಲೆ ಬಂದರೆ ಮಂಗಳೂರಿಗೆ ಹೋಗಬೇಕಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಈ ಸೌಕರ್ಯಗಳು ಸರ್ಕಾರದ ಮೂಲಕ ದೊರೆಯುವುದೆ ಇದ್ದ ಕಾರಣ, ಖಾಸಗಿಯವರಿಗೆ ಒಳ್ಳೆಯ ಉತ್ತೇಜನ ಬರುತ್ತಿದೆ. ಆದ್ದರಿಂದ ಸರ್ಕಾರದವರು ತಾಲ್ಲೂಕು ಮಟ್ಟದಲ್ಲಿಯೂ ಡೆಂಟಲ್ ಯೂನಿಟ್ಸನ್ನು ಸರಿಯಾದ ರೀತಿಯಲ್ಲಿಟ್ಟು ಜನರಿಗೆ ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕು, ಇಲ್ಲದಿದ್ದರೆ ತಾವು ಒಬ್ಬ ಡಾಕ್ಟರನ್ನು ನೇಮಕ ಮಾಡಿ ಬಾಕಿ ಸಿಬ್ಬಂದಿಯನ್ನು ಕೊಡದಿದ್ದರೆ ಏನೂ ಪ್ರಯೋಜನವಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಡಾಕ್ಟರುಗಳಿಗೆ ಕೊಡುವ ವೇತನದ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ನಾರಾಯಣ ಪೈ ಕಮಿಷನ್‌ನಲ್ಲಿ ಇವರ ವೇತನಗಳನ್ನು ನಿರ್ಣಯ ಮಾಡುವಾಗ ಇವರಿಗೆ ಅಷ್ಟು ಪ್ರಯೋಜನವಾಗಲಿಲ್ಲವೆಂದು ನನ್ನ ಅಭಿಪ್ರಾಯ, ಇಂಜನಿಯರುಗಳಿಗೆ ಹೆಚ್ಚು ಸಂಬಳ ಸಿಗುವಂಥ ಸಮಯದಲ್ಲಿ ಇವರೂ ಸಹ ಅವರಂತೆ ೫-೬ ವರ್ಷಗಳ ಕಾಲ ಕಲಿತು, ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ದುಡ್ಡು ಖರ್ಚು ಮಾಡಿ ಬಂದು ಇಷ್ಟು ಕಡಿಮೆ ವೇತನ ಪಡೆದರೆ ಅವರಿಗೆ ಬೇಸರವಾಗುವುದಿಲ್ಲವೇ ? ಹೀಗಾಗಿ ಅವರು ಪ್ರೈವೇಟ್ ಪ್ರಾಕ್ಟೀಸ್ ಬಗ್ಗೆ ಮನಸ್ಸುಮಾಡುತ್ತಾರೆ. ಅವರಿಗೆ ಸರ್ಕಾರಿ ಕೆಲಸದಲ್ಲಿ ಆಸಕ್ತಿ ಕಡಿಮೆಯಾಗಿ ಉದಾಸೀನತೆ ಮಾಡುವುದು ಸ್ವಾಭಾವಿಕವೆಂದು ಕಾಣುತ್ತದೆ. ಮೊದಲು ಇವರಿಗೆ ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್ ಎಂದು ಕೊಡುತ್ತಿದ್ದರು. ಈಗ ಅದನ್ನೂ ಕೂಡ ಖೋತಮಾಡಿದ್ದಾರೆ. ಇವರಿಗೆ ಸರ್ಕಾರದವರು ಈಗಲಾದರೂ ಹೆಚ್ಚಿನ ವೇತನವನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ನೋಡಿಕೊಳ್ಳಬೇಕು ಹಿಂದೆ ಇದ್ದ ರೀತಿಯಲ್ಲಿ ಅವರಿಗೆ ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್ ಆದರೂ ಕೊಡಿ ಇಲ್ಲವಾದರೆ ಹೆಚ್ಚಿನ ವೇತನವನ್ನಾದರೂ ಕೊಡಿ. ಎರಡೂ ನೀವು ಕೊಡದೆ ಹೋದರೆ ಅವರು ಆಸಕ್ತಿಯಿಂದ ಕೆಲಸ ಮಾಡುವುದಿಲ್ಲ, ಮತ್ತು ಮತ್ತು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥಾದ್ದಕ್ಕೆ ತಾವು ಎಡ ಕೊಡದೆ ಅವರ ಸೇವೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಔಷಧಿ ಮತ್ತು ಎಕ್ವಿಪ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಸ್ಟೋರ್‌ನವರು ಸರಿಯಾದ ಕೊಟೇಷನ್ಸ್ ಇಲ್ಲದೆ ಹೆಚ್ಚಿನ ಗುಣಮಟ್ಟ ಇಲ್ಲದ ಔಷಧಿಗಳನ್ನು ಕೊಳ್ಳುತ್ತಾರೆ. ಇದಕ್ಕೆ ಅವರು ಬೇರೆ ಬೇರೆ ಕಾರಣಗಳನ್ನು ಕೊಡಬಹುದು. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ನಿಗ ತೆಗೆದುಕೊಂಡು ಕೂಲಂಕುಷವಾಗಿ ಪರಿಶೀಲನೆಮಾಡಿ, ಒಳ್ಳೆಯ ಗುಣಮಟ್ಟದ ಔಷಧಿಗಳನ್ನು ಕೊಳ್ಳುವಂತೆ ಅಧಿಕಾರಿಗಳಿಗೆ ಆದೇಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹಲ್ಲು ಕೀಳುವ ಎಕ್ವಿಪ್‌ಮೆಂಟ್ ಸರಿಯಾದ ರೀತಿಯಲ್ಲಿ ಇರುವುದಿಲ್ಲ. ಇನ್ನು ಮುಂದಾದರೂ ಸರ್ಕಾರದವರು ಸರ್ಕಾರಿ ಆಸ್ಪತ್ರೆಗಳಲ್ಲಿ ಇಂಥಾದ್ದಕ್ಕೆ ಎಡೆಕೊಡದೆ ಹೆಚ್ಚಿನ ಮಟ್ಟದ ಉಪಕರಣಗಳನ್ನು ಔಷಧಿಗಳನ್ನು ಕೊಂಡು ಜನರಿಗೆ ಸೌಕರ್ಯವನ್ನು ಒದಗಿಸಬೇಕು ಎಂದು ನಾನು ಈ ಸಮಯದಲ್ಲಿ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

ಕುಂದಾಪುರ ತಾಲ್ಲೂಕು ಹೆಡ್‌ಕ್ವಾರ್ಟರ್, ಇಲ್ಲಿ ದೊಡ್ಡ ಆಸ್ಪತ್ರೆ ಇದೆ, ೭೧ ಹಾಸಿಗೆ ಇರುವ ಆಸ್ಪತ್ರೆಯನ್ನು ೧೨೦ ಹಾಸಿಗೆಗಳ ಆಸ್ಪತ್ರೆಯಾಗಿ ಬಡಾವಣೆ ಮಾಡಬೇಕು ಎಂದು ಮಾಸ್ಟರ್ ಪ್ಲಾನ್ ವಗೈರೆ ಆಗಿದೆ. ಇದು ಕಳೆದ ೮-೧೦ ವರ್ಷಗಳಿಂದಲೂ ಕಾರ್ಯಗತವಾಗಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿಯೂ ಇದಕ್ಕೆ ಪ್ರಾವಿಷನ್ ಇಲ್ಲ. ಒಂದುಕಡೆ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಅನುಕೂಲತೆಗಳು ಇಲ್ಲ. ಸೌಕರ್ಯಗಳು ಇಲ್ಲ ಅಂದಮೇಲೆ ಕಷ್ಟವಾಗುವುದು ಬಡವರಿಗೆ ಮಾತ್ರ, ಶ್ರೀಮಂತರಿಗೆ ಖಾಸಗಿ ನರ್ಸಿಂಗ್ ಹೋಂಗಳು ಇರುತ್ತವೆ. ಅವರು ಅಲ್ಲಿಗೆ ಹೋಗುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರಿಗೆ ನೆಲದ ಮೇಲೆ ಹಾಸಿಗೆ ಹಾಕಿ ಕೊಡಲು ಜಾಗ ಕೂಡ ಇಲ್ಲವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ನಮ್ಮ ಕುಂದಾಪುರದ ಆಸ್ಪತ್ರೆಯನ್ನು ೧೨೦ ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಬಡಾವಣೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಮೊನ್ನೆ ತಾನೆ ನಮ್ಮ ಸರ್ಕಾರದವರು ಸುಮಾರು ೨೧ ಪಿ.ಎಚ್.ಸಿ ಗಳನ್ನು ನಮ್ಮ ರಾಜ್ಯದಲ್ಲಿ ತೆರೆದಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಕುಂಭಕಾಶಿಯಲ್ಲಿಯೂ ಒಂದು ಕೇಂದ್ರ ತೆರೆಯಲ್ಪಟ್ಟಿದೆ. ಇದಕ್ಕೆ ನಮ್ಮ ಊರಿನ ಒಬ್ಬರು ೫೦ ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದಾರೆ. ಇದಕ್ಕೆ ಸರಿಯಾದ ಡಾಕ್ಟರನ್ನು ಸಿಬ್ಬಂದಿಯನ್ನು ಸರ್ಕಾರದವರು ನೇಮಕ ಮಾಡಿ ಇದರ ಪ್ರಯೋಜನವನ್ನು ಜನಗಳು ಸರಿಯಾಗಿ ಪಡೆಯುವಂತೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇದಲ್ಲದೆ, ಕುಂಭಕಾಶಿಗೆ ೨೧ ಬೆಡ್ಡಿನ ಲೆಪ್ರಸಿ ಆಸ್ಪತ್ರೆ ಸ್ಯಾಂಕ್ಷನ್ ಆಗಿದೆ, ಎಂದು ನಾನು ಕೇಳಿದ್ದೇನೆ. ಇದಕ್ಕೆ ಸರ್ಕಾರದವರು ಆದಷ್ಟು ಬೇಗ ಕಟ್ಟಡವನ್ನು ಕಟ್ಟಿಸಿ ಕೊಟ್ಟರೆ ಬಡವರಿಗೆ ಪ್ರಯೋಜನವಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ, ಆಸಿಸ್ಟೆಂಟ್ ಡೆಂಟಲ್ ಸರ್ಜನ್ ಅವರ ಕೆಲವು ಸಮಸ್ಯೆಗಳನ್ನು ನಾನು ಇಲ್ಲಿ ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುತ್ತೇನೆ. ಇವರಿಗೆ ಪ್ರಮೋಷನ್ಸ್‌ಗೆ ಅವಕಾಶವಿಲ್ಲ. ನನಗೆ ಗೊತ್ತಿರುವ ಹಾಗೆ ಒಬ್ಬ ಡಾಕ್ಟರು ೧೮ ವರ್ಷಗಳಿಂದ ಪ್ರಮೋಷನ್ ಇಲ್ಲದೆ ತೂಕಡಿಸುತ್ತಿದ್ದಾರೆ. ಇವರಿಗೂ ಸಹ ಬೇರೆ ಡಾಕ್ಟರುಗಳಿಗೆ ಪ್ರಮೋಷನ್ ಇರುವಂತೆ ಅವಕಾಶಗಳನ್ನು ಮಾಡಿಕೊಟ್ಟರೆ ಇವರಿಂದಲೂ ನೀವು ಒಳ್ಳೆಯ ಸೇವೆಯನ್ನು ಪಡೆಯಬಹುದು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇದರಲ್ಲಿ ಕೆಲವರು ಪೋಸ್ಟ್ ಗ್ರ್ಯಾಜುಯೇಷನ್ ಮಾಡಿದವರೂ ಇದ್ದಾರೆ. ಸಾಕಷ್ಟು ಅನುಭವಿಗಳೂ ಇದ್ದಾರೆ. ಡೆಂಟಲ ಕಾಲೇಜು ಬೆಂಗಳೂರು ಇಲ್ಲಿ ವೇಕೆನ್ಸಿಯೂ ಇದೆಯೆಂದು ನಾನು ಕೇಳಿದ್ದೇನೆ. ಇಷ್ಟರವರೆಗೆ ಅದನ್ನು ತುಂಬಿಲ್ಲ ಎಂದೂ ನಾನು ಹೇಳಿದ್ದೇನೆ. ಇಂಥ ಅವಕಾಶಗಳನ್ನು ಅನುಭವ ಇರುವವರಿಗೆ ಕೊಟ್ಟರೆ ಅವರೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ವಿದ್ಯಾ ಇಲಾಖೆಯು ಹಾಗೆ ಆರೋಗ್ಯ ಇಲಾಖೆಯೂ ಸಹ ಪ್ರಾಮುಖ್ಯವಾದುದು. ಶ್ರೀಮಂತರುಗಳು ಉತ್ತಮ ಆಹಾರವನ್ನು ತಂದು ಆರೋಗ್ಯವನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳುತ್ತಾರೆ, ಆದರೆ ಬಡವರಿಗೆ ಪೌಷ್ಟಿಕ ಆಹಾರ ದೊರೆಯುವುದು ಕಷ್ಟ. ಆದ್ದರಿಂದ ಸರ್ಕಾರದವರು ಹಳ್ಳಿಗಳ ಕಡೆ ಗಮನಕೊಟ್ಟು ಆಸ್ಪತ್ರೆಗಳನ್ನು ತೆರೆದು ಬಡಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರಮೇಶ ಕುಮಾರ್ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನಿವಾರ್ಯವಾಗಿ ಸ್ವಾಗತ ಮಾಡಬೇಕಾಗಿದೆ. ಅನಿವಾರ್ಯವಾಗಿ ಸ್ವಾಗತ ಮಾಡಬೇಕಾಗಿದೆ ಎಂದು ಆಡಳಿತ ಪಕ್ಷದ ಸದಸ್ಯನಾಗಿ ನಾನು ಹೇಳಿದಾಗ ಬೇರೆಯವರಿಗೆ ಸ್ವಲ್ಪ ಆಶ್ಚರ್ಯವಾಗಬಹುದು. ಆದರೆ ಸರ್ಕಾರದವರು ಕೊಟ್ಟಿರತಕ್ಕಂಥ ವಾರ್ಷಿಕ ವರದಿಯನ್ನು ಸ್ವಲ್ಪ ಗಮನಿಸಿದ್ದರೆ, ಈ ಒಂದು ಆರೋಗ್ಯ ಇಲಾಖೆಯೇ ಅನಿಮಿಕ ಕಂಡೀಷನ್‌ನಲ್ಲಿದೆ ಎಂದು ಕಾಣುತ್ತದೆ. ಜನರ ಆರೋಗ್ಯ ಚೆನ್ನಾಗಿರಬೇಕೆಂದು ನಾವು ಇಲ್ಲಿ ಭಾಷಣ ಮಾಡುತ್ತೇವೆ, ಆದರೆ ನಮ್ಮ ರಾಜ್ಯದಲ್ಲಿರುವ ಜನಸಂಖ್ಯೆಗೆ ಸರ್ಕಾರದವರು ಒದಗಿಸಿರತಕ್ಕಂಥ ಡಾಕ್ಟರ್‌ಗಳ ಸಂಖ್ಯೆಯನ್ನು ಮತ್ತು ಬೆಡ್ಸ್ ಸಂಖ್ಯೆಯನ್ನು ನೋಡಿದಾಗ, ನನಗಾದರೂ ಅನಿಸುತ್ತದೆ, I don't like to criticise the Hon. Minister or the Government but I am only sorry to say this is the condition in which we are living even after 32 years of independence. We have a number of schemes. We have got platoons of people working under the head of the department.

ಯಾವ ಇಲಾಖೆಯಲ್ಲಿಯೂ ಇರದಷ್ಟು ಕಾರ್ಯಕರ್ತರು ಈ ಇಲಾಖೆಯಲ್ಲಿದ್ದಾರೆ. ನಾವು ಯಾವ ಹಳ್ಳಿಗೆ ಹೋದರೂ ಇವರು ಸಿಗುತ್ತಾರೆ, ಆದರೆ ಅವರು ಮಾಡುವ ಕೆಲಸವಾದರೂ ಏನು ? ನಾವು ಇಷ್ಟೊಂದು ಹಣವನ್ನು ಈ ಇಲಾಖೆಗೆ ಖರ್ಚು ಮಾಡುತ್ತೇವೆ. ಆದರೆ ಜನರ ಒಂದು ಸ್ಥಿತಿ ಸುಧಾರಿಸಿದೆಯೇ ಎಂದರೆ ಅದಕ್ಕೆ ನಿರಾಶಾದಾಯಕವಾದ ಉತ್ತರ ಸಿಗುತ್ತದೆ. ಇವರ ವರದಿಯ ೭ನೇ ಪುಟದಲ್ಲಿ ಜಿಲ್ಲಾ ಆಸ್ಪತ್ರೆಗಳ ಬಗ್ಗೆ ಹೇಳಿದ್ದಾರೆ ಕೋಲಾರ ಜಿಲ್ಲೆಯಲ್ಲಿ ೬ ತಿಂಗಳವರೆಗೆ ಎಕ್ಸರೇ ಇರಲಿಲ್ಲ. ಈ ವಿಚಾರವನ್ನು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಲತೀಫ್ ಅವರೂ ಸಹ ಪ್ರಸ್ತಾಪ ಮಾಡಿದ್ದರು. ನಾನೂ ಸಹ ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆ. ಇದನ್ನು ಸರಿ ಮಾಡಲಾಗಿದೆ ಎಂದು ಈ ವರದಿಯಲ್ಲಿ ಹೇಳಿದ್ದಾರೆ. ಆದರೆ ೬ ತಿಂಗಳ ಕಾಲ ಅಲ್ಲಿ ಎಕ್ಸರೇ ಸೌಲಭ್ಯವಿಲ್ಲವೆಂದರೆ, ಅದರ ಅರ್ಥವಾದರೂ ಏನು ? ಈ ವಿಚಾರದಲ್ಲಿ ಜನರ ಒಂದು ಸೌಜನ್ಯವನ್ನು ಜನರ ಒಂದು ಸದ್ಗುಣವನ್ನು ದುರುಪಯೋಗಪಡಿಸಿಕೊಳ್ಳುವುದು ಸರಿಯಲ್ಲ. ಒಟ್ಟಿನಲ್ಲಿ ಜನರ ಒಂದು ತೊಂದರೆಯನ್ನು ಗ್ರಹಿಸುವಂತಹ ಶಕ್ತಿ ಸರ್ಕಾರಕ್ಕೆ ಇಲ್ಲವೆಂದು ಹೇಳಬೇಕಾಗುತ್ತದೆ.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕೆಂದರೆ, ಈ ಇಲಾಖೆಯನ್ನು ಈಗ ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಮೆಡಿಕಲ್ ಎಜುಕೇಷನ್ ಮತ್ತು ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಎಂದು ಎರಡು ಭಾಗಗಳಾಗಿ ವಿಭಜನೆ ಮಾಡಿದ್ದಾರೆ. ಸರ್ಕಾರ ಆಡಳಿತದ ಒಂದು ಹಿಡಿತವನ್ನು ಇಟ್ಟುಕೊಳ್ಳಬೇಕು ಮತ್ತು ಜನತೆಗೆ ದಕ್ಷವಾದಂಥ ಆಡಳಿತವನ್ನು ಕೊಡಬೇಕು ಎಂದು ಈ ರೀತಿ ಮಾಡಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಯಾವ ಒಬ್ಬ ಅಧಿಕಾರಿ ದಕ್ಷತೆಯಿಂದ ಬಹಳ ನೈಪುಣ್ಯತೆಯಿಂದ

ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೋ, ಅವರನ್ನು ಆ ಡೈರೆಕ್ಟರ್ ಹುದ್ದೆಯಿಂದ ಬದಲಾವಣೆ ಮಾಡುವುದಕ್ಕಾಗಿ ಈ ರೀತಿ ಈ ಇಲಾಖೆಯನ್ನು ವಿಭಜನೆ ಮಾಡಲಾಯಿತೆಂದು ತಾನು ತಿಳಿದುಕೊಂಡಿದ್ದೇನೆ. ಡೈರೆಕ್ಟರ್ ಹುದ್ದೆಯಲ್ಲಿದ್ದ ಶ್ರೀ ರುದ್ರಪ್ಪನವರು ವಿಶ್ವದ ಭೂಪಟದಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದರು. ನಮ್ಮ ಕರ್ನಾಟಕ ರಾಜ್ಯದ ಆರೋಗ್ಯ ಇಲಾಖೆಯನ್ನು ಅಭಿವೃದ್ಧಿಗೊಳಿಸಲು ಬಹಳ ಶ್ರಮವಹಿಸಿದ್ದರು. ಅವರು ನನಗೇನೂ ಸಹಾಯ ಮಾಡಿಲ್ಲ ನಮ್ಮ ಆಸ್ಪತ್ರೆಗೆ ಒಬ್ಬರು ಲೇಡಿ ಡಾಕ್ಟರ್‌ನ್ನು ಕೊಡಿ ಎಂದು ಕೇಳಲು ಅವರನ್ನು ಒಂದು ಸಲ ಭೇಟಿ ಮಾಡಿದ್ದೆ. ಅಷ್ಟು ಹೊರತು ನಾನು ಅವರಿಂದ ಯಾವ ಸಹಾಯವನ್ನೂ ಪಡೆದಿಲ್ಲ. ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಶ್ಲಾಘಿಸಬೇಕೆಂದು ಮಾನ್ಯ ಆಮ್ರ್ಗಂ ಅವರು ಹೇಳುತ್ತಿದ್ದರು. ನಾನೂ ಸಹ ಮಾನ್ಯ ಮುಖ್ಯ ಮಂತ್ರಿಗಳಿಗೆ ಬೆಂಬಲಿಗನಾಗಿದ್ದೇನೆ. ಆದರೆ ಆಡಳಿತ ನಡೆಸುವ ಸಂದರ್ಭದಲ್ಲಿ ಒಳ್ಳೆಯ ಸಾಮರ್ಥ್ಯವಿರುವವರಿಗೆ , ಒಳ್ಳೆಯ ಯೋಗತ್ಯೆಯಿರುವವರಿಗೆ ನಾವು ಸೂಕ್ತವಾದಂಥ ಅಧಿಕಾರ ಸ್ಥಾನವನ್ನು ಕೊಡಬೇಕಾಗುತ್ತದೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಿರುವುದು ಜನರ ಒಂದು ಆಶೀರ್ವಾದದಿಂದ. ಆದಕಾರಣ ಜನತೆಯ ಒಂದು ಆಶೋತ್ತರಗಳನ್ನು ಈಡೇರಿಸಬೇಕೆಂದು ಈ ಸರ್ಕಾರ ಅಧಿಕಾರಕ್ಕೆ ಬಂದಿದೆಯೇ ಹೊರತು, ಯಾರನ್ನೋ ಮೆಚ್ಚಿಸುವುದಕ್ಕೆ ಅಲ್ಲ ; ಈ ಒಂದು ಬೃಹತ್‌ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದಾದರೆ, ಈ ವಿಚಾರದಲ್ಲಿ ಸರ್ಕಾರ ತಪ್ಪು ಮಾಡಿದೆ ಎಂದು ಹೇಳಬಹುದು ; ನಿಷ್ಠೆಯಿಂದ, ದಕ್ಷತೆಯಿಂದ ಹಾಗೂ ನಿಸ್ವಾರ್ಥದಿಂದ ಕೆಲಸ ಮಾಡುವಂತಹ ಅಧಿಕಾರಿಗೆ ನಾವು ದ್ರೋಹ ಬಗೆಯುವುದು ಸರಿಯಲ್ಲ. ಆದಕಾರಣ ಮಾನ್ಯ ಆರೋಗ್ಯ ಸಚಿವರು ಮುಂದೆಯಾದರೂ ಇದನ್ನು ಸರಿಪಡಿಸಬೇಕೆಂದು ಜನತೆಯ ಪರವಾಗಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಲ್ಲ ಜಿಲ್ಲೆಗಳಲ್ಲಿಯೂ ಟಿ. ಬಿ. ಆಸ್ಪತ್ರೆಗಳನ್ನು ತೆರೆಯಲಾಗಿದೆ ಎಂದು ಹೇಳಿದ್ದಾರೆ. ಮತ್ತು ಅಲ್ಲಿ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಡಲಾಗಿದೆ ಎಂದು ಹೇಳಿದ್ದಾರೆ. ಜನರು ನಮಗೆ ಮತ ಕೊಟ್ಟು ಶಾಸಕರನ್ನಾಗಿ ಮಾಡಿದ್ದಾರೆ. ಅವರ ಒಂದು ಆಶೀರ್ವಾದದಿಂದಲೇ ಆ ಕಡೆಯ ಮತ್ತು ಈ ಕಡೆಯ ಶಾಸಕರು ಅಧಿಕಾರದಲ್ಲಿರುವುದು ; ನಮಗೆ ಮತ ಕೊಟ್ಟ ಜನರ ಒಂದು ಪರಸ್ಥಿತಿಯನ್ನು ಅವಲೋಕಣ ಮಾಡಿದ್ದೇ ಆದರೆ, ಟಿ. ಬಿ. ಕಾಯಿಲೆ ಬಂದವರು ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗಬೇಕಾದರೆ ಶಾಸಕರ ಹತ್ತಿರ ಒಂದು ಶಿಫಾರಸ್ ಲೆಟರನ್ನು ತೆಗೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಅಡ್ಮಿಷನ್ ಸಿಗುವುದಿಲ್ಲ. ನಾವು ಇಲ್ಲಿ ಅಸ್ತಿತ್ವದಲ್ಲಿರಲು ಮತ ಕೊಟ್ಟ ಜನರಿಗೆ ಅಲ್ಲಿ ಅಡ್ಮಿಷನ್ ಶಿಫಾರಸ್ ಪತ್ರವಿಲ್ಲದೆ ಸಿಗುವುದಿಲ್ಲವೆಂದರೆ, ನಾವೇ ನಾಚಿಕೆ ಪಟ್ಟುಕೊಳ್ಳಬೇಕಾಗಿದೆ. ಇದಕ್ಕಿಂತಲೂ ಹೀನಾಯವಾದುದು ಮತ್ತೊಂದು ಇದೆಯೇ ? ಈ ಒಂದು ಪರಿಸ್ಥಿತಿ ಬದಲಾವಣೆಯಾಗಬೇಕು. ನಿಜವಾಗಿಯೂ ಕಾಯಿಲೆ ಇರುವವರು ಅಲ್ಲಿಗೆ ಹೋದಾಗ ಅಡ್ಮಿಟ್ ಮಾಡಿಕೊಳ್ಳುವಂತಹ ಪರಿಸ್ಥಿತಿ ಇರಬೇಕು. ಅಲ್ಲಿ ಲಂಚ ಎಂಬುದು ತಾಂಡವಾಡುತ್ತಿದೆ. ಇದು ಹೋಗಬೇಕು. ಯಾರೇ ಬಡವರು ಅಲ್ಲಿಗೆ ಹೋಗಲಿ. ಕೂಡಲೇ ಚಿಕಿತ್ಸೆ ಕೊಡುವಂತಹ ಒಂದು ಏರ್ಪಾಡು ಅಲ್ಲಿರಬೇಕು. ಅಂತಹ ಒಂದು ಸಾಮರ್ಥ್ಯವನ್ನು ಸರ್ಕಾರ ಬೆಳೆಸಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕ್ಯಾಪಿಟೇಷನ್ ಫೀ ಬಗ್ಗೆ ಮಾನ್ಯ ಪತ್ತಾರ್ ಅವರು ಹೇಳಿದ್ದಾರೆ. ಈ ದಿನದ ಬೇಡಿಕೆಗಳಿಗೆ ಅನಿವಾರ್ಯವಾಗಿ ಬೆಂಬಲ ಕೊಡುತ್ತೇನೆಂದು ನಾನು ಮೊದಲೇ ಹೇಳಿದ್ದೇನೆ. ದುರ್ಬಲ ವರ್ಗದವರಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಘಂಟಾಘೋಷವಾಗಿ ಹೇಳಿದ್ದಾರೆ. ಹಿಂದುಳಿದ ವರ್ಗದವರಿಂದ, ಬಡವರಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆಂಬುದು ನಿರ್ವಿವಾದವಾದಂಥ ಮಾತು ಎಂದು ನಾನೂ ಒಪ್ಪುತ್ತೇನೆ. ಆದರೆ ಈ ವರದಿಯಲ್ಲಿ ಕ್ಯಾಪಿಟೇಷನ್ ಫೀ ಬಗ್ಗೆ 'If possible, we will avoid capitation fees' ಅಂತ ಹೇಳಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ ಎಂದು ನನ್ನಗನ್ನಿಸುತ್ತದೆ. ಏಕೆಂದರೆ, ಸಾಧ್ಯವಾದರೆ ಕ್ಯಾಪಿಟೇಷನ್ ಫೀಯನ್ನು ಅವಾಯ್ಡ್ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಅರ್ಥವಾದರೂ ಏನು ? ಇದನ್ನು ಪೂರ್ತಿಯಾಗಿ ರದ್ದು ಮಾಡಿ ಮೆರಿಟ್ ಬೇಸಿಸ್ ಮೇಲೆ ಅಡ್ಮಿಷನ್ ಕೊಡುವುದಕ್ಕೆ ಸರ್ಕಾರಕ್ಕೆ ಸಾಮರ್ಥ್ಯವಿಲ್ಲವೇಕೆ ? ಹಿಂದುಳಿದ ವರ್ಗದವರಿಗೆ ಹಾಗೂ ಬಡಜನರಿಗೆ ಇಷ್ಟೊಂದು ಫೀ ಕೊಡಲು ಸಾಧ್ಯವಿದೆಯೇ, ಅವರಿಗೆ ಚೈತನ್ಯವಿದೆಯೇ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಆದಕಾರಣ ಇಂತಹವರಿಗೆ

ಸಹಾಯ ಮಾಡಲು ಸಾಧ್ಯವಾಗುತ್ತದೆಯೋ ಎಂಬುದನ್ನು ಪರಿಶೀಲಿಸಿ ನೋಡುತ್ತೇವೆಂದು ತಾವು ಹೇಳಬೇಕಾಗುತ್ತದೆ. ಆದರೆ ಇಲ್ಲಿ ನೀವು ಹೇಳಿರುವುದನ್ನು ನೋಡಿದರೆ, ಈ ಬಗ್ಗೆ ನಾವು ಸಂಶಯ ಪಡಬೇಕಾಗುತ್ತದೆ. ನಾವು ಬಡ ಜನರಿಗೆ ಸೇವೆ ಮಾಡಲು ಇಲ್ಲಿಗೆ ಬಂದಿರುವುದು; ಆದಕಾರಣ ಅವರ ಬಗ್ಗೆ ನಾವು ಹೆಚ್ಚು ಉತ್ಸಾಹದಿಂದ ಕೆಲಸ ಮಾಡಬೇಕೇ ಹೊರತು, ಇಂತಹ ವಿಚಾರಗಳನ್ನೆಲ್ಲಾ ವರದಿಯಲ್ಲಿ ಪ್ರಕಟ ಮಾಡಿಸಬಾರದೆಂದು ಹೇಳುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳು ಅತಿ ಎಚ್ಚರಿಕೆ ವಹಿಸಿ ಇಂತಹ ನಾಚಿಕೆಗೇಡಿನ ಪ್ರಸಂಗಗಳು ವರದಿಯಲ್ಲಿ ಬರದಂತೆ ನೋಡಿಕೊಳ್ಳಬೇಕೆಂದು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಈ ವರದಿಯನ್ನು ಆಧಾರವಾಗಿಟ್ಟುಕೊಂಡು ಮಾತನಾಡುವುದಾದರೆ, ಈ ವರದಿಯ ೩೮ನೇ ಪುಟದಲ್ಲಿ Venkateshwara Institute of E. N. T. ಎಂದು ಇದೆ. ಸರ್ಕಾರದ ವತಿಯಿಂದ ನಡೆಯುವಂತಹ ಈ ದವಾಖಾನೆಗೆ ಈ ದೇವರ ಹೆಸರನ್ನು ಯಾವ ಕಾರಣದಿಂದ ಇಡಲಾಯಿತೆಂದು ಕೇಳುತ್ತೇನೆ? ನಾನೇನೂ ವೆಂಕಟೇಶ್ವರ ದೇವರಿಗೆ ವಿರೋಧಿಯಲ್ಲ; ಆದರೆ ಇಂದು ಈ ಹೆಸರನ್ನು ಇಟ್ಟರೆ ನಾಳೆ ಇನ್ನೊಂದು ಹೆಸರನ್ನು ಇಡಬೇಕಾಗುತ್ತದೆ. ಡೊನೇಷನ್ ಯಾರೇ ಕೊಡಲಿ, ನಮ್ಮದು ಜಾತ್ಯತೀತ ರಾಷ್ಟ್ರವೆಂದು ಹೇಳುವಾಗ ಅದರಲ್ಲಿಯೂ ಸರ್ಕಾರದ ವತಿಯಿಂದ ನಡೆಯುವಂತಹ ಈ ದವಾಖಾನೆಗೆ ದೇವರ ಹೆಸರನ್ನು ಇಡಲು ಅವಕಾಶ ಕೊಡುವುದು ಸರಿಯೇ ಎಂದು ಕೇಳುತ್ತೇನೆ? ದಯವಿಟ್ಟು ಇಂಥಾದ್ದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಸಾರ್ವತ್ರಿಕವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಈ ವೈದ್ಯರ ಬಗ್ಗೆ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇಷ್ಟೊತ್ತು ಒಬ್ಬ ವಿದ್ಯಾರ್ಥಿ ಎಂ. ಬಿ. ಬಿ. ಎಸ್. ವ್ಯಾಸಂಗವನ್ನು ಪೂರ್ತಿ ಮಾಡಿ ಹೊರಗೆ ಬರುವುದರೊಳಗೆ ಸರ್ಕಾರ ಎಷ್ಟು ಹಣವನ್ನು ವ್ಯಯ ಮಾಡುತ್ತದೋ, ಅಂತಹ ಡಾಕ್ಟರ್‌ಗಳಿಂದ ಬಡ ಜನರಿಗೆ ಏನಾದರೂ ಉಪಯೋಗವಾಗುತ್ತಿದೆಯೋ ಎಂದು ಕೇಳುತ್ತೇನೆ. ಸರ್ಕಾರ ಯಾವ ಒಂದು ಘನ ಉದ್ದೇಶವನ್ನು ಇಟ್ಟುಕೊಂಡು ಇಷ್ಟೊಂದು ಹಣವನ್ನು ಡಾಕ್ಟರ್ ಗಳನ್ನು ತಯಾರು ಮಾಡಲು ಖರ್ಚು ಮಾಡುತ್ತಿದೆಯೋ, ಆದರ ಒಂದು ಉದ್ದೇಶ ಸಫಲವಾಗಿದೆಯೋ ಎಂದು ಕೇಳುತ್ತೇನೆ? ಸರ್ಕಾರದ ಹಣದಿಂದ ವ್ಯಾಸಂಗ ಮಾಡಿ ಡಾಕ್ಟರ್ ಆದವರು ಹಳ್ಳಿಗಾಡಿನಲ್ಲಿ ಜನತೆಯ ಸೇವೆ ಮಾಡಲು ಕಾತುರರಾಗಿದ್ದಾರೆಯೇ ಎಂದು ಕೇಳುತ್ತೇನೆ? ಅನುಕೂಲಸ್ಥರಾಗಿರುವವರು ವ್ಯಾಸಂಗ ಮುಗಿದ ತಕ್ಷಣ ಶಹರಗಳಿಗೆ ಹೋಗಿ ಪ್ರಾಕ್ಟೀಸ್ ಮಾಡುತ್ತಾರೆ. ಅಷ್ಟೊಂದು ಅನುಕೂಲ ಇಲ್ಲದವರನ್ನು ನೀವು ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರ್ ಆಗಿ ನೇಮಕ ಮಾಡಿದರೆ, ಅವರು ೩-೪ ತಿಂಗಳ ಕಾಲ ಅಲ್ಲಿ ಕೆಲಸ ಮಾಡುತ್ತಾರೆ, ನಂತರ ರಜಾ ಹಾಕಿ, ಅಲ್ಲಿಂದ ವರ್ಗ ಮಾಡಿಸಿಕೊಳ್ಳಲು ಶಾಸಕರ ಭವನದ ಹತ್ತಿರ ಬಂದು ಅವರಿವರನ್ನು ನೋಡುತ್ತಾರೆ.

ಇಂತಹವರು ಟ್ರಾನ್ಸ್‌ಫರ್‌ಗೋಸ್ಕರ ಬರುತ್ತಾರೆ. ಹಳ್ಳಿಯ ಜನರ ಮನಸ್ಸು ನೋಯಿಸತಕ್ಕವರಿಗೆ, ಅವರಿಗೆ ಬೇಜಾರು ಮಾಡತಕ್ಕ ವೈದ್ಯಾಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಶ್ರೀಮಾನ್ ಲಿಂಗಪ್ಪನವರು ಹೇಳುತ್ತಿದ್ದರು ನಾವು ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡಬೇಕು ಎಂದು. ಹೀಗಿರುವಾಗ ಆಸ್ಪತ್ರೆಗಳಲ್ಲಿ ವರ್ಗವನ್ನು ಏತಕ್ಕೆ ಇಟ್ಟುಕೊಳ್ಳಬೇಕು. ಆಸ್ಪತ್ರೆಯಲ್ಲಿ ನಡೆಯುತಕ್ಕ ದೌರ್ಜನ್ಯವನ್ನು ನೋಡಿದರೆ ನಾವು ಇವತ್ತು ತಲೆತಗ್ಗಿಸಬೇಕಾಗುತ್ತದೆ. ಪ್ರಗತಿಪರವಾದ ಸುಧಾರಣೆ ಮಾಡಬೇಕು; ಜನರಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳುವಾಗ ಈ ರೀತಿ ಆಸ್ಪತ್ರೆಗಳಲ್ಲಿ ಅನ್ಯಾಯವಾಗುವುದನ್ನು ತಪ್ಪಿಸಬೇಕು. ಇವತ್ತು ಸಾಮಾನ್ಯ ಜನಗಳಿಗೆ ಹೆಚ್ಚು [illegible]ಯಿಂದ ಮಹತ್ವ ಕೊಟ್ಟು ಚಿಕಿತ್ಸೆ ಕೊಡತಕ್ಕಂತಹ ಒಂದು ವ್ಯವಸ್ಥೆ ಸರ್ಕಾರಿ ಆಸ್ಪತ್ರೆಯಲ್ಲಿ ಆಗಬೇಕು. ಆದರೆ ಇವತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಯಾರು ಹಣ ಕೊಡುತ್ತಾರೆ, ಯಾರಿಗೆ ಡಾಕ್ಟರುಗಳ ಪರಿಚಯ ಇರುತ್ತದೆ ಅಂಥವರಿಗೆ ಹೆಚ್ಚಿನ ಸೌಲಭ್ಯ ಸಿಗುತ್ತದೆ. ಶಾಸಕರು ಸರ್ಕಾರಿ ಆಸ್ಪತ್ರೆಗಳಿಗೆ ಹೋದಾಗ ಅವರಿಗೆ ಏನೂ ಖಾಯಿಲೆ ಇಲ್ಲದಿದ್ದರೂ ಕೂಡ ಅವರನ್ನು ಚೆಕ್ ಅಪ್ ಮಾಡಿ ಅವರಿಗೆ ೨೦ ಕಾಯಿಲೆ ಇವೆ ಎಂದು ೫೦ ಪ್ರಿಸ್ಕ್ರಿಪ್ಷನ್ ಬರೆದು ಕೊಡುತ್ತಾರೆ. ಇದು ಬಹಳ ನೋವಿನ ವಿಷಯವೆಂದು ನಾನು ತಿಳಿದುಕೊಳ್ಳುತ್ತೇನೆ. ಇವರು ಶಾಸಕರ ಮರ್ಜಿಯನ್ನು ಇಟ್ಟುಕೊಳ್ಳಬೇಕು; ವರ್ಗ ಮಾಡಿಸಿಕೊಳ್ಳಬೇಕು; ಪ್ರಮೋಷನ್ ಮಾಡಿಸಿಕೊಳ್ಳಬೇಕು; ಸಸ್ಪೆನ್‌ಷನ್ ಆಗಿದ್ದರೆ ರದ್ದು ಮಾಡಿಸಿಕೊಳ್ಳಬೇಕು ಎಂದು ಈ ರೀತಿ ಭಾವನೆ ಇಟ್ಟುಕೊಂಡು ಶಾಸಕರ ಪ್ರೀತಿ ವಿಶ್ವಾಸವನ್ನು ಪಡೆದುಕೊಳ್ಳುತ್ತಾರೆ. ಅಂತಹ

ಒಂದು ಮನೋಭಾವವನ್ನು ಬಿಟ್ಟು ಜನತೆಯ ಸೇವೆಯನ್ನು ಮಾಡಬೇಕೆನ್ನುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಜನತೆಗೆ ಸಹಾಯ ಮಾಡಬೇಕು, ಜನತೆಗೆ ಸುಖ ಸೌಲಭ್ಯಗಳನ್ನು ಒದಗಿಸಬೇಕೆನ್ನುವ ಒಂದು ಗುರಿಯನ್ನು ಇಟ್ಟುಕೊಂಡು ನಾವು ಅಧಿಕಾರಕ್ಕೆ ಬಂದಿದ್ದೇವೆ. ಆ ರೀತಿ ಜನಗಳಿಗೆ ವಚನಗಳನ್ನು ಕೊಟ್ಟಿದ್ದೇವೆ. ನಾವು ಕೊಟ್ಟಂತಹ ವಚನವನ್ನು ಪಾಲಿಸದಿದ್ದರೆ ಜನತೆಗೆ ದ್ರೋಹ ಮಾಡಿದಂತಾಗುತ್ತದೆ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಆವೇಶಪೂರಿತವಾಗಿ ಮಾತನಾಡಿದರೂ ಕೂಡ ನಮ್ಮ ಇಲಾಖೆಯಲ್ಲಿ ನಡೆಯುತಕ್ಕ ಪರಿಸ್ಥಿತಿಯ ಹಿನ್ನೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಹೇಳುತ್ತಿದ್ದೇನೆ. ಆ ರೀತಿ ಎಚ್ಚೆತ್ತು ಸರ್ಕಾರ ಕೆಲಸ ಮಾಡಿದಿದ್ದರೆ ಕೆಟ್ಟ ಪರಿಣಾಮವುಂಟಾಗುತ್ತದೆ ಜನತೆಗೆ ದ್ರೋಹ ಮಾಡಿದಂತೆ ಆಗುತ್ತದೆ. ನನ್ನ ಶಾಸಕ ಮಿತ್ರರು ಒಂದು ವಿಚಾರ ತಿಳಿಸಿದ್ದಾರೆ. ಅದೇನೆಂದರೆ ಅವರು ಎಂ.ಬಿ.ಬಿ. ಎಸ್. ಶಿಕ್ಷಣಕ್ಕೆ ಪ್ರವೇಶ ದೊರಕಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟು ವಿಫಲರಾದರು. ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸ್ ಅವರು ಸೆಲೆಕ್ಷನ್ ಕಮಿಟಿಯ ಚೇರ್ಮನ್ ಆಗಿದ್ದರು. ಆದರೂ ಕೂಡ ಪ್ರವೇಶವನ್ನು ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲ.

MR. CHAIRMAN.— I would very much request the hon. Member not to refer to individual names on the Floor of the Houses; as far possible, avoid it.

SRI RAMESH KUMAR.— I shall avoid it. Inspite of his eligibility to get into the Medical College, he was denied admission and I don't know the reasons for that. He says, subsequently, he has become a Lawyer and then a Legislator now. This is what he perhaps intends to say through this slip.

MR CHAIRMAN.— If he had received the admission, he would not have become the legislator.

SRI RAMESH KUMAR.— I had also appeared for the interview but I could not get the seat. Of sourse, I have not scored very high percentage of marks and I have no grouse.

Before I thank the Chair for giving this opportunity to speak on these demands, I once again request the Hon. Minister for Health and Family Welfare to see that this department is cleansed. This is a very important department and I therefore request the Hon. Minister to kindly give necessary directions to the concerned officials to enable the patients to get proper treatment in the hospitals.

With these words, I once again thank the Chair and conclude my speech.

† ಶ್ರೀ ಪಂಪಾಪತಿ (ದಾವಣಗೆರೆ).— ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನಾ ಇಲಾಖೆಯ ಬೇಡಿಕೆಯನ್ನು ತಂದಿರುವ ಈ ಒಂದು ಸಂದರ್ಭದಲ್ಲಿ ನಾನು ನಮ್ಮ ಆರೋಗ್ಯ ಇಲಾಖೆಯವರಿಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ಏಳು ಮೆಡಿಕಲ್ ಕಾಲೇಜುಗಳು ಇವೆ. ಸುಮಾರು ಪ್ರತಿವರ್ಷವೂ ನೂರಾರು, ಸಾವಿರಾರು ಜನ ವಿದ್ಯಾರ್ಥಿಗಳು ಡಾಕ್ಟರುಗಳಾಗಿ ಹೊರಬರುತ್ತಿದ್ದಾರೆ. ವರ್ಷಕ್ಕೆ ಕೋಟ್ಯಂತರ ರೂಪಾಯಿಗಳನ್ನು ನಮ್ಮ ವೈದ್ಯರನ್ನು ತಯಾರು ಮಾಡುವುದಕ್ಕೆ ಸರ್ಕಾರ ಖರ್ಚು ಮಾಡುತ್ತಿದೆ. ಇಷ್ಟು ಹಣವನ್ನು ಖರ್ಚು ಮಾಡಿ ತಯಾರು ಮಾಡಲಾದ ವೈದ್ಯರುಗಳು ಹಳ್ಳಿಗಾಡು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುವುದಕ್ಕೆ ಹಿಂದೇಟಾಕುತ್ತಾರೆ. ಆದುದರಿಂದ ನನ್ನ ಒಂದು ಸಲಹೆ ಏನೆಂದರೆ, ಈ ವಿದ್ಯಾರ್ಥಿ

ಗಳು ವೈದ್ಯಕೀಯ ಕಾಲೇಜುಗಳಿಗೆ ಸೇರುವಾಗಲೇ ಅವರ ಹತ್ತಿರ ಒಂದು ಕಂಡೀಷನ್ ಬರೆಸಿಕೊಳ್ಳಬೇಕು ಅವರು ವೈದ್ಯಕೀಯ ಶಿಕ್ಷಣವನ್ನು ಪೂರ್ಣಗೊಳಿಸಿದಮೇಲೆ ಕನಿಷ್ಟ ಪಕ್ಷ ಇಷ್ಟು ವರ್ಷ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕೆಂದು ಕಂಡೀಷನ್ ಬರೆಸಿಕೊಂಡು ಅವರಿಗೆ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಕೊಡಬೇಕು. ಇವತ್ತಿನ ದಿವಸ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಸಾಮಾನ್ಯ ಜನರ ಹಣವನ್ನು ಸಂಗ್ರಹ ಮಾಡಿ, ಅದರ ಮೂಲಕ ಇವರು ವೈದ್ಯರಾಗಿ ಇವತ್ತು ಗ್ರಾಮಗಳನ್ನು ನಿರ್ಲಕ್ಷಿಸುತ್ತಾರೆ. ಇಂತಹವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪ್ಲಾಂಟೇಷನ್ ಕೆಲಸಗಾರರ ಬಗ್ಗೆ ಮಾತನಾಡುತ್ತಾ ಇವತ್ತು ಕಾನೂನು ಪ್ರಕಾರ ಮಾಲೀಕ ಕೆಲಸಗಾರರ ಆರೋಗ್ಯದ ಬಗ್ಗೆ ಆದ್ಯ ಗಮನ ಕೊಟ್ಟು ಅವರಿಗೆ ತಕ್ಕ ಚಿಕಿತ್ಸೆ ಕೊಡಿಸಬೇಕೆಂದು ಇದೆ. ಈ ಕಾನೂನನ್ನು ಕಡೆಗಣಿಸಿ ಇವತ್ತು ಎಷ್ಟೋ ಮಾಲೀಕರು ಕೆಲಸಗಾರರ ಬಗ್ಗೆ ವಿಚಾರ ಮಾಡುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಆ ಪ್ಲಾಂಟೇಷನ್ ಕೆಲಸಗಾರರ ಪರಿಸ್ಥಿತಿ ಹೀನಾಯವಾಗಿದೆ, ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅವರುಗಳಿಗೆ ಇವತ್ತು ವೈದ್ಯರುಗಳ ಅವಶ್ಯವಿರುವುದರಿಂದ, ಅವರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಜೊತೆಗೆ ಈಗ ನಮ್ಮ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಕೇಂದ್ರ ಸರ್ಕಾರದವರು ಹಣ ಸಂಗ್ರಹ ಮಾಡುತ್ತಿದ್ದಾರೆ. ಆದ್ದರಿಂದ, ಅಂತಹ ಹಣವನ್ನು ಇವತ್ತು ನಮ್ಮ ವೈದ್ಯಕೀಯ ಇಲಾಖೆಯವರು ಪಡೆದು ಇವತ್ತು ಬೀಡಿ ಕೆಲಸಗಾರರಿಗೆ, ಕಾಯಿಲೆ ಜಾಸ್ತಿ ಇರುವವರಿಗೆ ತಕ್ಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಬೀಡಿ ಕಾರ್ಮಿಕರಲ್ಲಿ ಟಿ.ಬಿ. ಕಾಯಿಲೆ ಜಾಸ್ತಿಯಾಗುತ್ತಿದೆ. ಇದು ಮನೆಯೊಳಗೆ ಕೆಲಸ ಮಾಡತಕ್ಕ ಕಸುಬಾಗಿರುವುದರಿಂದ, ಇದರಲ್ಲಿ ಹೆಚ್ಚು ಸಂಖ್ಯೆ ಹೆಣ್ಣು ಮಕ್ಕಳಾಗಿರುತ್ತಾರೆ. ಅದರಲ್ಲೂ ಮುಸ್ಲಿಮ್ ಹೆಣ್ಣು ಮಕ್ಕಳು ಈ ಕಾರ್ಯದಲ್ಲಿ ತೊಡಗಿದ್ದು, ಇವರು ಮನೆಯಿಂದ ಹೊರಬರದೇ ಮನೆಯ ಒಳಗೇ ಈ ಬೀಡಿ ಕಟ್ಟುವ ಕಾರ್ಯದಲ್ಲಿ ತೊಡಗಿರುವುದರಿಂದ ಅವರಿಗೆ ಹೆಚ್ಚಾಗಿ ಟಿ.ಬಿ. ಕಾಯಿಲೆ ಆವರಿಸಿದೆ. ಈ ಬೀಡಿ ಕಾರ್ಮಿಕರ ಒಂದು ಚಿಂತಾಜನಕ ಸ್ಥಿತಿಯನ್ನು ಪರಿಹರಿಸುವುದಕ್ಕೆ ಟಿ.ಬಿ. ಆಸ್ಪತ್ರೆಗಳನ್ನು ಇಂತಹ ಸ್ಥಳಗಳಲ್ಲಿ ಕಟ್ಟಿಸಿಕೊಡಬೇಕೆಂದೂ. ಹಾಗೂ ಈ ಆಸ್ಪತ್ರೆಗಳು ಇದ್ದ ಕಡೆ ಹೆಚ್ಚು ಹೆಚ್ಚು ಬೆಡ್ಡುಗಳನ್ನು ಒದಗಿಸಿಕೊಡಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ. ದಾವಣಗೆರೆಯಲ್ಲಿಯೂ ಕೂಡ ಒಂದು ಟಿ.ಬಿ. ಹಾಸ್ಪಿಟಲ್ ಇದೆ. ಜನರಲ್ ಆಸ್ಪತ್ರೆ ಹಾಗೂ ಟಿ.ಬಿ. ಹಾಸ್ಪಿಟಲ್ ಎರಡೂ ಹೊಂದಿಕೊಂಡು ಒಂದೇ ಸ್ಥಳದಲ್ಲಿವೆ. ಡಾಕ್ಟರುಗಳು ಟಿ.ಬಿ. ಒಂದು ದೊಡ್ಡ ಕಾಯಿಲೆ ಅಲ್ಲ ಎಂದು ಹೇಳುತ್ತಾರೆ. ಆದರೆ ಇದು ಒಂದು ಅಂಟುಜಾಡ್ಯ ಎಂಬುದನ್ನು ಮರೆಯಬಾರದು. ಆದ್ದರಿಂದ ಇಂತಹ ಟಿ.ಬಿ. ಆಸ್ಪತ್ರೆಗಳನ್ನು ಊರಿನ ಹೊರಗೆ ವಿಶಾಲವಾದ ಸ್ಥಳಗಳಲ್ಲಿ, ಆರೋಗ್ಯಕರವಾದ ಸ್ಥಳಗಳಲ್ಲಿ ಇಂತಹ ಆಸ್ಪತ್ರೆಗಳನ್ನು ಇವತ್ತು ಕಟ್ಟಿಸಿ ಈ ಕಾಯಿಲೆ ಬೇರೆಯವರಿಗೆ ಹರಡದಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದಿನ ಕಾಲದಲ್ಲಿ ಕಾಯಿಲೆ ಕಡಿಮೆ ಇತ್ತು. ಆದರೆ ಇವತ್ತು ಎಲ್ಲಾ ಕಡೆಯೂ ಈ ಕಾಯಿಲೆ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ಇವತ್ತು ಸರಿಯಾದ ವೈದ್ಯಕೀಯ ಸೌಲಭ್ಯ ಸಾಮಾನ್ಯ ಜನಗಳಿಗೆ ಸಿಗದಿರುವುದೇ ಕಾರಣವೆಂದು ಭಾವಿಸುತ್ತೇನೆ. ಇವತ್ತು ದಾವಣಗೆರೆಯಲ್ಲಿ ಪರಿಸ್ಥಿತಿ ಹೀನಾಯವಾಗಿದೆ. ಇವತ್ತು ಟೆಕ್ಸ್‌ಟೈಲ್ಸ್ ಮಿಲ್ಸ್ ಕಾರ್ಮಿಕರಲ್ಲಿಯೂ ಈ ಟಿ.ಬಿ. ಕಾಯಿಲೆ ಹೆಚ್ಚಾಗುತ್ತಿದೆ. ಬಡ ಕೂಲಿಗಾರರಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಇಂತಹ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ. ಇವತ್ತು ಅವರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಇವತ್ತು ಅವರ ಆರೋಗ್ಯ ಕಾಪಾಡಬೇಕಾದರೆ ಅವರಿಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಟಿ.ಬಿ. ಹಾಸ್ಪಿಟಲ್‌ಗಳಲ್ಲಿ ೨೫೦-೩೦೦ ಬೆಡ್ಡುಗಳನ್ನು ಇವತ್ತು ಜಾಸ್ತಿ ಹಾಕಿಸಿ ಈ ಬಡವರು ಅಲ್ಲಿ ಸೇರುವಂತೆ ವ್ಯವಸ್ಥೆ ಮಾಡಬೇಕು. ಟಿ. ಬಿ. ಕಾಯಿಲೆ ಇರತಕ್ಕವರಿಗೆ ಬರೀ ಔಷಧಿಯನ್ನು ಒದಗಿಸಿದರೆ ಆಗಲಿಲ್ಲ. ಅವರಿಗೆ ಒಳ್ಳೆಯ ಆಹಾರ ಬಹಳ ಮುಖ್ಯ. ಈ ಕಾಯಿಲೆ ಇರುವವರಿಗೆ ಸಾಮಾನ್ಯ ಕಾಯಿಲೆ ಇರುವವರಿಗೆ ಒದಗಿಸುವ ಆಹಾರವನ್ನು ಒದಗಿಸಿದರೆ ಉಪಯೋಗವಾಗುವುದಿಲ್ಲ. ಆದುದರಿಂದ ಈ ಟಿ. ಬಿ. ಇರತಕ್ಕವರಿಗೆ ಮೊಟ್ಟೆ, ಹಾಲು, ಹಣ್ಣು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರು ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಚಿಕ್ಕ ಮಕ್ಕಳ ಬಗ್ಗೆ ಹೇಳುವುದಾದರೆ, ದಾವಣಗೆರೆಯ ದೊಡ್ಡ ಜನರಲ್ ಆಸ್ಪತ್ರೆಯಲ್ಲಿ ಚಿಕ್ಕ ಮಕ್ಕಳಿಗೆ ಇರತಕ್ಕಂಥ ಸ್ಥಳ ಬಹಳ ಕಡಿಮೆ. ಇವತ್ತು ಮಾನ್ಯ ಸಚಿವರು ಹೇಳಿಬಿಟ್ಟು ಹೋದರೆ ಇದರ ಬಗ್ಗೆ ವ್ಯವಸ್ಥೆ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಅಲ್ಲಿ ಒಂದೊಂದು ಬೆಡ್ಡಿಗೆ ನಾಲ್ಕೈದು ಮಕ್ಕಳನ್ನು ಹಾಕಿರುತ್ತಾರೆ. ಆ

ಮಕ್ಕಳನ್ನು ನೋಡುವಾಗ ಒಂದು ಮಗು ಬೇಧಿ ಮಾಡಿಕೊಂಡರೆ ಇನ್ನೊಂದು ಮಗುವಿಗೆ ಹಿಡಿಯುತ್ತದೆ. ಇದು ನಾನು ಕಣ್ಣಾರೆ ಕಂಡ ದೃಷ್ಯ. ಇದರ ಬಗ್ಗೆ ಡಾಕ್ಟರನ್ನು ಕೇಳಿದಾಗ ನಾವೇನು ಮಾಡುವುದು ಸ್ಥಳಾವಕಾಶವಿಲ್ಲ ಎಂದು ಹೇಳುತ್ತಾರೆ. ದಾವಣಗೆರೆಯಲ್ಲಿ ಮಕ್ಕಳನ್ನು ನೋಡತಕ್ಕ ಡಾಕ್ಟರು ಬಹಳ ಒಳ್ಳೆಯ ಡಾಕ್ಟರು, ನಿರ್ಮಲ ಕೇಸರಿ ಮತ್ತು ಬಾಣಾಪುರ ಮಠ ಎಂದು ಇದ್ದಾರೆ. ಇವರು ಮಕ್ಕಳನ್ನು ತುಂಬಾ ಚೆನ್ನಾಗಿ ನೋಡುತ್ತಾರೆ. ಆದರೆ ಸ್ಥಳಾವಕಾಶವಿಲ್ಲ.

೫-00 ಪಿ. ಎಂ.

ಈ ರೀತಿ ಇದ್ದರೆ ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ರೋಗ ಹರಡುತ್ತದೆ. ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಕೂಡಲೇ ಗಮನ ಹರಿಸಬೇಕು. ಎಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಕುಷ್ಠ ರೋಗವನ್ನು ಹೆಚ್ಚಾಗಿ ನೋಡುತ್ತಿದ್ದೇವೆ. ಇವತ್ತು ಬೇಕಾದಷ್ಟು ಜನ ಕುಷ್ಠರೋಗದಿಂದ ನರಳುತ್ತಿದ್ದಾರೆ. ಕೆಲವರು ಭಿಕ್ಷೆ ಎತ್ತುತ್ತಿದ್ದಾರೆ. ಈ ಕುಷ್ಠ ರೋಗವನ್ನು ನಿವಾರಣೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಇದರ ಬಗ್ಗೆ ಸರ್ಕಾರ ಏಕೆ ಗಮನಹರಿಸಿಲ್ಲವೋ ಗೊತ್ತಾಗಲಿಲ್ಲ. ಇದು ಅಂಟು ರೋಗ; ಒಬ್ಬರಿಂದ ಒಬ್ಬರಿಗೆ ಅಂಟುತಕ್ಕ ಕಾಯಿಲೆ. ಇದು ಹರಡದಂತೆ ಸರಿಯಾದ ವ್ಯವಸ್ಥೆಯನ್ನು ಒದಗಿಸಿಕೊಡಬೇಕಾದುದು ಸರ್ಕಾರದ ಕರ್ತವ್ಯ. ಆದ್ದರಿಂದ ದಾವಣಗೆರೆಯ ಕೊಂಡಜ್ಜಿಯಲ್ಲಿ ಕುಷ್ಠರೋಗ ನಿವಾರಣಾ ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ. ಅಂಥಾ ಕಡೆ ಹೆಚ್ಚಾಗಿ ಹಣವನ್ನು ಖರ್ಚುಮಾಡಿ ಕುಷ್ಠ ರೋಗಿಗಳನ್ನು ಆದಷ್ಟೂ ಒಂದು ಕಡೆ ಸೇರಿಸಿ ಇದನ್ನು ನಿವಾರಣೆ ಮಾಡಬೇಕು, ಅನುಕೂಲಸ್ಥರು ಮನೆಯಲ್ಲೇ ಇರುತ್ತಾರೆ. ಆದರೆ ರಸ್ತೆಯಲ್ಲಿ ಭಿಕ್ಷೆ ಎತ್ತುವುದಕ್ಕೆ ಕೂತಿರತಕ್ಕವರನ್ನು, ಬೇರೆ ಬೇರೆ ಕಡೆ ತಿರುಗಾಡಿ ಸಾಮಾನ್ಯವಾಗಿ ಭಿಕ್ಷೆ ಎತ್ತಿ ಜೀವನ ಮಾಡತಕ್ಕ ಜನರನ್ನು ಒಂದು ಕಡೆ ಸೇರಿಸಬೇಕು, ಅಲ್ಲಲ್ಲಿ ಕುಷ್ಠರೋಗ ನಿವಾರಣಾ ಕೇಂದ್ರಗಳನ್ನು ಸ್ಥಾಪನೆಮಾಡಿ, ಆ ಮೂಲಕ ಅವರ ಜೀವನವನ್ನು ಉತ್ತಮಪಡಿಸತಕ್ಕ ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೆಂದರೆ, ನಮ್ಮ ಆರೋಗ್ಯ ಇಲಾಖೆಗೆ ಇ.ಎಸ್.ಐ. ಸಂಬಂಧಪಟ್ಟಿರುತ್ತದೋ ಇಲ್ಲವೋ ಗೊತ್ತಿಲ್ಲ, ಸಾಮಾನ್ಯವಾಗಿ ಬರಲಿಕ್ಕಿಲ್ಲ ಎಂದು ಕಾಣುತ್ತದೆ. ಆದರೆ ಡಾಕ್ಟರ್ಸ್‌ನ್ನು ಒದಗಿಸುವವರು ನೀವು, ಅವರ ಮೇಲೆ ಅಧಿಕಾರವನ್ನು ಇಟ್ಟಿರತಕ್ಕವರು ಬೇರೆ ಇಲಾಖೆಯವರು. ಇದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅಲ್ಲಿ ಎಷ್ಟು ಡಾಕ್ಟರುಗಳು ಇರಬೇಕೋ ಅಷ್ಟು ಡಾಕ್ಟರುಗಳಿಲ್ಲ; ಇರತಕ್ಕವರು ಸರಿಯಾಗಿ ಕೆಲಸ ಮಾಡುವುದಿಲ್ಲ. ಅವರು ರಜಾ ಹೋದರೆ ಅಲ್ಲಿರತಕ್ಕ ಕಾರ್ಮಿಕರಿಗೆ ಆಗತಕ್ಕ ತೊಂದರೆಯನ್ನು ನಾನು ಯಾವ ರೀತಿ ವರ್ಣನೆ ಮಾಡಬೇಕೋ ಗೊತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಆದಷ್ಟು ನಿಗಾವಹಿಸಬೇಕು. ಅಲ್ಲಿರತಕ್ಕ ಕಾರ್ಮಿಕರು ಸೌಕರ್ಯವನ್ನು ಪಡೆಯಬೇಕಾದಂತಹವರು, ಹಣವನ್ನು ಕೊಡತಕ್ಕವರು. ಇ.ಎಸ್.ಐ ನಲ್ಲಿ ಕಾರ್ಮಿಕರು ಇದ್ದಾರೆ, ಅವರು ಹಣವನ್ನು ಕೊಡುತ್ತಾರೆ, ಹಣವನ್ನು ಕೊಡತಕ್ಕ ಜನರಿಗೆ ಸರಿಯಾದ ವ್ಯವಸ್ಥೆಯನ್ನು ಒದಗಿಸಿಕೊಡಬೇಕಾದುದು ಸರ್ಕಾರದ ಕರ್ತವ್ಯ, ಡಾಕ್ಟರನ್ನು ಒದಗಿಸತಕ್ಕ ತಾವು ಡಾಕ್ಟರುಗಳನ್ನು ಸರಿಯಾಗಿ ಒದಗಿಸಿಕೊಡುತ್ತಾ ಇಲ್ಲ. ನಮ್ಮ ದೇಶದಲ್ಲಿ ನಿರುದ್ಯೋಗ ಇದೆ. ವೈದ್ಯರುಗಳು ಸಿಕ್ಕದೇ ಇರತಕ್ಕಂಥ ಪರಿಸ್ಥಿತಿ ಏನಿಲ್ಲ. ಬೇಕಾದಷ್ಟು ಜನ ಕೆಲಸವಿಲ್ಲದೆ ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಇಂತಹ ಕಾಲದಲ್ಲೂ ಕೂಡ ವೈದ್ಯರು ಇಲ್ಲ ಎನ್ನತಕ್ಕಂಥ ಮಾತನ್ನು ನಾವು ಕೇಳುವಾಗ ನಮಗೆ ನಾಚಿಕೆಯಾಗುತ್ತದೆ. ಇವತ್ತು ವೈದ್ಯರು ಇಲ್ಲ, ನರ್ಸ್‌ಗಳು ಇಲ್ಲ, ಸಿಬ್ಬಂದಿವರ್ಗವಿಲ್ಲ ಎನ್ನತಕ್ಕಂಥ ಒಂದು ಪರಿಸ್ಥಿತಿ ಇಡೀ ರಾಜ್ಯಾದ್ಯಂತ ಎಲ್ಲಾ ಕಡೆ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತೊಂದು ವಿಷಯವೆಂದರೆ, ಇವತ್ತು ಖಾಸಗಿ ವೈದ್ಯರು ನಡೆಸತಕ್ಕ ಆಸ್ಪತ್ರೆಗಳಲ್ಲಿ ಇಂತಿಷ್ಟೇ ಸ್ಥಳ ಇರಬೇಕು, ಹೀಗೇ ಇರಬೇಕು ಎಂಬತಕ್ಕಂಥ ವ್ಯವಸ್ಥೆ ಇದೆ. ಆದರೆ ಇ. ಎಸ್. ಐ. ನಡೆಸತಕ್ಕಂಥಾದ್ದು ಸರ್ಕಾರ, ಈ ಆಸ್ಪತ್ರೆಯಲ್ಲಿರತಕ್ಕ ಒಂದು ವ್ಯವಸ್ಥೆಯನ್ನು ತಾವು ನೋಡಬೇಕು. ಈ ಆಸ್ಪತ್ರೆಯಲ್ಲಿ ಎಲ್ಲಾ ಒಂದೇ ಕಡೆ ಇರುತ್ತದೆ. ಇಂಜಕ್ಷನ್ ಕೊಡುವಂಥಾದ್ದು ಹೆಣ್ಣು ಮಕ್ಕಳಿಗೂ, ಗಂಡು ಮಕ್ಕಳಿಗೂ ಎಲ್ಲರಿಗೂ ಒಂದೇ ಕಡೆ ವ್ಯವಸ್ಥೆ ಇರುತ್ತದೆ. ಇದು ಏನು ಅನ್ಯಾಯ ಎಂದು ನಾನು ಕೇಳುತ್ತೇನೆ. ಇದನ್ನು ನೋಡತಕ್ಕ ಅಧಿಕಾರಿಗಳು ಯಾರೂ ಇಲ್ಲವೇ ಎಂದು ಕೇಳುತ್ತೇನೆ. ಅದು ಕಾರ್ಮಿಕರ ಆಸ್ಪತ್ರೆ

ಬಡ ಜನರ ಆಸ್ಪತ್ರೆ, ಬಡ ಜನರ ಹಿತವನ್ನು ರಕ್ಷಣೆ ಮಾಡತಕ್ಕ ಸರ್ಕಾರ ಈ ರೀತಿ ಆಗುವುದನ್ನು ಸರಿಯೋ ಎಂದು ವಿಚಾರ ಮಾಡಬೇಕು. ಕೂಡಲೇ ಅಧಿಕಾರಿಗಳಿಗೆ ಸೂಕ್ತವಾದ ಆಜ್ಞೆಯನ್ನು ಮಾಡಬೇಕು. ಇಂಥಾ ಆಸ್ಪತ್ರೆಗಳನ್ನು ನಡೆಸುವುದಕ್ಕೆ ಸರಿಯಾದ ಸ್ಥಳಗಳನ್ನು ಒದಗಿಸಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಹಿಂದಿನ ಆರೋಗ್ಯ ಸಚಿವರು ಬೆಂಗಳೂರಿನ ರಾಜಾಜಿನಗರದಲ್ಲಿ ಜನರಲ್ ಆಸ್ಪತ್ರೆ ತೆರೆಯುತ್ತೇವೆಂದು ಹೇಳಿದ್ದರು. ಅದಕ್ಕಾಗಿ ಇದ್ದ ಸ್ಥಳದಲ್ಲಿ ಇವತ್ತು ಕೊಳಚೆ ಪ್ರದೇಶ ನಿರ್ಮಾಣವಾಗತಕ್ಕ ಪರಿಸ್ಥಿತಿ ಇದೆ. ಮಾನ್ಯ ಆಮೂರ್ಗಂರವರು ಹೇಳಿದ ಹಾಗೆ ಒಂದೇ ಕಡೆ ದೊಡ್ಡ ಆಸ್ಪತ್ರೆಗಳನ್ನು ನಿರ್ಮಾಣಮಾಡುವುದಕ್ಕೆ ಬದಲಾಗಿ ಬೇರೆ ಬೇರೆ ಕಡೆ ಮಾಡುವುದು ಒಳ್ಳೆಯದು. ದಾವಣಗೆರೆಯಲ್ಲಿ ಇ.ಎಸ್.ಐ. ಆಸ್ಪತ್ರೆ ನಿರ್ಮಾಣವಾಗಬೇಕು ಎಂದು ಹಲವಾರು ವರ್ಷಗಳಿಂದ ಸೂಚನೆ ಇದೆ, ಬೇಡಿಕೆ ಇದೆ. ಅಲ್ಲಿನ ಕಾರ್ಮಿಕರ ಪರಿಸ್ಥಿತಿಯನ್ನು ವಿಚಾರಮಾಡಿ ಗಮನದಲ್ಲಿಟ್ಟುಕೊಂಡು ಅದಕ್ಕಾಗಿ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು, ನನ್ನ ಈ ನಾಲ್ಕು ಸಲಹೆಗಳನ್ನು ತಾವು ಕಾರ್ಯರೂಪಕ್ಕೆ ತರುತ್ತೀರಿ ಎಂದು ಭಾವಿಸಿ ಈ ದಿವಸ ತಾವು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಕೆ. ಕಳ್ಳಿಗುಡ್ಡ (ಬಾಗಲಕೋಟೆ).— ಸನ್ಮಾನ್ಯ ಅಧ್ಯಕ್ಷರೇ, ಈ ದವಾಖಾನೆಗಳ ಬಗ್ಗೆ ಹೇಳಬೇಕು ಅಂದರೆ, ಈ ದವಾಖಾನೆಗಳು ಬಸ್ ಸ್ಟ್ಯಾಂಡ್ ಇದ್ದ ಹಾಗೆ. ಅಷ್ಟೊಂದು ಅಸಹ್ಯವಾಗಿರುತ್ತವೆ. ಇದು ಯಾರ ತಪ್ಪಲ್ಲ, ಆದರೆ ದವಾಖಾನೆಗಳಲ್ಲಿ ಇಷ್ಟು ಅಸಹ್ಯ ಯಾರು ಮಾಡಿದ್ದು ಎಂದು ಯಾರೂ ಕೇಳುವಹಾಗಿಲ್ಲ. ಆಪರೇಷನ್ ಮಾಡಬೇಕು ಎಂದರೆ ಲೈಟ್ ಬಂದ್ ಆಗಿಬಿಡುತ್ತದೆ. ಇದನ್ನು ಯಾವರೀತಿ ಸುಧಾರಣೆ ಮಾಡಬೇಕೋ ಅದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಮಾಡಬೇಕು. ಆಪರೇಷನ್ ಮಾಡುವಾಗ್ಗೆ ಆಗಿಂದಾಗ್ಗೆ ಫಕ್ಕನೆ ಲೈಟ್ ಹೋಗಿಬಿಡುತ್ತದೆ. ಮಾನ್ಯ ಶ್ರೀನಿವಾಸ್ ರವರು ಈ ಸಂದರ್ಭದಲ್ಲಿ ಇದ್ದಿದ್ದರೆ ಅವರಿಗೆ ಹೇಳಬಹುದಾಗಿತ್ತು. ಇನ್ನೊಂದು ಮುಖ್ಯವಾದ ಅಂಶವೆಂದರೆ, ತಾಲ್ಲೂಕಿಗೆ ಒಂದು ಸಂಚಾರಿ ಆಸ್ಪತ್ರೆ ಶುರುಮಾಡಬೇಕು. ಇದಕ್ಕಾಗಿ ಬಸ್ಸುಗಳನ್ನು ಇಡಬೇಕು. ತಾಲ್ಲೂಕಿಗೆ ಒಂದೊಂದು ಸಂಚಾರಿ ಆಸ್ಪತ್ರೆ ಶುರುಮಾಡಿ ಅದು ಸಣ್ಣ ಸಣ್ಣ ಹಳ್ಳಿಗಳಿಗೂ ಹೋಗಬೇಕು. ಆದುದರಿಂದ ನಮ್ಮ ಆರೋಗ್ಯ ಮಂತ್ರಿಗಳು ನಮ್ಮ ಬಾಗಲಕೋಟೆಯಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಸಂಚಾರಿ ಆಸ್ಪತ್ರೆಯನ್ನು ಸುರುಮಾಡಿದರೆ ಅದರಿಂದ ಬಹಳ ಪ್ರಯೋಜನವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಇನ್ನು ಕಲ್ಲಾಗಿ ದವಾಖಾನೆಯಲ್ಲಿ ೫೦ ೬೦ ವರ್ಷಗಳಿಂದ ಹೆಣ ಕುಯ್ಯುತಕ್ಕ ಕಟ್ಟಡ ಇಲ್ಲದೆ, ಊರು ಬಿಟ್ಟು ಹೊರಗೆ ಗಿಡದ ನೆಳ್ಳಲ್ಲಿ ಹೆಣ ಕುಯ್ಯುತ್ತಾರೆ. ಆ ದವಾಖಾನೆಯಲ್ಲಿ ಹೆಣ ಕುಯ್ಯುವ ಕಕ್ಷೆ ಕಟ್ಟುವದನ್ನು ಕಟ್ಟಲಿಲ್ಲ. ಇದಕ್ಕೆ ಕಾರಣವೇನು ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಹೊಸ್ದು ಹೊಸ್ದು ಬಂದವ. ಆ ದವಾಖಾನೆಯ ಡಾಕ್ಟರನ್ನು ಇದರ ಬಗ್ಗೆ ಕೇಳಿದಾಗ, ಅವರು ಹೆಣ ಕುಯ್ಯುವ ಕಕ್ಷ ಇಲ್ಲಿ ಕಟ್ಟಿದ ಇಲ್ಲ. ಊರ ಹೊರಗೆ ಹಳ್ಳದಲ್ಲಿ ಕುಯ್ಯುತ್ತಾರೆ ಎಂದು ಹೇಳಿದರು. ಹೀಗೆ ಮಾಡಿದರೆ ಅವರ ಬಳಗದವರು, ಆಪ್ತೇಷ್ಟರು ಏನು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಅಲ್ಲಿ ಹೆಣ ಕುಯ್ಯುವ ಕಕ್ಷ ಬೇಗನೆ ಒಂದು ಕಟ್ಟಡ ಆಗಬೇಕು.

ಇನ್ನು ಔಷಧಿ ಬಗ್ಗೆ ಹೇಳುವುದು ಎಂದರೆ, ಔಷಧಿ ದವಾಖಾನೆಗೆ ಬರುವುದಿಲ್ಲ. ಅದರ [illegible] ೩ ತಿಂಗಳಿಗೆ ಬರುತ್ತದೆ. ಮತ್ತು ನಾನು ಬಾಗಲಕೋಟೆಯಲ್ಲಿರುವುದರಿಂದ ನಾನು [illegible] ಎಕ್ಸ್ ರೇ ಇನ್ಸ್ಟ್ರುಮೆಂಟಗೂ ಇದೆ. ಅದು ಕೆಟ್ಟು ಹೋಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳಿದಾಗ ಫಸ್ಟ್ [illegible] ಕೊಡುತ್ತೇವೆ ಎಂದು ಹೇಳಿದರು. [illegible] ಕಳುಹಿಸಿಕೊಟ್ಟಿಲ್ಲ [illegible] ಸಾಧಾರಣವಾಗಿ [illegible] ಅದರಿಂದ [illegible] ಅಲ್ಲಿಗೆ ಕಳುಹಿಸಿ ಕೊಡಬೇಕೆಂದು [illegible]. [illegible] ಡಾಕ್ಟರುಗಳ [illegible] ಇದ್ದಾರೆ, ಅವರು [illegible] ಅವರು [illegible] ಅವರನ್ನು ಅಲ್ಲಿಂದ [illegible] ಫರ್ [illegible] ಇದರಿಂದ [illegible] ಕಷ್ಟವಿಲ್ಲ. ಅವರನ್ನು [illegible] ಮಾಡಿ [illegible] ಇದರಿಂದ [illegible] ಅಧಿಕಾರಿಗಳಿಗೆ [illegible] ತಿಳಿದಿಲ್ಲ. ನಾನು [illegible] ಎಂ.ಎಲ್. ಎ. ಆಗಿ ಬಂದಿದ್ದರೂ [illegible] ಆದ್ದರಿಂದ

ಹೇಳುತ್ತಿದ್ದೇನೆ ಹಿಂದೆ ನಾವೇ ಎಷ್ಟೋಸಾರಿ ಈ ವರ್ಗದ ಬಗ್ಗೆ ಎಷ್ಟೋ ಜನರನ್ನು ವಿಧಾನಸೌಧಕ್ಕೆ ಕಳುಹಿಸಿದ್ದೇನೆ. ಹಿಂದೆ ಒಂದು ಸಾರಿ ಪಂಡಿತ ಜವಾಹರ್‌ಲಾಲ್ ನೆಹರೂರವರು ನಮ್ಮ ಬಿಜಾಪುರಕ್ಕೆ ಬಂದಿದ್ದಾಗ ಎಂ. ಎಲ್. ಎ ಚನ್ನಬಸಪ್ಪನವರ ಮನೆಯಲ್ಲಿ ಊಟ ಮಾಡುತ್ತಿದ್ದ ಸಮಯದಲ್ಲಿ ಈ ಡಾಕ್ಟರ್‌ಗಳ ವರ್ಗದ ಬಗ್ಗೆ ವಿಚಾರ ಬಂದಾಗ ಅವರು ಯಾವ ಅಧಿಕಾರಿಯೇ ಆಗಿರಲಿ ಅವನಿಗೆ ವರ್ಗ ಮಾಡುವ ಸಮಯ ಬಂದಾಗ ವರ್ಗ ಮಾಡಿ ಇಲ್ಲದಿದ್ದರೆ ಅವನಿಗೆ ಅಲ್ಲಿಯೇ ಎಲ್ಲಾ ಸೌಲಭ್ಯವನ್ನು ಒದಗಿಸಿ ಕೊಡಿ ಅಂತ ಹೇಳಿದ್ದರು. ಆ ಮಾತು ಇವತ್ತು ನನಗೆ ನೆನಪಿಗೆ ಬಂದುದರಿಂದ ಆ ಮಾತನ್ನು ಇವತ್ತು ಹೇಳಬೇಕಾಗಿ ಬಂತು. ಇದರಿಂದ ನಾನು ಅಧಿಕಾರಿಗಳನ್ನು ಸರಿಗಟ್ಟಿಕೊಂಡು, ಅವರನ್ನು ಮೇಲಕ್ಕೆ ಎತ್ತಿಟ್ಟುಕೊಂಡು ಮಾತನಾಡುತ್ತಿದ್ದೇನೆ ಅಂತ ಅಲ್ಲ. ತಪ್ಪಿದ್ದರೆ ತಪ್ಪೆಂದು ಹೇಳುವವನೇ ನಾನು ಅದರಲ್ಲಿ ಹಿಂದು ಮುಂದು ನೋಡುವವನು ಅಲ್ಲ. ಇವತ್ತು ಬಾಗಲ್‌ಕೋಟೆ ದವಾಖಾನೆಗೆ ಹೊರಗಡೆಯಿಂದ ಅನೇಕ ಜನರು ಬರುತ್ತಾರೆ ಆದರೆ ಅವರಿಗೆ ಅಲ್ಲಿ ಅಡಿಗೆ ಮಾಡಿಕೊಳ್ಳುವುದಕ್ಕೂ ಜಾಗವಿಲ್ಲ, ಆದುದರಿಂದ ಅಲ್ಲಿಗೆ ಬರತಕ್ಕ ರೋಗಿಗಳ ಕಡೆಯವರಿಗೆ ಅಡಿಗೆ ಮಾಡಿಕೊಳ್ಳಲು ಒಂದು ಕೋಣೆಯನ್ನಾದರೂ ಕಟ್ಟಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ. ಬಾಗಲಕೋಟೆಯೇನೂ ಮುಳುಗಿ ಹೋಗುವುದಿಲ್ಲ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರೂ ಹೇಳಿದ್ದಾರೆ, ಅದು ಏನಾದರೂ ಮುಳುಗಬೇಕಾದರೆ ಇನ್ನು ೨೦ ವರ್ಷಗಳು ಬೇಕಾಗಬಹುದು, ಆದುದರಿಂದ ಅಲ್ಲಿಗೆ ಅತ್ಯಂತ ಜರೂರಾಗಿ ಒಂದು ಗೆಸ್ಟ್ ಹೌಸ್‌ನ್ನಾದರೂ ಕಟ್ಟಿಸಿಕೊಡಿ ಎಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಲ್ಲಿ ಔಷಧಿಗಳ ಸಪ್ಲೈ ಸರಿಯಾಗಿಲ್ಲ. ಮತ್ತೆ ಒಂದು ಜೀಪ್‌ನ್ನು ಕೊಟ್ಟಿದ್ದೀರಿ, ಅದು ಒಂದು ಸಾರಿ ಚಾಲು ಆಗಿ ಓಡಿದರೆ ಪುನಃ ೫ ದಿವಸಗಳವರೆಗೆ ಬಂದ್ ಇರುತ್ತದೆ. ಅಂಥ ಜೀಪ್‌ಗಳನ್ನು ಕೊಡುವುದಕ್ಕಿಂತ ಸುಮ್ಮನೆ ಇರುವುದು ಮೇಲು. ಬಾಗಲ್‌ಕೋಟೆಗೆ ಅದಕ್ಕಾಗಿ ಒಂದು ವಾಹನ ಬೇಕಾಗಿದೆ ಎಂದು ನಾವು ಹಿಂದಿನ ಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರನ್ನು ಕೇಳಿದ್ದಾಗ ಕೊಡುತ್ತೇವೆ ಕೊಡುತ್ತೇವೆಂದು ಹೇಳುತ್ತಲೇ ಅವರು ಹೊರಟು ಹೋದರು ಆದುದರಿಂದ ತಮ್ಮ ಕಾಲದಲ್ಲಿಯಾದರೂ ನಮ್ಮ ಬಾಗಲ್‌ಕೋಟೆಗೆ ಒಂದು ಜೀಪನ್ನು ಒದಗಿಸಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಏತಕ್ಕೆಂದರೆ ಅಲ್ಲಿ ರಾತ್ರಿ ಹೊತ್ತಿನಲ್ಲಿ ಬೇಕು ಎಂದರೆ ಟಾಂಗಾ ರಿಕ್ಷಾಗಳೂ ಸಿಕ್ಕುವುದಿಲ್ಲ. ಒಂದು ಪಾರ್ಟಿ ಎಮರ್ಜೆನ್ಸಿ ಇದೆ ವೆಹಿಕಲ್ ಕಳುಹಿಸಿಕೊಡಿ ಎಂದರೆ ಒಂದೂ ಇರುವುದಿಲ್ಲ ಆದುದರಿಂದ ಅದಷ್ಟು ಜಾಗ್ರತೆ ಅಲ್ಲಿಗೆ ಕಳುಹಿಸಿ ಕೊಡುವುದಕ್ಕೆ ಅವಶ್ಯವಿದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕೆಲಸವನ್ನು ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಮಲ್ಲಪ್ಪನವರು ಮಾಡುತ್ತಾರೆ ಎನ್ನುವ ಇಚ್ಛೆ ಇದೆ. ತಾವು ಏನೋ ಕಾಳಜಿ ವಹಿಸಿ ಮಾಡುತ್ತೀರಿ ಆದರೆ ಆ ಕಾಗದ ಪತ್ರಗಳು ಮುಂದಕ್ಕೇ ಹೋಗುವುದಿಲ್ಲ. ಅದನ್ನು ಹಾಗೆಯೇ ಹೊರಳಿಸಿ ಹಾಗೆಯೇ ಇಟ್ಟು ಬಿಡುತ್ತಾರೆ ಅದು ನಿಮ್ಮ ಅಧಿಕಾರಿಗಳ ಟೇಬಲ್‌ಗಳ ಮೇಲೆಯೇ ಇರುತ್ತದೆಯೇ ಹೊರತು ಮುಂದುವರಿಯುವುದಿಲ್ಲ. ಇದರಿಂದ ನಿಮ್ಮ ಅಧಿಕಾರಿಗಳ ಕೈವಾಡವೇನೋ ಇದೆಂದು ಅನ್ನಿಸುತ್ತದೆ. ಆದುದರಿಂದ ತಾವು ಎಷ್ಟೇ ವಹಿಸಿದರೂ ಇದರಿಂದ ಅವು ಸರಿಯಾಗಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಹೀಗಾದರೆ ತಾವು ಹೋಗುವಾಗ ಕೆಟ್ಟ ಹೆಸರು ತೆಗೆದುಕೊಂಡು ಹೋಗಬೇಕಾದೀತು ಅದರ ಬಗ್ಗೆ ತಾವು ಎಚ್ಚರಿಕೆ ವಹಿಸಿಕೊಂಡಿರಬೇಕೆಂದು ತಿಳಿಸಿ, ಇವತ್ತು ಮಾತನಾಡುವವರ ಪಟ್ಟಿಯಲ್ಲಿ ನನ್ನ ಹೆಸರು ಇಲ್ಲದಿದ್ದರೂ ಮಾನ್ಯ ಅಧ್ಯಕ್ಷರು ಕೃಪೆ ಇಟ್ಟು ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಪ್ರಮೀಳಾ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅಜ್ಜಿ ಒಂದು ಮಾತನ್ನು ಹೇಳುತ್ತಿದ್ದಳು, ಸ್ವರ್ಗ, ನರಕ ಅಂತ ಅನ್ನುವುದು ಇದೆ ಅಂತ. ಸ್ವರ್ಗ ದೇವಲೋಕದಲ್ಲಿ, ನರಕ ಭೂ ಲೋಕದಲ್ಲಿ ಅಂತ. ತಾವು ನರಕವನ್ನು ನೋಡಬೇಕೆಂದರೆ ನಿಮ್ಮ ವಿಕ್ಟೋರಿಯಾ ಆಸ್ಪತ್ರೆಗೆ ಹೋದರೆ ನೋಡಬಹುದು, ಹಾಗೆಯೇ ಇಡೀ ಕರ್ನಾಟಕದಲ್ಲಿರುವ ಆಸ್ಪತ್ರೆಗಳಲ್ಲಿ ಕೂಡ ಈ ನರಕವನ್ನು ತಾವು ಕಾಣಬಹುದಾಗಿದೆ. ತಾವು ಮಾರ್ಗದ ಮಲ್ಲಪ್ಪನವರು ಎಂದು ಹೆಸರು ಇಟ್ಟುಕೊಂಡಿದ್ದೀರಿ. ಆದುದರಿಂದ ಈ ನರಕದಿಂದ ಹೊರಕ್ಕೆ ಬರುವುದಕ್ಕೆ ಮಾರ್ಗವನ್ನು ತೋರಿಸಿ ಎಂದು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ನಾನು ಕೆಲವು ಸೂಚನೆಗಳನ್ನು ಕೊಡುವುದಕ್ಕಿಂತ ಮುಂಚಿತವಾಗಿ ಆಸ್ಪತ್ರೆಗಳಲ್ಲಿ ನಡೆಯುತ್ತಿರತಕ್ಕ ಮತ್ತು ಕಾಲೇಜ್‌ಗಳಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ ಒಂದು ಚಿತ್ರವನ್ನು ತಮ್ಮ ಮುಂದಿಟ್ಟು ಆ ನಂತರ ತಮಗೆ ಒಂದೆರಡು ಸಲಹೆಗಳನ್ನು ಕೊಡಲು ಬಯಸುತ್ತೇನೆ. ನಮ್ಮ ಬೆಂಗಳೂರಿನಲ್ಲಿ ಒಂದು ಆಯುರ್ವೇದಿಕ್ ಕಾಲೇಜ್ ಅಂತ ಇದೆ. ಅಲ್ಲಿ ವಿದ್ಯಾಭ್ಯಾಸ ಯಾವಮಟ್ಟದಲ್ಲಿ

ನಡೆಯುತ್ತಿದೆ, ಹೇಗೆ ನಡೆಯುತ್ತಿದೆ ಎನ್ನುವ ಬಗ್ಗೆ ಒಂದೆರಡು ಚಿತ್ರಗಳು ತಮ್ಮ ಗಮನಕ್ಕೂ ಬಂದಿರ ಬಹುದು. ಅಲ್ಲಿರತಕ್ಕ ಒಬ್ಬ ಪ್ರಿನ್ಸಿಪಾಲರು ಒಬ್ಬರು ಯಾರಿದ್ದಾರೆ ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಅಲ್ಲಿಯ ಕೆಲವು ವಿದ್ಯಾರ್ಥಿ. ವಿದ್ಯಾರ್ಥಿನಿಯರುಳಿಗಗೆ ನೀವು ಪರೀಕ್ಷೆಯಲ್ಲಿ ಹೇಗೆ ಪಾಸ್ ಮಾಡುತ್ತೀರೋ ನೋಡುತ್ತೇನೆ, ಪರೀಕ್ಷೆಗೆ ಕೂಡಿಸುವುದಿಲ್ಲವೆಂದು ಹೇಳಿದಾಗ ಅವರು ಆಗ ಪೋಲಿಸ್‌ನವರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ ಮತ್ತು ಯೂನಿವರ್ಸಿಟಿ ಕಂಟ್ರೋಲ್ ರವರಿಗೆ ತಿಳಿಸಿದ ಮೇಲೆ, ಅವರು ಪರೀಕ್ಷೆ ಮಾಡದೇ ಇದ್ದರೆ ನಾನು ನೋಡಿಕೊಳ್ಳುತ್ತೇನೆ ನೀವು ಹೋಗಿ ಎಂದು ಆಶ್ವಾಸನೆ ಕೊಟ್ಟರು. ಅನಂತರ ಇಲ್ಲಿ ಪರೀಕ್ಷೆಗಳನ್ನು ನಡೆಸಿದ್ದಾರೆ. ಅಲ್ಲಿ ಒಬ್ಬ ವಿದ್ಯಾರ್ಥಿನಿ ಪ್ರತಿ ವರ್ಷವೂ ಫಸ್ಟ್ ರ್‍ಯಾಂಕ್ ಬರುತ್ತಿದ್ದಾಳೆ. ಅವಳು ಪ್ರಾಕ್ಟಿಕಲ್. ಥೀರಿ ಎಲ್ಲಾ ಪರಿಕ್ಷೆಗಳನ್ನು ಪಾಸ್ ಮಾಡಿದಂಥ ಒಬ್ಬ ವಿದ್ಯಾರ್ಥಿನಿಯನ್ನು ಫೇಲ್ ಮಾಡಿಸಿದ್ದಾರೆ. ಅವರು ಯಾವ ರೀತಿಯ ಪ್ರಶ್ನೆಯನ್ನು ಕೇಳಿ ಫೇಲ್ ಮಾಡಿಸಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ, ಅವರು ಅವಳಿಗೆ ಕೇಳಿದ ಪ್ರಶ್ನೆ ಈ ರೀತಿ ಇದೆ ; If a three month old pregnant woman comes to you, how will you prevent her pregnancy-? ಅಂತ ಕೇಳಿದ್ದಕ್ಕೆ, ಅವಳು ಏನು ಸಾರ್ ಈ ರೀತಿ ಪ್ರಶ್ನೆ ಕೇಳುತ್ತೀರಿ, It is termination of pregnancy and not prevention of pregnancy ಅಂತ ಉತ್ತರ ಕೊಟ್ಟಿದ್ದಾಳೆ. ಇದು ಒಂದೇ ಒಂದು ಕಾರಣದಿಂದ ಅವಳನ್ನು ಫೇಲ್ ಮಾಡಿಸಿದ್ದಾರೆ. ಇದಕ್ಕೆ ಕಾರಣವೇನು ಅಂತ ಕೇಳಿದಕ್ಕೆ You are not modest and so we are made you fail. ಅಂತ ಹೇಳಿದ್ದಾರೆ. ಆ ರೀತಿ ಉತ್ತರ ಕೊಟ್ಟಿರುವುದು ಕೂಡ ಟೇಪ್ ರಿಕಾರ್ಡ್ ಆಗಿದೆ ಅದು ಕೂಡ ಯೂನಿವರ್ಸಿಟಿ ಮುಂದೆ ಇದೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ ಇಂಥಾ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾರ್ಥಿನಿಗಳನ್ನು ಪರೀಕ್ಷೆ ಮಾಡುವುದಕ್ಕೆ, ಮೌಲ್ಯಮಾಪನ ಮಾಡುವುದಕ್ಕೆ ಇಂಥಾ ಮೌಲ್ಯಮಾಪಕರನ್ನು ನೇಮಿಸುವುದು ಸರಿಯೇ ? ಹೀಗೆ ಆದರೆ ಅವರಿಗೆ ನ್ಯಾಯ ದೊರಕುತ್ತದೆಯೇ ? ಎನ್ನುವ ಬಗ್ಗೆ ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ತಾವು ಯೋಚನೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ. ಇನ್ನೊಂದು ವಿಷಯ ನಿಮ್ಮ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅದು ಕಳೆದ ೨-೩ ತಿಂಗಳ ಹಿಂದೆ ನಡೆದಂಥ ಘಟನೆಯನ್ನೇ ಹೇಳುವುದಾದರೆ ಒಬ್ಬ ಲೆಕ್ಚರರ್ ತಮ್ಮ ಪತ್ನಿ ಊಟ ಮಾಡಲು ಆಗದೇ ಗಂಟಲು ನೋಯುತ್ತದೆಂದು ಹೇಳಿದಾಗ ಅವರು ಅಲ್ಲಿಗೆ ಕರೆದುಕೊಂಡು ಹೋಗಿದ್ದಾರೆ. ಆಗ ಅಲ್ಲಿಯ ಡಾಕ್ಟರ್ ರವರು ಅವಳನ್ನು ಸರಿಯಾಗಿ ಪರೀಕ್ಷೆ ಮಾಡದೇ ಒಂದು ವಾರ ಬಿಟ್ಟುಕೊಂಡು ಬನ್ನಿ ಅಂತ ಹೇಳಿ ಕಳುಹಿಸಿದ್ದಾರೆ. ಪುನಃ ಅವರು ಒಂದು ವಾರದಷ್ಟು ಹೊತ್ತಿಗೆ ಗಂಟಲಲ್ಲಿ ಹಾಲನ್ನೂ ಕುಡಿಯುವುದಕ್ಕೆ ಆಗದೇ ಬಹಳ ತೊಂದರೆ ಪಟ್ಟುಕೊಂಡು ಅಲ್ಲಿಗೆ ಹೋದಾಗ ಪುನಃ ಅವರು ಸರಿಯಾಗಿ ಚೆಕ್‌ಅಪ್ ಮಾಡದೇ ಇನ್ನೊಂದು ವಾರ ಬಿಟ್ಟು ಕೊಂಡು ಬನ್ನಿ ಅಂತ ಹೇಳಿ ಕಳುಹಿಸಿದ್ದಾರೆ. ಆದರೆ ಅಕಸ್ಮಾತ್ ಅವರು ಮಿಷನ್ ಆಸ್ಪತ್ರೆಯಲ್ಲಿ ತೋರಿಸಿದಾಗ ಅಲ್ಲಿಯ ಒಬ್ಬ ವೈದ್ಯರು ನೋಡಿ, ತಕ್ಷಣವೇ ನೀವು ಬೊಂಬಾಯಿಗೆ ಹೋಗಿ ತೋರಿಸಿಕೊಂಡು ಬನ್ನಿ ಥ್ರೋಟ್ ಕ್ಯಾನ್ಸರ್ ಆಗಿದೆಂದು ಹೇಳಿದ ಮೇಲೆ ಅವರು ಅಲ್ಲಿ ಒಂದೂವರೆ ತಿಂಗಳು ಇದ್ದು ವಾಸಿಮಾಡಿಕೊಂಡು ಮೊನ್ನೆ ಮೊನ್ನೆ ಬಂದಿದ್ದಾರೆ. ನಾನು ತಮ್ಮನ್ನು ಕೇಳುತ್ತೇನೆ ಇಂಥಾ ಆಸ್ಪತ್ರೆಗಳು ಇದ್ದು ಏನು ಪ್ರಯೋಜನ ? ಇದರ ಬಗ್ಗೆ ತಾವು ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಫಿಲಿಪ್ಸ್ ಅಲೆಕ್ಸಾಂಡರ ಎನ್ನು ವವರು ನಮ್ಮ ರಾಜ್ಯಕ್ಕೆ ಬಂದು ಪ್ರೈವೇಟ್ ನರ್ಸಿಂಗ್ ಹೋಮ್‌ನಲ್ಲಿ ಒಂದು ರೋಗಿಗೆ ತಗಲಿದ್ದ ಕಾಯಿಲೆಯನ್ನು ವಾಸಿ ಮಾಡಿ ಹೋಗಿದ್ದಾರೆ. ಇವತ್ತು ನೀವು ನಮ್ಮಲ್ಲಿರತಕ್ಕ ಪ್ರತಿಭಾವಂತರ ಡಾಕ್ಟರ್‌ಗಳಿಗೆ ನಿಮ್ಮ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಲು ಅವಕಾಶ ಕೊಡುತ್ತಿಲ್ಲ. ಅವರಿಗೆ ಸರಿಯಾದ ಒಂದು ಅವಕಾಶವನ್ನು, ಏತಕ್ಕೆ ಕಲ್ಪಿಸಿ ಕೊಡುತ್ತಿಲ್ಲವೆಂದು ತಮ್ಮಲ್ಲಿ ಕೇಳಬಯಸುತ್ತಿದ್ದೇನೆ. ತಾವು ಹಾಗ ಒಂದು ವೇಳೆ ಅವಕಾಶ ಕೊಟ್ಟಿದ್ದೇ ಆದರೆ ಅಲ್ಲಿರತಕ್ಕ ರೋಗಿಗಳ ಗುಣವಾಗುತ್ತಿತ್ತು. ಆದರೆ ಇವತ್ತು ನಮ್ಮಲ್ಲಿರತಕ್ಕ ದೊಡ್ಡದೋಷವೇನೆಂದರೆ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಯಾರಾದರೂ ಒಬ್ಬ ಗೈನೋ ಕಾಲಜಿಸ್ಟ್‌ನಲ್ಲಿ ಎಕ್ಸ್‌ಪರ್ಟ್ ಆಗಿರುವವರಿದ್ದರೆ ಅವರನ್ನು ತೆಗೆದುಕೊಂಡು ಹೋಗಿ ಕ್ಯಾನ್ಸರ್ ವಿಭಾಗಕ್ಕೆ ಹಾಕುತ್ತಿದ್ದೀರಿ, ಮತ್ತೆ ಇನ್ನೊಬ್ಬರು ಇನ್ನೊಂದರಲ್ಲಿ ಎಕ್ಸ್‌ಪರ್ಟ್ ಇದ್ದರೆ ಅವರನ್ನು ತೆಗೆದುಕೊಂಡು ಹೋಗಿ ಇನ್ನೊಂದಕ್ಕೆ ಹಾಕುತ್ತಿದ್ದೀರಿ. ಹೀಗಾಗಿ ಯಾರು ತಮ್ಮ ತಮ್ಮ ಕ್ಷೇತ್ರದಲ್ಲಿ ಅನುಭವ ಪಡೆದಿರು ತ್ತಾರೋ ಅವರು ಸರಿಯಾಗಿ ಕೆಲಸ ಮಾಡಲು ತಾವು ಅವಕಾಶವನ್ನು ಕಲ್ಪಿಸಿಕೊಡುತ್ತಿಲ್ಲವೆಂದು ಹೇಳ

ಬೇಕಾಗಿದೆ. ಆದುದರಿಂದ ನಿಮ್ಮಲ್ಲಿರತಕ್ಕ ಪ್ರತಿಭಾವಂತ ಡಾಕ್ಟರ್‌ಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ಹೆಚ್ಚು ಸಮಯ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಕೆಲವು ಸಲಹೆಗಳನ್ನು ಕೊಟ್ಟರೆ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಇಡೀ ಕರ್ನಾಟಕದಲ್ಲಿ ನೀವು ಪ್ರಪ್ರಥಮವಾಗಿ ಹೆಲ್ತ್ ಇನ್‌ಶ್ಯೂರೆನ್ಸ್ ಸ್ಕೀಂ ಎಂದು ಜಾರಿಗೆ ತಂದು, ಪ್ರತಿಯೊಬ್ಬ ಪ್ರಜೆಗೂ ಅವನ ಆರೋಗ್ಯ ಕೆಟ್ಟ ಕಾಲದಲ್ಲಿ ಇನ್‌ಶ್ಯೂರೆನ್ಸ್ ಇಲಾಖೆಯಿಂದ ಔಷದಿಗಳನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಅಮೇರಿಕಾದಲ್ಲಿ ಯಾವ ರೀತಿ ಇದೆಯೋ ಅದೇ ರೀತಿ ಇಲ್ಲಿಯೂ ಕೂಡ ಹೆಲ್ತ್ ಇನ್‌ಶ್ಯೂರೆನ್ಸ್ ಸ್ಕೀಂ ಅನ್ನು ಕಂಪಲ್ಸರಿ ಮಾಡಿ (ಅದಕ್ಕೆ ಟ್ಯಾಕ್ಸ್ ಬೇಕಾದರೂ ಹಾಕಿ, ಕೊಡೋಣ) ನಿಮ್ಮ ಕಾಲದಲ್ಲಿ ಅದರೂ ಪ್ರತಿಯೊಬ್ಬ ಪ್ರಜೆಗೂ ಉಚಿತವಾಗಿ ಔಷದಿ ದೊರೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪ್ರತಿಯೊಬ್ಬ ಪ್ರಜೆಗೂ ಮೆಡಿಕಲ್ ಚಕ್‌ಅಪ್ ಅನ್ನು ಕಡ್ಡಾಯವಾಗಿ ಮಾಡುವುದಾದರೆ ಆ ಒಂದು ಹೊಣೆಗಾರಿಕೆಯನ್ನು ಯಾರಿಗೆ ವಹಿಸುತ್ತೀರಿ ಎಂದು ಕೇಳುತ್ತೇನೆ. ಡಾಕ್ಟರುಗಳಿಗೆ ಷಾಪ್‌ಗಳನ್ನು ತೆಗೆಯುವುದಕ್ಕೆ, ನರ್ಸಿಂಗ್ ಹೋಂಗಳನ್ನು ತೆರೆಯುವುದಕ್ಕೆ ಲೈಸೆನ್ಸ್ ಕೊಡುವ ಸಂದರ್ಭದಲ್ಲಿ ನಿಮ್ಮ ನಿಮ್ಮ ಏರಿಯಾದಲ್ಲಿ ಇಂತಿಷ್ಟು ಜನಗಳಿಗೆ ಮೆಡಿಕಲ್ ಚಕ್ ಅಪ್ ಮಾಡಬೇಕೆಂದು ಕಡ್ಡಾಯ ವಿಧಿಸಿ, ಅಷ್ಟನ್ನು ಮಾಡದಿದ್ದ ಪಕ್ಷದಲ್ಲಿ ಲೈಸನ್ಸ್ ಕ್ಯಾನ್ಸಲ್ ಮಾಡುತ್ತೇವೆಂದು ನಿಯಮ ಹಾಕಬೇಕು ಆಗ ಪ್ರಜೆಗಳಿಗೆ ಸರಿಯಾಗಿ ಚಕ್ ಅಪ್ ಆಗುತ್ತದೆ. ಮತ್ತು ಡಾಕ್ಟರುಗಳು ಪ್ರಜೆಗಳೊಡನೆ ಸೇರಿ ಅವರ ಹಿತರಕ್ಷಣೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದಾದ್ದರಿಂದ ಈ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಜೊತೆಗೆ ತಾವು ಫ್ಯಾಮಿಲಿ ವೆಲ್‌ಫೇರ್ ಮಿನಿಸ್ಟರ್ ಕೂಡ ಆಗಿದ್ದೀರಿ. ಈಗ ಏನಾಗಿದೆ ಎಂದರೆ, ಫ್ಯಾಮಿಲಿ ಹೋಗಿ ವೆಲ್‌ಫೇರ್ ಮಾತ್ರ ಉಳಿದಿದೆ. ನರ್ಸಿಂಗ್ ಹೋಂಗಳಿಗೆ ಲೈಸೆನ್ಸ್ ಕೊಡತಕ್ಕ ಸಂದರ್ಭದಲ್ಲಿ ಪ್ರತಿಯೊಂದು ನರ್ಸಿಂಗ್ ಹೋಂನಲ್ಲೂ ಕೂಡ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಅಡ್ವೈಸ್ ಮಾಡುವುದಕ್ಕೆ ಪ್ರತ್ಯೇಕ ವಿಭಾಗವನ್ನು ತೆರೆಯುವಂತೆಯೂ ಮತ್ತು ಆಪರೇಷನ್ ಕೇಸಸ್ ಏನಾದರೂ ಬಂದರೆ ಉಚಿತವಾಗಿ ಮಾಡುವಂತೆ ಕಡ್ಡಾಯ ಹಾಕಿದರೆ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಕೇರ್ ತೆಗೆದುಕೊಂಡು ಜನನನಿಯಂತ್ರಣ ಮಾಡುವುದಕ್ಕೆ ಅನುಕೂಲವಾಗುತ್ತದಾದ್ದರಿಂದ ಈ ಬಗ್ಗೆ ಸೂಕ್ತ ಗಮನ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನೊಂದು ಅತಿ ಮುಖ್ಯವಾದ ವಿಚಾರವೇನೆಂದರೆ, ಬೆಂಗಳೂರಿನಲ್ಲಿರತಕ್ಕ ಅನೇಕ ಕ್ಲಿನಿಕ್‌ಗಳಲ್ಲಿ ಡಿಗ್ರಿ ಇಲ್ಲದೆ ಇರುವ ಕಾಂಪೌಂಡರ್‌ಗಳು ಔಷದಿ ಕೊಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಒಂದು ವಿಜಿಲೆನ್ಸ್ ಅನ್ನು ಏರ್ಪಡಿಸಿ ಸರ್ವೆ ಮಾಡಿ ಯಾವ ಯಾವ ಷಾಪ್‌ಗಳು ಎಲ್ಲೆಲ್ಲಿವೆ ಮತ್ತು ಅವುಗಳಲ್ಲಿ ಇದ್ದುಕೊಂಡು ಔಷಧಿ ಕೊಡತಕ್ಕವರೆಲ್ಲರೂ ನಿಜವಾಗಿಯೂ ಕ್ವಾಲಿಫೈ ಆಗಿದ್ದಾರೆಯೆ ಎಂಬುದನ್ನು ಪತ್ತೆ ಹಚ್ಚಿ ಕಾಪೌಂಡರ್‌ಗಳು ಔಷಧಿ ಕೊಡತಕ್ಕ ಷಾಪುಗಳನ್ನು ಮೊದಲು ಮುಚ್ಚಿಸಬೇಕೆಂದು ಹೇಳುತ್ತೇನೆ ; ಇಲ್ಲದಿದ್ದರೆ ಅವರು ಕೊಡತಕ್ಕ ಔಷಧಿಗಳನ್ನು ಕುಡಿಯುವುದಕ್ಕಾಗುವುದಿಲ್ಲ ಮತ್ತು ಜನ ಸಾಯುತ್ತಾರಾದ್ದರಿಂದ ಈ ಒಂದು ಕಾರ್ಯವನ್ನು ಕೂಡಲೇ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಪ್ರಿವೆಂಟೀವ್ ಮೆಡಿಸಿನ್ಸ್ ಬಗ್ಗೆ ಮೆಡಿಕಲ್ ಕಾಲೇಜಿನಲ್ಲಿ ಒಂದೇ ಒಂದು ಸಬ್‌ಜಕ್ಟ್ ಇಟ್ಟಿದ್ದೀರಿ. 'Prevention is better than cure. ಎಂಬಂತೆ ಪ್ರಿವೆಂಟೀವ್ ಮೆಡಿಸಿನ್ಸ್ ಅನ್ನು ಕಾಯಿಲೆ ಬರುವುದಕ್ಕೆ ಮುನ್ನ ಕೊಡತಕ್ಕದ್ದು ಒಳ್ಳೆಯದು. ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಿವೆಂಟೀವ್ ಮೆಡಿಸಿನ್ಸ್ ಬಗ್ಗೆ ಕಡ್ಡಾಯವಾಗಿ ಶಿಕ್ಷಣ ಕೊಡುವ ಬಗ್ಗೆ ಗಮನ ಹರಿಸಬೇಕು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಯೋಚನೆ ಮಾಡಬೇಕು. ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಅವರವರ ಆರೋಗ್ಯದ ಬಗ್ಗೆ ಗಮನ ಕೊಡುವಂತೆ ಮಾಡಲು ರೇಡಿಯೋ ಮತ್ತು ಚಲನಚಿತ್ರಗಳ ಮುಖಾಂತರ, ನಿಮ್ಮ ನಿಮ್ಮ ಧ್ಯೇಯಗಳನ್ನು ಅರ್ಥಮಾಡಿಕೊಳ್ಳಿ, ಕಾಯಿಲೆ ಬರುವುದಕ್ಕೆ ಕಾರಣಗಳೇನು ಎಂದು ತಿಳಿದುಕೊಳ್ಳಿ ಮತ್ತು ಕಾಯಿಲೆ ಬರುವ ಮುನ್ನವೇ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಿ, ಎಂದು ಪ್ರಸಾರ ಮಾಡಿದರೆ ಸಾಕಷ್ಟು ಕಾಯಿಲೆಗಳನ್ನು ತಡೆಗಟ್ಟಬಹುದು. ಆದ್ದರಿಂದ ಈ ಬಗ್ಗೆ ಸೂಕ್ತ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪುರಸಭೆಗಳಲ್ಲಿ ಮತ್ತು ನಗರ ಸಭೆಗಳಲ್ಲಿ ಆರೋಗ್ಯ ಇಲಾಖೆ ಇದೆ ; ಅದು ಅವರ ಕೈಕೆಳಗೆ ಸರಿಯಾಗಿ ಕೆಲಸ ಮಾಡದಿದ್ದರೆ ನಗರದಲ್ಲಿ ಸೊಳ್ಳೆ, ಕೊಳಚೆ ಪ್ರದೇಶಗಳು, ಡ್ರೈನೇಜ್ ಸಿಸ್ಟಂ ಇವು ಯಾವೂ ಸರಿ ಹೋಗದೆ ಕಾಯಿಲೆಗಳು ಜಾಸ್ತಿಯಾಗುತ್ತವೆ. ಆದಕಾರಣ ಆ ಒಂದು ಇಲಾಖೆ ಏನಿದೆ ಅದು ನಿಮ

ಕೈಕೆಳಗೆ ಬರಬೇಕೆಂದು ಹೇಳಬಯಸುತ್ತೇನೆ. ನಿಮ್ಮ ಕೈಳಗೇ ಆ ಒಂದು ಇಲಾಖೆಯೂ ಬಂದು ಸಮಗ್ರವಾಗಿ ಮಾಡಿಕೊಂಡು ಹೋಗುವುದರಿಂದ ಬರತಕ್ಕ ಕಾಯಿಲೆಗಳನ್ನು ತಡೆಗಟ್ಟುವುದಕ್ಕೆ ಅನುಕೂಲವಾಗುತ್ತದ್ದರಿಂದ ಆ ಒಂದು ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆಪರೇಷನ್‌ಗಳನ್ನು ಏನೋ ಡಾಕ್ಟರುಗಳು ಮಾಡಿ ಹೋಗುತ್ತಾರೆ. ನಂತರ ಕೇರ್ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯವಾದುದು. ಆಪರೇಷನ್ ಮಾಡಿ ೩-೪ ದಿವಸಗಳಾದರೂ ಡಾಕ್ಟರುಗಳು ಬಂದು ನೋಡುವುದಿಲ್ಲ; ಆಗ ನೋಡಿಕೊಳ್ಳತಕ್ಕವರು ನರ್ಸ್‌ಗಳು. ರೋಗಿ ಉಳಿಯಬೇಕೆಂದರೆ ಆಪರೇಷನ್ ಆದಬಳಿಕ ತೆಗೆದುಕೊಳ್ಳತಕ್ಕ ಕೇರ್ ಬಹಳ ಮುಖ್ಯ. ಇದನ್ನು ನೋಡಿಕೊಳ್ಳತಕ್ಕ ನರ್ಸ್‌ಗಳು ಏನಿದ್ದಾರೆ, ಅವರ ಸ್ಟೇಟಸ್ ಏನಿದೆ ಅದನ್ನು ಹೆಚ್ಚು ಮಾಡಿ, ದಾದಿಯರೂ ಕೂಡ ಡಾಕ್ಟರ್‌ಗಳು ಇದ್ದ ಹಾಗೆ ಎಂದು ಮನವರಿಕೆ ಮಾಡಿಕೊಟ್ಟರೆ, ಇವರ ಸ್ಟೇಟಸ್ಸನ್ನು ಜಾಸ್ತಿ ಮಾಡಿಕೊಟ್ಟಂತಾಗುತ್ತದೆ ಮತ್ತು ಅವರ ಒಂದು ಒಳ್ಳೆಯ ಉಪಚಾರದಿಂದ ರೋಗಿಯ ಕಾಯಿಲೆ ಮುಕ್ಕಾಲು ಪಾಲು ಗುಣವಾಗುತ್ತದೆ. ಅದ್ದರಿಂದ ಆಪರೇಷನ್ ಆದಬಳಿಕ ತೆಗೆದುಕೊಳ್ಳತಕ್ಕ ಕೇರ್ ಬಗ್ಗೆ ಹೆಚ್ಚಿನ ಗಮನ ಕೊಡುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ಸಲಹೆ ಮಾಡಬಯಸುತ್ತೇನೆ. ಇನ್ನು ಗ್ಯಾಸ್ಟ್ರಾಟಮಿ ಅಪರೇಟಸ್ ಇಡೀ ಬೆಂಗಳೂರಿನಲ್ಲಿ ಎಲ್ಲಿಯೋ ಒಂದು ಕಡೆ ಇದೆ. ಇಲ್ಲಿರತಕ್ಕ ವೈದ್ಯರುಗಳು ಗ್ಯಾಸ್ಟ್ರಾ ಅಲ್ಸರ್ ಕಾಯಿಲೆಯಾದರೆ ಮದ್ರಾಸಿಗೆ ಹೋಗಿ ಅನ್ನುತ್ತಾರೆ ಆ ಒಂದು ಅಪರೇಟಸ್‌ಗೆ ಬೆಲೆ ಕೂಡ ಜಾಸ್ತಿ ಇಲ್ಲ. ಆದಕಾರಣ ಅದನ್ನು ಇಡೀ ಬೆಂಗಳೂರಿನಲ್ಲಿರತಕ್ಕ ಎಲ್ಲ ಆಸ್ಪತ್ರೆಗಳಲ್ಲಿಯೂ ಇಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಇದು ಮಕ್ಕಳ ವರ್ಷವಾದ್ದರಿಂದ, ಮಕ್ಕಳ ಸಲುವಾಗಿ ಏನಾದರೂ ಮಾಡಿ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ತಮಗೂ ಕೂಡ ಮಕ್ಕಳಿರುವುದರಿಂದ ತಾವು ಇದರ ಬಗ್ಗೆ ಕಳಕಳಿ ವಹಿಸತಕ್ಕದ್ದು ಅತಿ ಅವಶ್ಯಕವಾಗಿದೆ. ಈ ಮಕ್ಕಳ ವರ್ಷದ ಸಂದರ್ಭದಲ್ಲಿ, ಮಕ್ಕಳಿಗೆ ಹೆಚ್ಚಾಗಿ ಬರತಕ್ಕ ಕಾಯಿಲೆಗಳು ಯಾವುವು ಮತ್ತು ಅವಕ್ಕೆ ಮೂಲಭೂತವಾದ ಕಾರಣಗಳೇನು ಎಂಬುದನ್ನು ಪತ್ತೆಹಚ್ಚುವುದಕ್ಕೆ ಒಂದು ರೀಸರ್ಚ್ ಸೆಂಟರನ್ನು ತೆರೆದರೆ ಇಡೀ ಮಕ್ಕಳಿಗೆ ಬರತಕ್ಕ ಕಾಯಿಲೆಗಳಿಗೆ ಮೂಲಭೂತವಾದ ಕಾರಣಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದ್ದರಿಂದ ಈ ಒಂದು ಕಾರ್ಯವನ್ನು ಮಾಡಲೇಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇನ್ನು ಮೂಳೆ ಮುರಿದಾಗ ಅದನ್ನು ಗಿಡಮೂಲಿಕೆಗಳ ಔಷಧಿಯಿಂದ ಗುಣಪಡಿಸಿಕೊಳ್ಳುವ ಸಲುವಾಗಿ ಜನರು ಪುತ್ತೂರಿಗೆ ಹೋಗುತ್ತಾರೆ. ಆದರೆ ಆ ಗಿಡಮೂಲಿಕೆಗಳಲ್ಲಿ ಏನು ಒಂದು ಔಷಧಿ ಇದೆ ಅದನ್ನು ನಿಮ್ಮ ಅರ್ಥೋಪೆಡಿಕ್ಸ್‌ನವರು ಪತ್ತೆಹಚ್ಚಿ ಇಂಜಕ್ಷನ್ ಮೂಲಕ ಏಕೆ ಕೊಡತಕ್ಕ ವ್ಯವಸ್ಥೆ ಮಾಡಬಾರದು ? ಎಲ್ಲ ಜನರನ್ನು ಪುತ್ತೂರಿಗೆ ಏಕೆ ಕಳುಹಿಸಬೇಕು ? ಅದ್ದರಿಂದ ಆ ಗಿಡಮೂಲಿಕೆಗಳನ್ನು ಪತ್ತೆಹಚ್ಚಿ ಅದರಲ್ಲಿ ಏನೇನು ಕಂಟೆಂಟ್ಸ್ ಇದೆ ಎಂಬುದನ್ನು ಪರೀಕ್ಷಿಸಿ ನೋಡಿ, ಅಲ್ಲಿಗೆ ಹೋಗುವುದಕ್ಕೆ ಬದಲು ಇಲ್ಲಿಯೇ ಜನಸಾಮಾನ್ಯರಿಗೆ ಅದರ ಒಂದು ಅನುಕೂಲವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೇಲಾಗಿ, ವಾಣಿವಿಲಾಸ್ ಆಸ್ಪತ್ರೆಯಲ್ಲಿ ಹೊರ ರೋಗಿಗಳನ್ನು ಪರೀಕ್ಷಿಸಲು ಪುರುಷ ವೈದ್ಯರುಗಳನ್ನು ಏಕೆ ಹಾಕುತ್ತೀರಿ ? ನಮ್ಮ ಕ್ಷೇತ್ರದಲ್ಲಿ ಇಡೀ ಮಹಿಳೆಯರೆಲ್ಲರೂ ಘೋಷದಲ್ಲಿರುತ್ತಾರೆ. ಅವರು ಆಸ್ಪತ್ರೆಗೆ ಹೋಗಿದ್ದುವು. ಅಲ್ಲಿ ಗಂಡಸರು ಪರೀಕ್ಷೆಗೆ ಬರುತ್ತಾರೆಂದು ತಿಳಿದು ವಾಪಸ್ಸು ಬಂದೆವು ಎಂದು ಹೇಳುತ್ತಾರೆ. ಏಕೆ ನಿಮ್ಮಲ್ಲಿ ಮಹಿಳಾ ವೈದ್ಯರು ಇಲ್ಲವೇ ? ಇಲ್ಲದಿದ್ದರೆ, ಮೆಡಿಕಲ್ ಕೌನ್ಸಿಲ್‌ಗೆ ರೆಕಮಂಡ್ ಮಾಡಿ ಮಹಿಳಾ ವೈದ್ಯರುಗಳನ್ನು ನೇಮಿಸಿಕೊಂಡು ವಾಣಿವಿಲಾಸ್ ಮತ್ತು ಇನ್ನೂ ಮುಂತಾದ ಹೆಂಗಸರ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರನ್ನೇ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದ್ದರು)

ಇನ್ನು ಡೆಂಟಲ್ ಡಾಕ್ಟರ್ಸ್ ಬಗ್ಗೆ ಹೇಳುವುದಾದರೆ, ಅವರಿಗೆ, ಹಲ್ಲು ಕೀಳುವುದಕ್ಕೂ ದುಡ್ಡು ಕೊಡಬೇಕು ಹಲ್ಲು ಕಟ್ಟುವುದಕ್ಕೂ ದುಡ್ಡು ಕೊಡಬೇಕು : ರಿಪೇರಿ ಮಾಡುವುದಕ್ಕೂ ದುಡ್ಡು ಕೊಡಬೇಕು. ಡೆಂಟಲ್ ಮೆಟೀರಿಯಲ್ಸ್ ಏನಿವೆ ಅವನ್ನು ನಮ್ಮ ಕರ್ನಾಟಕದಲ್ಲೇ ತಯಾರಿಸುವಂತಹ ಒಂದು ಕಾರ್ಖಾನೆಯನ್ನು ಮಾಡಿದರೆ ಹೊರಗಿನಿಂದ ತರಿಸಿಕೊಳ್ಳತಕ್ಕ ಸಂದರ್ಭ ಹೋಗುತ್ತದೆ ; ಮತ್ತು ಆಗ ಉಚಿತವಾಗಿ ಹಲ್ಲುಗಳನ್ನು ಕೀಳತಕ್ಕ ಸಂದರ್ಭವೂ ಬರಬಹುದು. ಅದ್ದರಿಂದ, ಅಂಥ ಒಂದು ಕಾರ್ಖಾನೆಯನ್ನು ಸ್ಥಾಪಿಸಿ ಇದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ.

೫-೩೦ ಪಿ.ಎಂ.

ಮತ್ತೊಂದು ವಿಚಾರವೇನೆಂದರೆ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕಂಥ ಡಾಕ್ಟರುಗಳಿಗೆ ಡೆತ್ ಸರ್ಟಿಫಿಕೇಟ್ ಕೊಡುವುದಕ್ಕೆ ಬರುವುದಿಲ್ಲ; ಅವರು ಸರ್ಟಿಫಿಕೇಟ್ ಕೊಟ್ಟರೂ ಕೂಡ ಕೋರ್ಟಿನಲ್ಲಿ ಅವರು ಅದಕ್ಕೆ ಸರಿಯಾದ ಎವಿಡೆನ್ಸ್ ಕೊಡುವುದಕ್ಕೆ ಬರುವುದಿಲ್ಲ. ಇದರಿಂದ ಈಗ ಏನಾಗುತ್ತಿದೆ ಎಂದರೆ ನಿಜವಾಗಿಯೂ ಮರ್ಡರ್ ಮಾಡಿರತಕ್ಕಂಥವನು ತಪ್ಪಿಸಿಕೊಂಡು ಹೋಗುತ್ತಿದ್ದಾನೆ. ಇದಕ್ಕೆ ಕಾರಣ ನಿಮ್ಮ ಡಾಕ್ಟರುಗಳು ಸರಿಯಾಗಿ ಪೋಸ್ಟ್‌ಮಾರ್ಟಮ್ ಮಾಡದೆ ಇರುವುದರಿಂದ ಹಾಗೂ ಸರಿಯಾದ ಸರ್ಟಿಫಿಕೇಟ್ ಕೊಡದೇ ಇರುವುದರಿಂದ, ಈ ರೀತಿ ಆಗುತ್ತಿದೆ. ಲಾಯರ್‌ಗಳೂ ಸಹ ಕೋರ್ಟಿನಲ್ಲಿ ಸರಿಯಾಗಿ ವಾದ ಮಾಡುತ್ತಾ ಇಲ್ಲ. ಪರಿಸ್ಥಿತಿ ಹೀಗಿರುವುದರಿಂದ ಮೆಡಿಕಲ್ ಕಾಲೇಜುಗಳಲ್ಲಿ ಡಾಕ್ಟರುಗಳಿಗೆ ಜ್ಯುರಿಸ್‌ಪ್ರುಡೆನ್ಸ್ ಅನ್ನು ಒಂದು ಸಬ್ಜೆಕ್ಟ್ ಆಗಿ ಇಟ್ಟು ಒಂದು ಕೋರ್ಸನ್ನು ಪ್ರಾರಂಭ ಮಾಡಿದರೆ ಇದರಿಂದ ಡಾಕ್ಟರುಗಳಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ತಾವು ಗಮನ ಕೊಡಬೇಕು. ಇನ್ನೊಂದು ವಿಚಾರವೇನೆಂದರೆ ನಿಮ್ಮ ಡಾಕ್ಟರುಗಳು ಕೋರ್ಟಿಗೆ ಬಂದು ಹೆಣ್ಣು ಮಕ್ಕಳ ಬಗ್ಗೆ ಇಂಪೋಟೆಂಟ್ ಸರ್ಟಿಫಿಕೇಟ್ ಅನ್ನು ಕೊಟ್ಟಿದ್ದಾರೆ. ಡಾಕ್ಟರುಗಳು ಹೆಣ್ಣುಮಕ್ಕಳಿಗೆ ಇಂಪೋಟೆಂಟ್ ಸರ್ಟಿಫಿಕೇಟ್ ಕೊಡುವುದನ್ನು ನಾನು ಇದುವರೆಗೂ ಕೇಳಿಲ್ಲ. ಡಾಕ್ಟರು ಎಷ್ಟೋ ಹೆಣ್ಣುಮಕ್ಕಳಿಗೆ ಸರ್ಟಿಫಿಕೇಟ್ ಕೊಟ್ಟು ಇಂಪೋಟೆಂಟ್ ಆಗಿದ್ದಾರೆ ಎಂದು ಹೇಳಿದ್ದಾರೆ. ಇಂತಹ ಡಾಕ್ಟರುಗಳನ್ನು ತಮ್ಮ ಮೆಡಿಕಲ್ ಇಲಾಖೆಯಲ್ಲಿ ಇಟ್ಟುಕೊಂಡರೆ ಇದರಿಂದ ಹೆಣ್ಣುಮಕ್ಕಳಿಗೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಇದನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಡಾಕ್ಟರುಗಳು ಟೆಂಡರ್‌ನೆಸ್ ಸರ್ಟಿಫಿಕೇಟ್ ಅನೇಕರಿಗೆ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಒಬ್ಬ ಡಾಕ್ಟರನ್ನು ಟೆಂಡರ್‌ನೆಸ್ ಫೈನ್ ಇದೆಯೇ ಎಂದು ಕೇಳಿದಾಗ ಅವರು ಇಲ್ಲ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ ಟೆಂಡರ್‌ನೆಸ್ ಫೈನ್ ಇಲ್ಲ ಎಂದಮೇಲೆ ಈ ಬಗ್ಗೆ ಸರ್ಟಿಫಿಕೇಟ್ ಹೇಗೆ ಕೊಟ್ಟಿರಿ, ಎಂದು; ಅದಕ್ಕೆ ಅವರಿಂದ ಉತ್ತರವಿಲ್ಲ. ಕೋರ್ಟಿನಲ್ಲಿ ಕೆಸ್‌ನಲ್ಲಿ ನಾನು ಗೆದ್ದು ಬಂದಿದ್ದೇನೆ. ಹೀಗೆ ಟೆಂಡರ್‌ನೆಸ್ ಫೈನ್ ಬಗ್ಗೆ ಅನೇಕ ಡಾಕ್ಟರುಗಳಿಗೆ ಗೊತ್ತಿರುವುದಿಲ್ಲ, ಸುಮ್ಮನೆ ಸರ್ಟಿಫಿಕೇಟ್‌ಗಳನ್ನು ಕೊಟ್ಟುಬಿಡುತ್ತಾರೆ. ಇದನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಸದಸ್ಯರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಎಂ. ಸದಾಫ್ (ಶಿಗ್ಗಾವ್).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಆರೋಗ್ಯಮಂತ್ರಿಯವರು ಇಲ್ಲಿ ತಂದಿರತಕ್ಕಂಥ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆಂದಿದ್ದೇನೆ. ಆದರೆ ಅದಕ್ಕೆಲ್ಲಾ ಅಷ್ಟೊಂದು ಸಮಯವನ್ನು ತಾವು ಕೊಡುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೂ ಕೂಡ ಕರ್ನಾಟಕ ಮೆಡಿಕಲ್ ಕಾಲೇಜಿನ ಸ್ಟಾಫ್ ಬಗ್ಗೆ ಹಾಗೂ ಅಲ್ಲಿಯ ವಿದ್ಯಮಾನಗಳ ಬಗ್ಗೆ ಇರತಕ್ಕಂಥ ಕೆಲವು ವಿಚಾರಗಳನ್ನು ಮಾನ್ಯ ಆರೋಗ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಇದು ಹೊಸ ವಿಚಾರವೇನಲ್ಲ, ಹೋದ ವರ್ಷ ಕೂಡ ಇದನ್ನೆಲ್ಲಾ ಅವರ ಗಮನಕ್ಕೆ ನಾನು ತಂದಿದ್ದೇನೆ. ಅಲ್ಲಿಯ ಸ್ಟಾಫ್ ಬಗ್ಗೆ ಮತ್ತು ಪೋಸ್ಟಿಂಗ್ ಬಗ್ಗೆ ಅನೇಕ ಸಲ ನನಗೆ ಅಲ್ಲಿಂದ ದೂರುಗಳು ಬಂದಿದ್ದು, ಅದನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದರೂ ಅದಕ್ಕೆ ಅವರು ಹೆಚ್ಚು ಲಕ್ಷ್ಯ ಕೊಡದೇ ಇರುವುದನ್ನು ನೋಡಿದರೆ ಬಹಳ ವಿಷಾದಪಡಬೇಕಾಗಿದೆ. ೧೯೭೬ನೇ ಇಸವಿಯಿಂದ ಅಲ್ಲಿ ಪ್ರಿನ್ಸಿಪಾಲ್ ಪೋಸ್ಟ್ ಖಾಲಿ ಇದ್ದರೂ ಕೂಡ ಅದನ್ನು ಭರ್ತಿ ಮಾಡಿಲ್ಲ

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಈಗಾಗಲೇ ೬ ಗಂಟೆಯಾಗುತ್ತಾಬಂದಿದೆ. ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ ನಾಳೆ ದಿವಸ ಇದೇ ಡಿಮ್ಯಾಂಡ್ ಬಗ್ಗೆ ಚರ್ಚೆಯನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ಕಡೆಯ ಮಾನ್ಯ ಸದಸ್ಯರು ಮತ್ತು ಈ ಕಡೆಯ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕಾಗಿ ಹೆಸರುಗಳನ್ನು ಕೊಟ್ಟಿದ್ದಾರೆ; ಇನ್ನೂ ಮಾತನಾಡುವವರು ಇದ್ದಾರೆ. ೬ ಗಂಟೆಗೇ ಚರ್ಚೆಯನ್ನು ಮುಗಿಸಬೇಕೆಂದು ತಾವು ಹೇಳುತ್ತೀರಿ. ಇದು ಹೇಗಾಗುತ್ತದೆ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ೬.೩೦ ಗಂಟೆಗೆ ನಮ್ಮ ಪಾರ್ಟಿ ಮೀಟಿಂಗ್ ಬೇರೆ ಇದೆ. ಆದ್ದರಿಂದ ಸಾಧ್ಯವಾದಷ್ಟು ಬೇಗ ಮುಗಿಸುವುದು ಒಳ್ಳೆಯದು.

ಅಧ್ಯಕ್ಷರು.—ಹಾಗಾದರೆ ನಿಮ್ಮ ಕಡೆಯವರು ಭಾಷಣ ಮಾಡುವುದನ್ನು ನಿಲ್ಲಿಸಿಬಿಡಲಿ ; ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ ಬೇಗ ಮುಗಿಸಿಬಿಡೋಣ.

SRI C.M. ARMUGHAM.– We may continue the general discussion till 6.00 p.m., and let the Hon' ble Minister reply tomorrow.

ಅಧ್ಯಕ್ಷರು.——ಮಾನ್ಯ ಸದಸ್ಯರು ಭಾಷಣ ಮುಗಿಸಲಿ, ನೋಡೋಣ.

ಶ್ರೀ ಎಂ. ಎಂ. ನದಾಫ್.—ಸ್ವಾಮಿ, ಇವತ್ತು ಕೆ. ಎಂ. ಸಿ. ಯಲ್ಲಿ ಪ್ರೊಫೆಸರ್‌ಗಳು ಇಲ್ಲದೇ ಇರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಒಂದು ಡಿಪಾರ್ಟ್‌ಮೆಂಟ್‌ನಲ್ಲೂ ಸಹ ಪ್ರೊಫೆಸರ್‌ಗಳನ್ನು ನೇಮಿಸಿಲ್ಲ. ೨ ವರ್ಷಗಳಿಂದ ಈ ಪೋಸ್ಟ್‌ಗಳು ಖಾಲಿ ಇವೆ. ಉದಾಹರಣೆಗೆ ಪ್ರೊಫೆಸರ್ ಆಫ್ ಕಾರ್ಡಿಯಾಲಜಿ, ಪ್ರೊಫೆಸರ್ ಆಫ್ ಟ್ಯೂಬರ್‌ಕ್ಯುಲಸಿಸ್, ಪ್ರೊಫೆಸರ್ ಆಫ್ ನ್ಯೂರಾಲಜಿ, ನ್ಯೂರೋ ಸರ್ಜನ್—ಈ ಪೋಸ್ಟ್‌ಗಳನ್ನು ಅಲ್ಲಿ ತುಂಬಿಲ್ಲ. ಒಂದೆರಡು ವರ್ಷದಿಂದ ಖಾಲಿ ಇವೆ. ಇದರಿಂದ ಟಿ. ಬಿ. ಡಿಪಾರ್ಟ್‌ಮೆಂಟನ್ನು ಮುಚ್ಚಬೇಕೆಂದು ಮಾಡಿದ್ದಾರೆ. ಇವತ್ತು ಅಲ್ಲಿ ೧೦೦೦ ಬೆಡ್‌ಗಳು ಇದ್ದುದನ್ನು ೭೫೦ ಬೆಡ್‌ಗಳಿಗೆ ಇಳಿಸಿದ್ದಾರೆ. ಈ ರೀತಿ ಕೆ.ಎಂ.ಸಿ. ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸಿದ್ದಾರೆ. ನಿಮ್ಮ ಡೈರೆಕ್ಟೋರೇಟ್‌ನವರು ಏತಕ್ಕೆ ಈ ರೀತಿ ಮಾಡುತ್ತಾರೆಂದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಪ್ಪ.—ಯಾವ ದಿನಾಂಕದಲ್ಲಿ ಈ ೧೦೦೦ ಬೆಡ್‌ಗಳನ್ನು ೭೫೦ಕ್ಕೆ ಇಳಿಸಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಎಂ. ನದಾಫ್.—ಈಗ ನನ್ನಲ್ಲಿ ಆ ಬಗ್ಗೆ ಮಾಹಿತಿ ಇಲ್ಲ, ಯಾವ ದಿನಾಂಕ ಎಂಬುದನ್ನು ನಾನು ತಮಗೆ ಕಳಿಸಿಕೊಡುತ್ತೇನೆ. ಸ್ವಾಮಿ, ಅಲ್ಲಿ ೭೫೦ಕ್ಕೆ ಬೆಡ್‌ಗಳ ಸಂಖ್ಯೆಯನ್ನು ಇಳಿಸಿರುವುದಲ್ಲದೇ ಟಿ. ಬಿ. ಡಿಪಾರ್ಟ್‌ಮೆಂಟ್‌ಗೆ ಕೇವಲ ೫೦ ಬೆಡ್‌ಗಳನ್ನು ಇಟ್ಟಿದ್ದಾರೆ. ಮತ್ತು ಅಲ್ಲಿ ಒಬ್ಬ ಪ್ರೊಫೆಸರ್ ಸಹ ಇಲ್ಲ ; ಅಸಿಸ್ಟೆಂಟ್ ಪ್ರೊಫೆಸರ್ ಇಲ್ಲ, ಹಾಗೂ ರಿಜಿಸ್ಟ್ರಾರ್ ಸಹ ಇಲ್ಲ. ೩ ಲಕ್ಷ ಜನಸಂಖ್ಯೆ ಇರತಕ್ಕಂಥ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲೂ ಈ ಕೆ.ಎಂ.ಸಿ. ಒಂದು ಕಾಮಧೇನು ಇದ್ದ ಹಾಗೆ ಇದೆ. ಇಂತಹ ಸಂದರ್ಭದಲ್ಲಿ ಟಿ. ಬಿ. ಡಿಪಾರ್ಟ್‌ಮೆಂಟ್‌ನಲ್ಲಿ ೫೦ ಬೆಡ್‌ಗಳೂ ಸಹ ಇಲ್ಲವೆಂದರೆ ಇದು ಬಹಳ ದುಃಖದ ಸಂಗತಿ ಎಂಬುದನ್ನು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಅಷ್ಟೇ ಅಲ್ಲ, ಅಲ್ಲಿ ಮೆಡಿಸನ್‌ಗಳು ಸರಿಯಾಗಿ ಇಲ್ಲ. ಅಲ್ಲಿ ೪ ಪ್ರೊಫೆಸರ್‌ಗಳ ಪೋಸ್ಟ್ ಖಾಲಿಯಿದ್ದರೂ ಈಗ ಕೇವಲ ಇಬ್ಬರು ಮಾತ್ರ ಕೆಲಸಮಾಡುತ್ತಿದ್ದಾರೆ. ಅಲ್ಲಿ ಅಸಿಸ್ಟೆಂಟ್ ಪ್ರೊಫೆಸರ್‌ಗಳ ೬ ಪೋಸ್ಟ್‌ಗಳು ಖಾಲಿ ಇದ್ದರೂ ಕೂಡ ಇವತ್ತು ಕೇವಲ ಇಬ್ಬರೂ ಕೆಲಸಮಾಡುತ್ತಿದ್ದಾರೆ. ಇನ್ನು ೪ ಪೋಸ್ಟ್‌ಗಳು ಖಾಲಿ ಇವೆ. ರಿಜಿಸ್ಟ್ರಾರ್ ಪೋಸ್ಟ್ ೯ ಇದ್ದರೂ ಕೂಡ ಇವತ್ತು ಕೇವಲ ೬ ಜನರು ಕೆಲಸಮಾಡುತ್ತಿದ್ದಾರೆ. ಅವರಲ್ಲಿ ಒಬ್ಬರಾದರೂ ಎಂ.ಡಿ. ಆದವರು ಇಲ್ಲ. ಹೀಗಾದರೆ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವುದಾದರೂ ಹೇಗೆ ? ರೋಗಿಗಳಿಗೆ ಟ್ರೀಟ್‌ಮೆಂಟ್ ಸಿಕ್ಕುವುದಾದರೂ ಹೇಗೆ ? ಈ ವಿಚಾರಗಳ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದಲ್ಲದೇ ಅಲ್ಲಿ ಒಬ್ಬ ಸೈಕ್ಯಾಟ್ರೀ ಪ್ರೊಫೆಸರ್ ಕೂಡ ಇಲ್ಲ: ಅವರನ್ನು ಸಹ ನೇಮಕ ಮಾಡಬೇಕು. ಇವತ್ತು ತಾವು ಒಂದು ಕೋಬಾಲ್ಟ್ ಪ್ಲಾಂಟನ್ನು ಕಟ್ಟಿಸುತ್ತಿದ್ದೀರಿ. ಅದು ಇನ್ನೂ ಕಂಪ್ಲೀಟ್ ಆಗಲಿಲ್ಲ. ಅದನ್ನು ಬೇಗ ಮುಗಿಸಿಕೊಡಬೇಕು. ಮತ್ತೊಂದು ವಿಚಾರವೇನೆಂದರೆ ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಡಯಾಲಿಸಿಸ್ ಸಿಸ್ಟಂನ್ನು ಇಂಟ್ರೊಡ್ಯೂಸ್ ಮಾಡಿರುವ ಹಾಗೆ ನಮ್ಮಲ್ಲಿ ಕೂಡ ಅದನ್ನು ಇಂಟ್ರೊಡ್ಯೂಸ್ ಮಾಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ನಮ್ಮಲ್ಲಿ ಸ್ಟಾಫ್ ಇಲ್ಲದಿದ್ದರೆ ಕೆಲವರನ್ನು ವೆಲ್ಲೂರಿಗೆ ಕಳಿಸಿ, ಟ್ರೈನಿಂಗ್ ಕೊಟ್ಟು, ಅದಕ್ಕೆ ಬೇಕಾಗುವಂಥ ಸ್ಟಾಫ್ ಸ್ಯಾಂಕ್ಷನ್ ಮಾಡಬೇಕು ಎಂದು ಹೇಳಬಯಸುತ್ತೇನೆ. ತಾವು ಟಿ. ಬಿ. ಡಿಪಾರ್ಟ್‌ಮೆಂಟಿಗೆ ಸುಮಾರು ೪೦೦ ಎಕರೆ ಎಂದು ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದೀರಿ. ನಮ್ಮ ಟಿ.ಬಿ.ಗೆ ಒಂದು ಸಣ್ಣ ಜಮೀನು ಕೂಡ ಇಲ್ಲ. ಇದಕ್ಕೆ ಜಮೀನು ಸ್ಯಾಂಕ್ಷನ್ ಮಾಡಬೇಕು; ಈ ಬಗ್ಗೆ ಅನೇಕ ವಿಚಾರಗಳನ್ನು ಮೇಲಿಂದ ಮೇಲೆ ನಾನು ತಮ್ಮ ಗಮನಕ್ಕೆ ತರುತ್ತಿದ್ದರೂ ಕೂಡ ತಮ್ಮ ಗಮನಿಸಿ ಆ ಕಡೆಗೆ ಗಮನ ಕೊಡದೆ ಇರುವುದನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತಿದೆ. ಇನ್ನು ಮುಂದೆಯಾದರೂ ತಾವು ಈ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುವ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟೇ ಅಲ್ಲ, ಇವತ್ತು

ನಮ್ಮ ಕೆ.ಎಂ.ಸಿ. ಹಾಸ್ಪಿಟಲ್‌ನಲ್ಲಿ ಡೆಂಟಲ್ ಸೆಕ್ಷನ್, ಟಿ. ಬಿ. ಸೆಕ್ಷನ್, ಐ ಸೆಕ್ಷನ್ ಇದೆ. ಬೆಂಗಳೂರು ನಲ್ಲಿಯೂ ಸಹ ಇವೆಲ್ಲಾ ಆಸ್ಪತ್ರೆಗಳೂ ಇವೆ. ಇಲ್ಲಿಯ ಆಸ್ಪತ್ರೆಗಳಿಗೆ ತಾವು ಕೊಡುತ್ತಿರುವ ಬಡ್ಜೆಟ್ ಪ್ರಾವಿಜನ್ ಅನ್ನು ಮತ್ತು ನಮ್ಮ ಕೆ. ಎಂ. ಸಿ. ಹಾಸ್ಪಿಟಲ್‌ಗೆ ಕೊಡುತ್ತಿರುವ ಬಜೆಟ್ ಪ್ರಾವಿಜನ್ ಅನ್ನು ನೋಡಿದರೆ ಇದರಲ್ಲಿ ಅಜಗಜಾಂತರ ವ್ಯತ್ಯಾಸ ಬರುತ್ತಿದೆ. ನಮ್ಮಲ್ಲಿ ಇದು ಕಡಿಮೆ ಇದೆ. ಇದನ್ನು ತಾವು ಸರಿಪಡಿಸಬೇಕು. ಇದಲ್ಲದೆ ಕೆ. ಎಂ. ಸಿ ಆಸ್ಪತ್ರೆಯ ಕಾಂಪೌಂಡ್‌ನಲ್ಲಿ ಸಾಕಷ್ಟು ವಿಸ್ತಾರ ವಾದ ಪ್ರದೇಶ ಇದ್ದರೂ ಕೂಡ ಅಲ್ಲಿ ಸಾಕಷ್ಟು ಜನರಿಗೆ ಸಾಕಷ್ಟು ಕ್ವಾರ್ಟರ್ಸ್ ಇರುವುದಿಲ್ಲ. ಈ ಕ್ವಾರ್ಟರ್ಸ್ ಕಟ್ಟಿಸಿಕೊಡುವುದಕ್ಕೆ ತಾವು ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಿಳಿಯ ಬಯಸುತ್ತೇನೆ. ಈ ಆಸ್ಪತ್ರೆಯಲ್ಲಿ ಸರ್ಜಿಕಲ್ ಇನ್‌ಸ್ಟ್ರುಮೆಂಟ್ಸ್ ಬಹಳ ಹಳೆಯದಾಗಿವೆ. ಅವನ್ನು ರೀಪ್ಲೇಸ್ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಅವನ್ನು ರೀಪ್ಲೇಸ್ ಮಾಡಿಕೊಡಬೇಕು. ಅಲ್ಲದೇ ನಮ್ಮ ಕೆ. ಎಂ. ಸಿ ದವಾಖಾನೆಯಲ್ಲಿ ನೀರು ಸರಬರಾಜು ಸರಿಯಾಗಿ ಇಲ್ಲದೇ ಇರುವ ಕಾರಣ ಆಪರೇಷನ್ ಗಳನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಈ ಬಗ್ಗೆ ತಾವು ಶೀಘ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತು ಅಲ್ಲಿ ೨೫ ಪರ್ಸೆಂಟ್‌ನಷ್ಟಾದರೂ ನರ್ಸಿಂಗ್ ಸ್ಟಾಫ್ ಇಲ್ಲ; ಇದರಿಂದ ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ನರ್ಸ್‌ಗಳ ಕೊರತೆ ಕಾಣುತ್ತಾ ಇದೆ. ಈಗ ಇರತಕ್ಕಂಥವರೇ ಡಬಲ್ ಡ್ಯೂಟಿ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಅನಾನುಕೂಲಗಳಾಗುತ್ತಿವೆ. ಆದ್ದರಿಂದ ನರ್ಸಿಂಗ್ ಸ್ಟಾಫ್ ಹೆಚ್ಚು ಮಾಡುವುದಕ್ಕೆ ತಾವು ಗಮನ ಕೊಡಬೇಕು ನನ್ನ ಮತದಾರ ಕ್ಷೇತ್ರದಲ್ಲಿ ತಾವು ಈಗಾಗಲೇ ಪಿ.ಎಚ್.ಸಿ ದವಾಖಾನೆಯನ್ನು ಕಟ್ಟಿಸಿಕೊಡಲು ಮಂಜೂರಾತಿ ಕೊಟ್ಟಿದ್ದೀರಿ. ಇದುವರೆಗೂ ಕಟ್ಟಡ ಕಟ್ಟಿಸತಕ್ಕಂಥ ಪ್ರಯತ್ನ ನಡೆದಿಲ್ಲ. ಇದನ್ನು ಆದಷ್ಟು ಬೇಗ ಕಟ್ಟಿಸಿಕೊಡಬೇಕು ಎಂದು ಹೇಳುತ್ತೇನೆ. ಅಲ್ಲದೇ ನನ್ನ ಮತದಾರ ಕ್ಷೇತ್ರವಾದ ಸಿದ್ಧಾಪುರ, ಕಲಿಮಾಳ ಮುಂತಾದ ಕಡೆಗಳಲ್ಲಿ ಜನರು ಮಲೇರಿಯಾ ಬೇನೆಯಿಂದ ಬಳಲುತ್ತಿದ್ದಾರೆ. ಅದನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಡಾಕ್ಟರುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವು ದಕ್ಕೆ ಇಷ್ಟಪಡುತ್ತೇನೆ. ಜನರಿಗೆ ವಿ.ಡಿ.ಪಿ ಎಲೆಕ್ಷನ್ ಮಾಡುವಾಗ ಡಾಕ್ಟರುಗಳು ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಬೇಕಾಗುತ್ತದೆ. ಇದನ್ನು ಕೊಡಲು ಡಾಕ್ಟರುಗಳು ಪ್ರತಿಯೊಬ್ಬರಿಗೂ ೪ ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ. ಈ ಬಗ್ಗೆ ತಮ್ಮ ಇಲಾಖೆಯ ಡಿಸ್ಟ್ರಿಕ್ ಹೆಲ್ತ್ ಆಫೀಸರನ್ನು ಕೇಳಿದಾಗ ಆ ರೀತಿ ವಸೂಲು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಆದ್ದರಿಂದ ಇದನ್ನು ಕೂಡಲೇ ತಪ್ಪಿಸ ಬೇಕು ಎಂದು ಹೇಳುತ್ತೇನೆ. ನಾವು ಈ ಬಗ್ಗೆ ರೆಪ್ರೆಸೆಂಟೇಷನ್‌ಗಳನ್ನು ಕೊಟ್ಟಿದ್ದೇವೆ. ಇವತ್ತಿನವರೆಗೆ ಅವು ಏನಾದವೋ ಗೊತ್ತಿಲ್ಲ. ಈ ವಿಚಾರದಲ್ಲಿ ತಾವು ಅವರು ಹಾಗೆ ಹಣವನ್ನು ತೆಗೆದುಕೊಳ್ಳದಂತೆ ಸೂಚನೆ ಕೊಡಬೇಕು ಇಲ್ಲದಿದ್ದರೆ ಅಂತಹ ಡಾಕ್ಟರುಗಳನ್ನು ತೆಗೆದು ಹಾಕಿ, ಒಳ್ಳೆಯ ಡಾಕ್ಟರುಗಳನ್ನು ನೇಮಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಕೆ.ಎಂ.ಸಿ. ಆಸ್ಪತ್ರೆ ಯಲ್ಲಿ ಡಿಪಾರ್ಟ್‌ಮೆಂಟ್ ಆಫ್ ರೇಡಿಯಾಲಜಿ ೨ ವರ್ಷಗಳಿಂದ ಕೆಲಸಮಾಡುತ್ತಿಲ್ಲ. ಈ ಬಗ್ಗೆ ನಾನು ಹೋದ ಸಲ ತಮಗೆ ತಿಳಿಸಿದ್ದರೂ ಕೂಡ ಇದುವರೆಗೂ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ಇದನ್ನು ತಾವು ತೀವ್ರವಾಗಿ ಗಮನಿಸಬೇಕು. ಇನ್ನು ನಮ್ಮಲ್ಲಿ ಔಷಧಿಗಳ ಕೊರತೆ ಇದೆ. ತಮ್ಮ ಮೆಡಿಕಲ್ ಡಿಪಾರ್ಟ್‌ಮೆಂಟ್‌ನವರು ಕೇಳಿದಂಥ ಔಷಧಿಗಳನ್ನು ಬಿಟ್ಟು ಬೇರೆ ಯಾವುದೋ ಔಷಧಿಗಳನ್ನು ಕಳಿಸಿರುತ್ತಾರೆ ; ಅದರಲ್ಲೂ ಕೇಳಿದಷ್ಟು ಔಷಧಿಗಳನ್ನು ಕಳಿಸಿರುವುದಿಲ್ಲ ; ಬಹಳ ಕಡಿಮೆ ಕಳಿಸಿರುತ್ತಾರೆ. ಕೊನೇ ವೇಳೆಯಲ್ಲಿ ಔಷಧಗಳು ಇಲ್ಲವೆಂದು ಹೇಳಿ, ಹೊರಗಡೆ ತೆಗೆದುಕೊಳ್ಳಿ ಎಂದು ಚೀಟಿ ಕಳಿಸುತ್ತಾರೆ. ಈ ಎಲ್ಲಾ ವಿಷಯಗಳ ಬಗ್ಗೆ ನಾನು ತಮ್ಮ ಗಮನ ಸೆಳೆದು, ಆದಷ್ಟು ಅವರು ಲೋಕಲ್ ಪರ್ಚೇಸ್ ಮಾಡಿಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕೆಂದು ಹೇಳಿ, ತಾವು ಸಹೃದಯದವರಿದ್ದೀರಿ, ತಮ್ಮ ಧುರೀಣತ್ವದಲ್ಲಿ ಈ ಎಲ್ಲಾ ನ್ಯೂನತೆಗಳನ್ನು ಹೋಗಲಾಡಿಸಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಾರ್ಷಿಕ ವರದಿಯ ೫೬ನೇ ಪುಟದಲ್ಲಿ ಕುದುರೇ ಮುಖ ಕಬ್ಬಿಣದ ಅದುರು ಕಾರ್ಖಾನೆಯ ಉಲ್ಲೇಖವಿದೆ. ಕುದುರೆಮುಖದಲ್ಲಿ ಕಬ್ಬಿಣದ ಅದುರನ್ನು ಪುಡಿ ಮಾಡಿ ಕೊಳವೆಗಳ ಮೂಲಕ ಅದನ್ನು ಮಂಗಳೂರಿನ ಬಂದರಿಗೆ ತರುವ ವ್ಯವಸ್ಥೆ ಮಾಡಲಾಗಿದೆ. ಹಾಗೆ ತರುವಾಗ ಬರುವ ನೀರನ್ನು ಮುದ್ರಕ್ಕೆ ಬಿಡುವುದರಿಂದುಂಟಾಗುವ ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಈ ಕುರಿತು

ನಾನು ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತನಾಡಿದ್ದೇನೆ. ಆ ನೀರು ಕುಡಿಯಲಿಕ್ಕೆ ಯೋಗ್ಯವಾದುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಒಂದು ವೇಳೆ ನೀರು ಕುಡಿಯಲಿಕ್ಕೆ ಉಪಯೋಗಿಸದಿದ್ದರೂ ಕೃಷಿಗಾದರೂ ಉಪಯೋಗಿಸಬಹುದೆನ್ನುವುದು ಅವರ ಅಭಿಪ್ರಾಯ. ಆದರೆ, ಇವೆರಡಕ್ಕೂ ಉಪಯೋಗಿಸದೆ ಆ ನೀರನ್ನು ಸಮುದ್ರಕ್ಕೆ ಬಿಡುವ ವ್ಯವಸ್ಥೆ ಇದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಆದುದರಿಂದ, ಉಪಯುಕ್ತ ನೀರನ್ನು ಸಮುದ್ರಕ್ಕೆ ಬಿಡದೆ, ಮಂಗಳೂರು ಅಥವಾ ಇನ್ನಾವುದೇ ನಗರಕ್ಕಾಗಲೀ ಜನರಿಗೆ ಕುಡಿಯಲಿಕ್ಕೆ ಒದಗಿಸಬೇಕು ಅಥವಾ ಕೃಷಿಗಾದರೂ ಉಪಯೋಗಿಸಬೇಕು. ಈ ಬಗ್ಗೆ ಮಾನ್ಯ ಸಚಿವರು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಕ್ಷಯ ರೋಗ ನಿವಾರಣೆ ಬಗ್ಗೆ ಸರ್ಕಾರದವರು ಸಾಕಷ್ಟು ನಿಗಾ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿರುವ ಬೀಡಿ ಕಟ್ಟುವ ಕಾರ್ಮಿಕರಿಗೆ ಕ್ಷಯ ರೋಗ ಬಹಳ ವೇಗವಾಗಿ ವಿಸ್ತರಿಸುತ್ತದೆ. ಅಲ್ಲಿನ ಕ್ಷಯ ರೋಗ ತಗಲಿರುವ ರೋಗಿಗಳು ಅವರಾಗಿಯೇ ಆಸ್ಪತ್ರೆಗೆ ಬರುವುದಿಲ್ಲವಾದ್ದರಿಂದ, ಅವರ ಮನೆಗಳಿಗೆ ಹೋಗಿ, ಕಡ್ಡಾಯವಾಗಿ ಚಿಕಿತ್ಸೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಇಲ್ಲದಿದ್ದರೆ, ಕ್ಷಯರೋಗ ಬಹಳ ವೇಗವಾಗಿ ಅಲ್ಲಿ ಹರಡುವ ಸಾಧ್ಯತೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬಹುತೇಕ ಬೀಡಿ ಕಟ್ಟುವ ಕಾರ್ಮಿಕರು ಕ್ಷಯರೋಗದಿಂದ ನರಳುತ್ತಿದ್ದಾರೆ. ಅವರಿಗೆ ಕಡ್ಡಾಯ ಚಿಕಿತ್ಸೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಬಹಳಷ್ಟು ಔಷಧಿಗಳು ಆಸ್ಪತ್ರೆಗಳಿಗೆ ಸರ್ಕಾರದಿಂದ ಸರಬರಾಜಾಗುತ್ತಿವೆ. ಆದರೆ, ಅವು ರೋಗಿಗಳಿಗೆ ಸಿಕ್ಕುತ್ತಿಲ್ಲ. ಇದಕ್ಕೆ ವೈದ್ಯ ಮತ್ತು ಕಾಂಪೌಂಡರ್ ಎಲ್ಲರೂ ಶಾಮೀಲಾಗಿರುತ್ತಾರೆ. ಕಾಂಪೌಂಡರ್ ಆಸ್ಪತ್ರೆಗೆ ಸರ್ಕಾರದಿಂದ ಸರಬರಾಜಾಗುವ ಔಷಧಿಯನ್ನು ತನ್ನ ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿ ಮಾರಾಟ ಮಾಡುವ ಪರಿಸ್ಥಿತಿಯೂ ಇದೆ. ಬೇಕಾದರೆ ಪ್ರಾಯೋಗಿಕವಾಗಿ ಕೆಲವು ಕಾಂಪೌಂಡರುಗಳ ಮನೆ ಮೇಲೆ ಧಾಳಿ ನಡೆಸಿದರೆ, ಅವರು ಎಷ್ಟು ಪ್ರಮಾಣದಲ್ಲಿ ಔಷಧಿಯನ್ನಿಟ್ಟುಕೊಂಡಿರುತ್ತಾರೆಂದು ಗೊತ್ತಾಗುತ್ತದೆ. ಆದುದರಿಂದ, ಇಂತಹ ಪ್ರಕರಣಗಳನ್ನು ನಿಲ್ಲಿಸಲು ಮಾನ್ಯ ಸಚಿವರು ಆದಷ್ಟು ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕ್ಷಯರೋಗದ ಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಸ್ಪತ್ರೆಯೊಂದಿದೆ. ಅಲ್ಲಿಗೆ ರೋಗಿಗಳು ಹೋದರೆ „ಪ್ರವೇಶವಿಲ್ಲ" ಎಂದು ಹೇಳುತ್ತಾರೆ. ರೋಗಿಗಳು ತುಂಬಿದ್ದಾರೆ, ಹಾಸಿಗೆ ಖಾಲಿ ಇಲ್ಲವೆಂದು ಹೇಳುತ್ತಾರೆ. ಆದರೆ, ಶಾಸಕರು ಬರೆದು ಕಳುಹಿಸಿದರೆ, ಕೂಡಲೇ ಅವನಿಗೆ ಹಾಸಿಗೆ ಕೊಡುತ್ತಾರೆ. ಹಾಸಿಗೆ ಇಲ್ಲದಿರುವಾಗ, ಶಾಸಕರು ಬರೆದು ಕಳುಹಿಸಿದ ಮೇಲೆ ಪುನಃ ಹಾಸಿಗೆ ಎಲ್ಲಿಂದ ಬರುತ್ತದೆ? ಆದುದರಿಂದ, ಆ ಆಸ್ಪತ್ರೆಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ಆದಷ್ಟು ಶೀಘ್ರ ವಿಚಾರಣೆ ನಡೆಸಿ, ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಆಹಾರ ಕಲಬೆರಕೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಅದನ್ನು ತಡೆಗಟ್ಟಲಿಕ್ಕೆ ಇಲಾಖೆ ತೀರ ಅಸಮರ್ಥವಾಗಿದೆ. ಇಲಾಖೆಯವರು ಕಲಬೆರಕೆ ಮಾಡುತ್ತಿರುವುದನ್ನು ಸರಿಯಾಗಿ ಪತ್ತೆ ಹಚ್ಚುತ್ತಿಲ್ಲ. ಆದುದರಿಂದ, ಕಲಬೆರಕೆಯನ್ನು ತಡೆಗಟ್ಟಲು ಮಾನ್ಯ ಸಚಿವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ಭಾಗಗಳಲ್ಲಿ ಅನೇಕ ಅಮೂಲ್ಯ ಮೂಲಿಕೆಗಳನ್ನು ಔಷಧಿಗಳನ್ನಾಗಿ ಉಪಯೋಗಿಸಲಾಗುತ್ತಿದೆ. ಅಲೋಪತಿಯಿಂದ ಗುಣ ಹೊಂದದ ಕಾಯಿಲೆಗಳು ಈ ಅಮೂಲ್ಯ ಮೂಲಿಕೆಗಳಿಂದ ಗುಣ ಹೊಂದುತ್ತವೆ. ಈ ಮೂಲಿಕೆಗಳನ್ನು ಕೆಲವರು ವೈಯಕ್ತಿಕವಾಗಿ ಇಟ್ಟುಕೊಂಡಿದ್ದಾರೆ, ಮತ್ತು ಅವರೊಡನೆ ಆ ಮೂಲಿಕೆಗಳೂ ಸಾಯುತ್ತಿವೆ. ಆದುದರಿಂದ, ಸರ್ಕಾರದವರು ಇಂತಹ ಮೂಲಿಕೆಗಳ ಬಗ್ಗೆ ಸಂಶೋಧನೆ ನಡೆಸಬೇಕು; ಮತ್ತು ಅವುಗಳನ್ನು ಆರೋಗ್ಯ ಬಂಡವಾಳವನ್ನಾಗಿ ಉಳಿಸಿಕೊಳ್ಳಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

†SRI ABDUL LATEEF (Kolar).—Mr. Speaker Sir, I support the demands of Minister for Health and wish to make a few suggestions. Regarding this X-ray machines, complaints are common. The department is having some hundred and odd machines. For this,

some permanent arrangement to repair or to replace those machines must be made. Because, in the modern diagnose system, these equipments are very necessary. In our hospital at Kolar there was no X-ray machine for six months. Inspite of my best efforts having approached the Minister, I was not able to get the machine repaired for nearly six months. For this, either there should be a permanent machine or departmental arrangement to repair these machines whenever they go out of order. If that is done the inconvenience to the public will not be there.

I have got another suggestion that qualified doctors. viz. with post graduate qualification are posted to village hospitals where they could hardly show their ability and function. They will not be having necessary equipments in village hospita's, A few days back, a doctor who is possessed with higher degree and qualification has been posted to a single doctor hospital in a village, far away from Kolar. If such transfer is done, his knowledge will be wasted and cannot utilise fully,. Then I had to interfere and get the doctor re-transferred.

Further, there is an expansion programme of Kolar hospital since five years. It is budgeted for the last five years. I don't know why this is being postponed every year. Originally the estimate was for Rs. 15 lakhs. Now the estimate has gone to 33 lakhs. It still continues to be on paper only. This was the assurance given on the floor of the House.

Therefore, I request that the work should at least commence from this year. I appeal to the Minister to take up this work in view of the urgency. He has personally seen the congestion in the hospital.

Another one suggestion I want to make is this. In the Sanitorium near Bangalore certain doctors were transferred on complaints. I would request the Minister to give effect to those transfers in the interest of the hospital. With these words, I thank the Chair and conclude.

† ಶ್ರೀ ಮೈಕೇಲ್ ಬಿ. ಫರ್ನಾಂಡೀಸ್ (ಭಾರತೀನಗರ). - ಮಾನ್ಯ ಅಧ್ಯಕ್ಷರೇ, ನನಗೆ ಕಾಲದ ಅಭಾವವಿರುವುದರಿಂದ ಕೇವಲ ಎರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಯನ್ನು ವಿರೋಧಿಸುವುದಕ್ಕೆ ಒಂದೆರಡು ಕಾರಣಗಳನ್ನು ಕೊಡುತ್ತೇನೆ. ಅವರೇ ಒದಗಿಸಿರತಕ್ಕ ವಾರ್ಷಿಕ ವರದಿಯ ೮ನೇ ಪುಟದಲ್ಲಿ ಇನ್‌ಸ್ಟಿಟ್ಯೂಷನ್ಸ್ ಪಾಪ್ಯುಲೇಷನ್ ರೇಷಿಯೋ ಕೊಟ್ಟಿದ್ದಾರೆ. ಅದರ ಪ್ರಕಾರ ೧೯೭೧ನೇ ಇಸವಿಯಿಂದ ೧೯೭೮ನೇ ಇಸವಿಯ ವರೆಗೆ ಅಂದರೆ ೭ ವರ್ಷಗಳಲ್ಲಿ ಜಾಸ್ತಿಯಾಗಬೇಕಾದದ್ದು ಶೇಕಡ ೧೪ ಕಡಿಮೆಯಾಗಿದೆ. ಇದಕ್ಕೆ ಕಾರಣ ನಮ್ಮ ಪ್ಲಾನ್ ಸರಿಯಾಗಿ ಇಲ್ಲದೇ ಇರುವುದು ಎಂದು ತಿಳಿದುಕೊಂಡಿದ್ದೇನೆ. ಜನಸಂಖ್ಯೆಯ ಆಧಾರದ ಮೇಲೆ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಹಾಕತಕ್ಕ ಪದ್ಧತಿಯನ್ನು ರೂಢಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಎಲ್ಲಿ ಜನಸಂಖ್ಯೆ ಪ್ರಮಾಣ ಜಾಸ್ತಿಯಿರುತ್ತದೆಯೋ ಅಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆ ಹಾಸಿಗೆಗಳನ್ನು ಹಾಕಬೇಕಾಗುತ್ತದೆಂದು ಹೇಳುತ್ತೇನೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗತಕ್ಕವರು ತೀರಾ ಬಡವರು, ಇವರ ಮೇಲೆ ೨೫ ಪೈಸೆ ಹಾಕುತ್ತಿದ್ದೀರಿ, ಇದನ್ನು ದಯವಿಟ್ಟು ರದ್ದು ಮಾಡಬೇಕೆಂದು ಹೇಳುತ್ತೇನೆ. ಡಯಾಲಿಸಿಸ್ ಬಗ್ಗೆ ಇತ್ತೀಚೆಗೆ ಲೋಕಮಾನ್ಯ ಜಯಪ್ರಕಾಶ್ ನಾರಾಯಣ್‌ರವರಿಗೆ ಟ್ರೀಟ್‌ಮೆಂಟ್ ಕೊಟ್ಟನಂತರ ಅದರ ಅವಶ್ಯಕತೆ ಬಗ್ಗೆ ಅನೇಕರು ತಿಳಿದುಕೊಂಡಿದ್ದಾರೆ. ಜಿಲ್ಲಾ ಕೇಂದ್ರಗಳಲ್ಲಿಯೂ ಇದರ ಒಂದು ಚಿಕಿತ್ಸೆಗೆ ಪ್ರಿಯಾರಿಟಿ ಕೊಡಬೇಕೆಂದು ಕೇಳುತ್ತೇನೆ.

ಆಹಾರ ಕಲಬೆರಕೆಯಿಂದ ಸಾರ್ವಜನಿಕರ ಆರೋಗ್ಯ ಹಾಳಾಗುತ್ತಿದೆ. ಈ ದಿಸೆಯಲ್ಲಿ ಸಿಟಿಜನ್ಸ್ ಕಮಿಟಿ ಮಾಡಿ, ಕನ್ಸೂಮರ್ಸ್ ರೆಸಿಸ್ಟೆನ್ಸ್ ಮೂವ್‌ಮೆಂಟ್‌ನಿಂದ ಇದನ್ನು ನಿವಾರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹಳ್ಳಿಗಳಿಗೆ ಡಾಕ್ಟರುಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಿ. ಅವರು ಹಳ್ಳಿಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಒಂದು ಸಲಹೆ ಏನೆಂದರೆ ಹಳ್ಳಿಗಳಲ್ಲಿಯೇ ಇರತಕ್ಕ ಡಾಕ್ಟರುಗಳಿಗೆ ಅಲ್ಲಿಯೇ ವಿದ್ಯಾಭ್ಯಾಸ ಕೊಟ್ಟು ಅವರುಗಳು ಸಿಟಿಗಳಿಗೆ ಬರದಂತೆ ಉಳಿಸಿಕೊಂಡರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಮತ್ತೆ ದಾದಿಯರನ್ನು ಯದ್ವಾತದ್ವಾ ವರ್ಗಾವಣೆ ಮಾಡತಕ್ಕದ್ದು ಸರಿಯಾದ ಪದ್ಧತಿಯಲ್ಲ. ಸುಮಾರು ೪೦೦–೫೦೦ ಮೈಲಿಗಳ ದೂರ ದಾದಿಯರನ್ನು ವರ್ಗಾವಣೆ ಮಾಡುತ್ತಾರೆ. ಮದುವೆಯಾಗಿರತಕ್ಕ ದಾದಿಯರನ್ನೂ ಕೂಡ ದೂರ ದೂರದ ಊರುಗಳಿಗೆ ವರ್ಗಾವಣೆ ಮಾಡಿ ಅವರಿಗೆ ತೊಂದರೆ ಕೊಡುತ್ತೀರಿ ಈ ರೀತಿ ಆದರೆ ಅವರಿಂದ ನೀವು ಉತ್ತಮ ಮಟ್ಟದಲ್ಲಿ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ? ದಯವಿಟ್ಟು ವರ್ಗಾವಣೆ ಮಾಡುವುದನ್ನು ಕೈಬಿಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

SRI B. B. SAYANAK (Belgaum).—Mr. Speaker, Sir, I have got a very short time at my disposal. In Belgaum, Civil hospital for three months, the Operation Theatre was stopped. Only emergency operations are done. Why was the District Hospital Operation Theatre closed for three months ? The Hon. Minister must take immediate action. Five deep x-ray machines were bought; out of five one is in good condition and four are out of order. Deep x-ray machine costs one lakh of rupees. The x-ray machine in Belgaum was not in order for eight months. I had gone to the Bowring Hospital and asked them about the x-ray films. They said that there is no shortage of x-ray films. Why is no action taken in respect of Belgaum Civil Hospital in this behalf ? Even medicines are not available. The building is there. What is the use of the building ? Even in the Legislators' Home there is no medicine. I have complained several times that medicines are not available. When that is the case in respect of Legislators, what would be the condition of the ordinary people ? What about the condition of the poor people ? In Belgaum more than 50 per cent of the patients are Marathi-knowing people but only Kannada-knowing nurses are appointed. Please appoint nurses who know both Marathi and Kannada. The doctors of the ESI Hospitals know only Kannada. You know the people of Belgaum know only Marathi. You have got so many Marathi-knowing doctors. Appoint them. I thank the Chair for giving me an opportunity to speak.

ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ).—ಅಧ್ಯಕ್ಷರೆ, ನಾನು ಈ ಬೇಡಿಕೆ ಬಗ್ಗೆ ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಎರಡು ಮೂರು ಸ್ಪಷ್ಟೀಕರಣಗಳನ್ನು ಮಾತ್ರ ಕೇಳಲಿಕ್ಕೆ ಇಷ್ಟಪಡುತ್ತೇನೆ ಸ್ವಾಮಿ, ಈಗ ಡೆಂಟಲ್ ಡಿಪಾರ್ಟ್‌ಮೆಂಟಿಗೆ ಏನೇನು ಔಷಧಿಗಳನ್ನು ಕಳುಹಿಸುತ್ತಿದ್ದಾರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ತಿಳಿದುಕೊಂಡಿದ್ದರೆ ದಯಮಾಡಿ ತಿಳಿಸಬೇಕು. ಈಗ ಒಂದು ಸಾರಿ ಅಲ್ಲಿ ಇದು ಎರಡು ಸಾವಿರ ರೂಪಾಯಿಯ ಕಿಟ್ ಎಂದು ಹೇಳಿದರು. ಅದರಲ್ಲಿ ಬರೀ ಬ್ಯಾಂಡೇಜ್ ಮತ್ತು ಟಿಂಚರ್ ಇತ್ತು. ಹಲ್ಲಿನ ಡಿಪಾರ್ಟ್‌ಮೆಂಟಿಗೂ ಈ ಬ್ಯಾಂಡೇಜ್ ಮತ್ತು ಟಿಂಚರ್‌ಗೂ ಏನು ಸಂಬಂಧ? ಈ ಮೆಟೀರಿಯಲ್ ಎಲ್ಲಾ ಯಾರು ಕಳುಹಿಸಿದ್ದು ಇದರ ಬಗ್ಗೆ ಪತ್ತೆ ಮಾಡಲಿಕ್ಕೆ ಸಾಧ್ಯವೇ? ಇದಕ್ಕೆ ಕಾರಣರು ಯಾರು ಎಂದು ಹೇಳಬೇಕು. ಇವೊತ್ತು ತಿರುಪತಿಗೆ ಹೋದರೆ ಅಲ್ಲಿ ಪೂಜೆ ಮಾಡಲಿಕ್ಕೆ ಒಂದೊಂದು ಪೂಜೆಗೆ ಇಷ್ಟಿಷ್ಟು ದಕ್ಷಿಣೆ ಎಂದು ಇದೆ. ಇವೊತ್ತು ತುಮಕೂರಿನಲ್ಲಿರತಕ್ಕ ಡಾಕ್ಟರ್ಸ್ ಒಂದು ವಾರಕ್ಕೆ ಒಂದು ಸಾರಿ ದರ್ಶನ ಕೊಡುತ್ತಾರೆ. ಬಡವರು ಅವರನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಇದನ್ನು ಅಲ್ಲಿಗೆ ಹೋಗಿ ಬರತಕ್ಕ ಜನರೇ ನಮ್ಮ ಬಳಿ ಬಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ತಾವು ಆಸ್ಪತ್ರೆಗೆ ಹೋಗಿದ್ದರೆ ಚೆನ್ನಾಗಿತ್ತು.

ಶ್ರೀ ಜಿ. ಎಸ್. ಶಿವನಂಜಪ್ಪ.—ದೇವರು ನನಗೆ ಕಾಯಿಲೆ ಕೊಡುವುದು ಬೇಡ. ಅಲ್ಲಿ ಜನರು ಏನು ಹೇಳುತ್ತಿದ್ದಾರೆ ಅಂದರೆ ಇವೊತ್ತು ನಾವು ಧರ್ಮದರ್ಶನಕ್ಕೆ ಹೋಗಿದ್ದೆವು ಎಂದು ಹೇಳುವುದು ನಡೆಯುತ್ತಿದೆ. ಈ ತರಹ ಸಿಸ್ಟಂ ತಪ್ಪಿಸಿ ಮೊಬೈಲ್ ಹಾಸ್ಪಿಟಲ್ ಬೇಕು ಎಂದು ಜನರು ಕೇಳುತ್ತಾ ಇದ್ದಾರೆ, ಆದುದರಿಂದ ಅದನ್ನು ಖಂಡಿತ ಮಾಡಿಕೊಡಬೇಕು. ಇವೊತ್ತು ಪಶುವೈದ್ಯ ಶಾಲೆ ಡಾಕ್ಟರ್ ಮೊಬೈಲ್ ಆಸ್ಪತ್ರೆ ಮಾಡಿದ್ದಾರೆ. ಈ ತರಹ ಸ್ಪೆಷಲ್ ಡಾಕ್ಟರ್ಸ್ ಹಳ್ಳಿಗಳ ಕಡೆ ಕಳುಹಿಸಿದರೆ ಹಳ್ಳಿಗಳಲ್ಲಿರತಕ್ಕ ಕಾಯಿಲೆ ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಮೊನ್ನೆ ಜನರಲ್ ಆಸ್ಪತ್ರೆಯಲ್ಲಿ ಇಂಜೆಕ್ಷನ್ ಕೊಡಲಿಕ್ಕೆ ಹೋದರೆ ಸೂಜಿಯೇ ಬೆಂಡ್ ಆಗಿ ಹೋಯಿತು. ಇದನ್ನೆಲ್ಲಾ ಯಾರು ಇಂಡೆಂಟ್ ಮಾಡಿದ್ದು, ಎಲ್ಲಿಗೆ ಇಂಡೆಂಟ್ ಮಾಡಿದ್ದು ಇದು ಯಾವರೀತಿ ಆಯಿತು ಕೃಪೆಮಾಡಿ ಉತ್ತರ ಕೊಡಬೇಕು. ಏಕೆಂದರೆ ಕೊನೆಗೆ ಯಾರ ಹತ್ತಿರವೋ ತರಿಸಿ ಇಂಜೆಕ್ಷನ್ ಕೊಡಬೇಕಾಯಿತು. ತುಮಕೂರು ಹೆಡ್‌ಕ್ವಾರ್ಟರ್ಸ್‌ನಲ್ಲೇ ಈ ರೀತಿ ಆದರೆ ಹಳ್ಳಿಗಳ ಪರಿಸ್ಥಿತಿ ಹೇಗೆ. ಇನ್ನು ಬಡವನ ಹಳ್ಳಿಗೆ ಆಸ್ಪತ್ರೆ ಬೇಕೆಂದು ಕೇಳಿಕೊಂಡಿದ್ದೆ. ಇದುವರೆಗೂ ರಿಪ್ಲೈ ಬಂದಿಲ್ಲ. ಸರ್ಕಾರದಲ್ಲಿ ಮುಖ್ಯಮಂತ್ರಿಗಳವರಿಂದ ಏನಾದರೂ ರಿಪ್ಲೈ ಬರುತ್ತದೆಯೇ ಹೊರತು ಬೇರೆ ಮಂತ್ರಿಗಳಿಂದ ಉತ್ತರ ಬರುವುದಿಲ್ಲ. ಈಗ ಯಾರೋ ದಾನಿಗಳು ೩೫ ಸಾವಿರ ರೂಪಾಯಿ ಕೊಡುತ್ತೇವೆಂದು ಬಂದಿದ್ದಾರೆ ಅದನ್ನು ಉಪಯೋಗಿಸಿಕೊಳ್ಳಿ. ಇದರಲ್ಲಿ ನಿಮಗೆ ಏನು ತೊಂದರೆ ಇದೆ ಎಂದು ಹೇಳಬೇಕು. ಇನ್ನು ನನ್ನ ಕ್ಷೇತ್ರದ ಸಿದ್ಧರ ಬೆಟ್ಟದಲ್ಲಿ ವಿಧಾನಸೌಧ ಕಟ್ಟಡಕ್ಕೆ ಕಾರಣರಾದ ಹನುಮಂತಯ್ಯನವರು ಇದ್ದು ತಮ್ಮ ಖಾಯಿಲೆಯನ್ನು ಗುಣಪಡಿಸಿಕೊಂಡು ಬಂದಿದ್ದಾರೆ. ಅಲ್ಲಿ ಒಳ್ಳೆಯ ಗಿಡ ಮೂಲಿಕೆಗಳು ಸಿಕ್ಕುತ್ತದೆ. ಅಲ್ಲಿ ಆಯುರ್ವೇದಿಕ ಆಸ್ಪತ್ರೆ ಮಾಡಬೇಕೆಂದು ಹೇಳಿ, ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—The House now adjourns to meet 1 P.M. tomorrow.

The House now adjourned at Ten Minutes past Six of the Clock to meet at One of the Clock on Thursday the 10th May 1979.